ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 40

ಅಕ್ಟೋಬರ್ 5, 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org







ಗುಲಬರ್ಗಾದಲ್ಲಿ ಸಭೆ :

ನಿರೀಕ್ಷೆ ಸುಳ್ಳು ಮಾಡಿದ ಸಂಪುಟ

ಅಣು ಒಪ್ಪಂದ : ಮನಮೋಹನ್ ಗೋಗರೆತ

ಆರ್ಥಿಕ ಸುಧಾರಣೆ ಎಂಬ ಬಡಬಡಿಕೆ



ಮಂಗಳೂರು : ಇಲ್ಲಿ ಪೊಲೀಸರು, ಪತ್ರಕರ್ತರು ಭಜರಂಗದ 'ಬಿ' ಟೀಂ

ಖೈರ್ಲಾಂಜಿ ತೀರ್ಪು : ಅಪೂರ್ಣ ನ್ಯಾಯ !

ನಾನಾವತಿ ವರದಿ : ಹಲವು ಅನುಮಾನಗಳು

ಸಾಮ್ರಾಜ್ಯಶಾಹಿ ಮತ್ತು ಅಂತರಾಷ್ಟ್ರೀಯ ಭಯೋತ್ಪಾದನೆ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಮ್ರಾಜ್ಯಶಾಹಿ ಅಮೆರಿಕವು ಜಗತ್ತಿನ ವಿವಿಧ ದೇಶಗಳಲ್ಲಿ ಎಸಗಿದ ಭಯೋತ್ಪಾದನೆಯ ವಿರಾಟ್‌ಸ್ವರೂಪವನ್ನು ಸ್ಥೂಲವಾಗಿ ಗಮನಿಸುವುದು ಈ ಲೇಖನದ ವಸ್ತು.

ಕಳೆದ ವಾರದಿಂದ

1954 - ಗ್ವಾಟಿಮಾಲ:

ಜಾಕೊಬ್ ಅರ್ಬೆನ್ಸ್‌ರ ಸರಕಾರವು ಗ್ವಾಟಿಮಾಲದ ಮೊದಲ ಚುನಾಯಿತ ಸರಕಾರವಾಗಿತ್ತು. ಅದು ತನ್ನ ದೇಶದಲ್ಲಿ ನೂರಾರು ಜನಹಿತ ಕಾರ್ಯಗಳನ್ನು ಕೈಗೊಂಡಿತ್ತು. ಆದರೆ ಅಲ್ಲಿ ಶೇಕಡಾ 75ರಷ್ಟು ಭೂಭಾಗವು ಅಮೇರಿಕಾದ ಬಹುರಾಷ್ಟ್ರೀಯ ನಿಗಮಗಳ ಕೈಯಲ್ಲಿತ್ತು. ಅವುಗಳನ್ನು ಅರ್ಬೆನ್ಸ್ ರಾಷ್ಟ್ರೀಕರಿಸಿದರು. ಅದನ್ನು ಸಹಿಸದ ಅಮೇರಿಕಾ ಸಶಸ್ತ್ರ ಆಕ್ರಮಣ ಮಾಡಿತು. ಈ ದಿಕ್ಕಿನಲ್ಲಿ ಅಮೇರಿಕಾ ಒಟ್ಟು ನಲವತ್ತು ಪ್ರಯತ್ನಗಳನ್ನು ಮಾಡಿತ್ತು. ಅತ್ಯಂತ ಹೇಯ ಮಾರ್ಗಗಳಿಂದ ಅರ್ಬೆನ್ಸ್ ಸರಕಾರವನ್ನು ಪದಚ್ಯುತಗೊಳಿಸಿತು. ಆ ನಂತರ ಗ್ವಾಟಿಮಾಲದ ಹಣ್ಣಿನ ಬೋರ್ಡಿಗೆ ಸಿ.ಐ.ಎ. ಮುಖ್ಯಸ್ಥ ಬಿಡೆಲ್ ಸ್ಮಿತ್ ಅವರನ್ನು ಸದಸ್ಯರನ್ನಾಗಿಯೂ ಸಿ.ಐ.ಎ. ನಿರ್ದೇಶಕ ಅಲೆನ್ ಡಲ್ಲಸ್‌ರನ್ನು ಅಧ್ಯಕ್ಷರನ್ನಾಗಿಯೂ ನಿಯಮಿಸಲಾಯಿತು.

1955 - ಕೋಸ್ಟೋರಿಕಾ:

ಮಾಜಿ ಅಧ್ಯಕ್ಷ ಪಿಕಾಡೋವಿನ ಹಿಂಬಾಲಕರು ಅಮೇರಿಕಾದಲ್ಲಿ ತರಬೇತಿ ಪಡೆದು, ಅಮೇರಿಕಾದ ಶಸ್ತ್ರಾಸ್ತ್ರಗಳ ಸಹಾಯದಿಂದ ಕೋಸ್ಟೋರಿಕಾವನ್ನು ಆಕ್ರಮಿಸಿಕೊಂಡರು.

1958: ಲೆಬನಾನ್-ಇಂಡೋನೇಶ್ಯಾ

14,000 ಸೇನಾ ಬಲದೊಂದಿಗೆ ಅಮೇರಿಕಾದ 6 ನೆಯ ನೌಕಾಪಡೆ ಲೆಬನಾನ್‌ನಲ್ಲಿ ತಳವೂರಿತು. ಅಲ್ಲಿ ನಡೆಯುತ್ತಿದ್ದ ಜನಾಂದೋಲನವನ್ನು ಹತ್ತಿಕ್ಕಿತು. ಅದೇ ಕಾಲಕ್ಕೆ ಸಿ.ಐ.ಎ. ಇಂಡೋನೇಶ್ಯಾದಲ್ಲಿ ಸರಕಾರವನ್ನು ಉರುಳಿಸಿ ಮಿಲಿಟರಿ ಆಡಳಿತವನ್ನು ಸ್ಥಾಪಿಸಲು ಪ್ರಯತ್ನಿಸಿತು.

1961: ಕ್ಯೂಬಾ

ಫ್ಲೋರಿಡಾದಲ್ಲಿ ತರಬೇತಿ ಹೊಂದಿದ 1,500 ಕ್ಯೂಬಾದ ಪ್ರತಿ ಕ್ರಾಂತಿಕಾರಿಗಳು ಕ್ಯೂಬಾದ ಕಾಕಿನಾಸ್ ಕೊಲ್ಲಿಯಲ್ಲಿ ತಳವೂರಿದರು. ಅಮೇರಿಕಾದ 80 ಯುದ್ಧ ವಿಮಾನಗಳೂ, 35 ಯುದ್ಧ ಹಡಗುಗಳೂ ಅವರ ಮೇಲೆ ಆಕ್ರಮಣ ನಡೆಸಿತು.

1963:

ದಕ್ಷಿಣ ವಿಯೆಟ್ನಾಂನ ಗೊಡನ್ ಡಿಯಾಮ ಸ್ವತಃ ಅಮೇರಿಕಾದ ಕೈಗೊಂಬೆಯಾಗಿದ್ದರೂ ಆತ ಅಮೇರಿಕಾದ ಕೆಲವೊಂದು ಹಿತಾಸಕ್ತಿಗಳಿಗೆ ಧಕ್ಕೆಯೆನಿಸುತ್ತಲೆ ಅವನ ವಿರುದ್ಧ ಪ್ರತಿಕ್ರಾಂತಿಗೆ ಪ್ರಚೋದನೆ ನೀಡಲಾಯಿತು.

1964-73:

ವಿಯೆಟ್ನಾಂನ ಮೇಲೆ ಅಮೇರಿಕಾ ಬಾಂಬುಗಳ ಸುರಿಮಳೆಗರೆಯಿತು. ಈ ಮೊದಲೇ ವಿಯೆಟ್ನಾಂ ಎರಡನೆಯ ಮಹಾಯುದ್ಧದ ಕಾಲದಲ್ಲಿ ಧ್ವಂಸವಾಗಿತ್ತು. ಜಗತ್ತಿನ ಯಾವ ರಾಷ್ಟ್ರದ ಮಾತಿಗೂ ಕಿವಿಗೊಡದೆ, ಎಲ್ಲ ಅಂತಾರಾಷ್ಟ್ರೀಯ ನಿಯಮಗಳನ್ನು ಗಾಳಿಗೆ ತೂರಿ ಅಮೇರಿಕಾ ತನ್ನ ದೇಶದಿಂದ ನೂರಾರು ಮೈಲುಗಳ ದೂರದಲ್ಲಿರುವ ಪುಟ್ಟ ವಿಯೆಟ್ನಾಂನ ಮೇಲೆ ಅತ್ಯಂತ ಹೀನಾಯವಾದ, ಹಿಂಸಾತ್ಮಕವಾದ ಯುದ್ಧ ಸಾರಿತು. ಹಿರೋಶಿಮಾದ ಮೇಲೆ ಎಸೆದ ಬಾಂಬಿಗಿಂತ ನೂರಾರು ಪಟ್ಟು ಗುರುತರವಾದ ಶಕ್ತಿಶಾಲಿಯಾದ 8 ಮಿಲಿಯ ಟನ್ನುಗಳಷ್ಟು ಬಾಂಬುಗಳನ್ನು ಸುರಿಸಿತು. ಪಟ್ಟಣಗಳು, ಸಾವಿರಾರು ಹಳ್ಳಿಗಳು, ಔದ್ಯೋಗಿಕ ಕೇಂದ್ರಗಳು, ಆಸ್ಪತ್ರೆಗಳು, ಶಾಲೆಗಳು - ಒಂದನ್ನೂ ಬಿಡದೆ ಮಣ್ಣುಗೂಡಿಸಿತು. 13,000 ಚದರ ವಿಸ್ತೀರ್ಣದ ದಕ್ಷಿಣ ವಿಯೆಟ್ನಾಂನ ಮೇಲೆ 75,000 ಮಿಲಿಯ ಲೀಟರುಗಳಷ್ಟು ಭಯಾನಕ ವಿಷವನ್ನು ಸುರಿಸಿತು. ಇದರಿಂದಾಗಿ ಮನುಷ್ಯರು ಮಾತ್ರವಲ್ಲ, ಕೋಟಿಗಟ್ಟಲೆ ಜಾನುವಾರುಗಳು, ಅಪೂರ್ವವಾದ ಪ್ರಾಣಿಪಕ್ಷಿಗಳು ನಾಶಹೊಂದಿದವು. ಪ್ರಕೃತಿಯ ಗತಿಯಲ್ಲಿಯೇ ವಿಕೃತವಾದ ಪರಿಣಾಮಗಳುಂಟಾದವು. ಪ್ರಾಯಃ ಭಾರತದ ಗರುಡ



ಪುರಾಣದಲ್ಲಿ ಯಮನು ಕೊಡುವ ಶಿಕ್ಷೆಗೆ ಎಷ್ಟು ಕೋಟಿಯಿಂದ ಗುಣಿಸಿದರೂ ಈ ತೆರನಾದ ಮಾನವ ಹಿಂಸೆ, ದ್ರೋಹಕ್ಕೆ ಅದು ಎಣೆಯಾಗಲಾರದು.

ಇದೇ ಸಂದರ್ಭದಲ್ಲಿ ಇಂಡೋಚೈನಾದ ದೇಶಗಳಾದ ಲಾವೋಸ್ ಮತ್ತು ಕಾಂಬೋಡಿಯಾಗಳ ಮೇಲೂ ಅಮೆರಿಕಾ ಆಕ್ರಮಣ ನಡೆಸಿತು. ಅತೀ ಭಯಾನಕವಾದ ವಿಷ 'ಎಜೆಂಟ್ ಆರೆಂಜ್'ನ್ನು ಸಿಂಪಡಿಸಿತು. ಮುಗ್ಧ ಜನರೊಂದಿಗೆ ಸಾವಿರಾರು ಎಕರೆಗಳಷ್ಟು ಅರಣ್ಯ ಪ್ರದೇಶವೂ ಶಾಶ್ವತವಾಗಿ ನಾಶಹೊಂದಿತು.

1965 :

40,000 ಸಂಖ್ಯೆಯ ಅಮೇರಿಕಾದ ಸೈನ್ಯ ಪಡೆ ಡೊಮೆನಿಕನ್ ರಿಪಬ್ಲಿಕ್‌ನ್ನು ಆಕ್ರಮಿಸಿತು. ಈ ಸೇನೆಗೆ ಬೆಂಗಾವಲಾಗಿ 275 ಯುದ್ಧ ವಿಮಾನಗಳು ಮತ್ತು 40 ಯುದ್ಧ ಹಡಗುಗಳನ್ನು ಉಪಯೋಗಿಸಲಾಯಿತು. ಈ ಆಕ್ರಮಣದಲ್ಲಿ ಸಾವಿರಾರು ಡೊಮೆನಿಕನ್ ಪ್ರಜೆಗಳು ಮೃತರಾದರು.

1965 - ಅರ್ಜೆಂಟೈನಾ:

ಅಮೇರಿಕಾದ ತೈಲ ಕಂಪೆನಿಗಳು ಮಾಡುವ ಹಗಲು ದರೋಡೆಯನ್ನು ತಡೆಗಟ್ಟಲು ಪ್ರಯತ್ನಿಸಿದ ಅರ್ಜೆಂಟೈನಾ ಸರಕಾರವನ್ನು ಪದಚ್ಯುತಗೊಳಿಸಲು ಸಂಚು ಹೂಡಲಾಯಿತು.

1967 - ಬೊಲಿವಿಯಾ :

ಅಮೇರಿಕಾದಲ್ಲಿ ತರಬೇತಿ ಹೊಂದಿದ ಪ್ರತಿಕ್ರಾಂತಿಕಾರಿಗಳು ಅಮೇರಿಕಾದ ಸೈನ್ಯ ಬಲದಿಂದ ಬೊಲಿವಿಯಾದ ವಿಶ್ವವಿಖ್ಯಾತ ಕ್ರಾಂತಿಕಾರಿ ಅರ್ನೆಸ್ಟ್ ಚೆಗುವೆರಾ ನೇತೃತ್ವದ ಗೆರಿಲ್ಲಾ ಪಡೆಗಳನ್ನು ನಾಶಪಡಿಸಿತು. ಚೆಗುವೆರಾರನ್ನು ನಿರ್ದಯವಾಗಿ ಕೊಲ್ಲಲಾಯಿತು.

1970 - 75 :

ಕಾಂಬೋಡಿಯಾದಲ್ಲಿ ಅಮೇರಿಕಾದ ಕೈಗೊಂಬೆಯಾದ ಪ್ರತಿಗಾಮಿ ಸರ್ವಾಧಿಕಾರಿ ಸರಕಾರವಿತ್ತು. ಅದರ ವಿರುದ್ಧ ಬುಗಿಲೆದ್ದ ಜನಕ್ರಾಂತಿಯ ಅಲೆಯನ್ನು ಅಮೇರಿಕಾ 70,000 ಸೈನ್ಯಬಲ, 500 ಯುದ್ಧ ವಿಮಾನ ಮತ್ತು 40 ಯುದ್ಧ ಹಡಗುಗಳಿಂದ ಸದೆಬಡಿಯಿತು. ಇದರಿಂದಾದ ಜನಹಾನಿ, ಜೀವಹಾನಿ ಎಷ್ಟೆಂದು ಊಹಿಸಲಸಾಧ್ಯ.

1973 - ಚಿಲಿ:

ಸಾಲವೊಡಾರೋ ಅಲಿಂಡೆಯು ಚಿಲಿಯ ಚುನಾಯಿತ ಜನಪ್ರಿಯ ನಾಯಕ. ಸಿ.ಐ.ಎ. ಆತನಿಗೆ ವಿರುದ್ಧವಾಗಿ ಸರ್ವಾಧಿಕಾರಿ ಪಿನೊಚೆಟ್‌ರನ್ನು ಬೆಂಬಲಿಸಿತು. 1963 ರಿಂದಲೆ ಸಿ.ಐ.ಐ. ನಾನಾ ಒಳಸಂಚುಗಳನ್ನು ಹೂಡಿತು. ಅದಾಗ್ಯೂ ಜನ ಅಲಿಂಡೆಯ ನೇತೃತ್ವದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಹೋರಾಡಿತು. ಆದರೆ ಅಮೆರಿಕಾದ ಬಹುರಾಷ್ಟ್ರೀಯ ಕಂಪೆನಿಗಳು ಅಕ್ಟೋಪಸ್‌ನಂತೆ ಚಿಲಿಯನ್ನು ಆಕ್ರಮಿಸಿತು. ಅದು ಸಿ.ಐ.ಎ. ಮೂಲಕ 62 - 64 ರಲ್ಲಿ 4 ಮಿಲಿಯ ಡಾಲರುಗಳನ್ನು ಬುಡಮೇಲು ಕೃತ್ಯಗಳಿಗಾಗಿಯೆ ಬಳಸಿತು. 65 ರಿಂದ 70ರ ಅವಧಿಯಲ್ಲಿ 5.5 ಮಿಲಿಯ ಡಾಲರುಗಳನ್ನು ಪ್ರತ್ಯಕ್ಷವಾಗಿ ವ್ಯಯಿಸಿತು. (ಅಪ್ರತ್ಯಕ್ಷವೂ ಗಣನೀಯ) ಭಯೋತ್ಪಾದನಾ ಚಟುವಟಿಕೆಗಳಿಂದ ಸಹಸ್ರಾರು ಜನರು ಪ್ರಾಣತೆತ್ತರು. ಕೊನೆಗೆ 1970 ನವಂಬರ್ 3 ರಂದು ಅಲಿಂಡೆಯುವರು ಅಧ್ಯಕ್ಷರಾಗಿ ಆಯ್ಕೆಯಾದರು. ಆದರೆ ಸೆಪ್ಟಂಬರ್ 11 ರಂದು ನಿಗೂಢ ಒಳಸಂಚು ನಡೆಸಿ ಪ್ರೆಸಿಡೆಂಟ್ ಅಲಿಂಡೆಯವರನ್ನು ಹದಿಮೂರು ಬಾರಿ ಗುಂಡಿಕ್ಕಿ ಕೊಂದು ಹಾಕಿದರು.



ಚಿಲಿಯ 35 ವರ್ಷದ ವಿಕ್ಟರ್ ಜಾರಾ ಕ್ರಾಂತಿಗೀತೆಗಳನ್ನು ಹಾಡುವ ಅಸಾಮಾನ್ಯ ಗಾಯಕ. ಆಶುಕವಿ. ಆದರೆ ಜನತೆಯ ಗಾಯಕನಾದ ಆತ ಬಂದೂಕಿನ ನೆರಳಿನಲ್ಲಿಯೆ ಕವಿತೆಯನ್ನು ರಚಿಸಿ ಹಾಡಿದ. ಆದರೆ ಸ್ಟೇಡಿಯಂನಲ್ಲಿ ಹಾಡುತ್ತಿದ್ದಂತೆ ಆತ ಅಮೆರಿಕನ್ ಹುಚ್ಚು ನಾಯಿಗಳ ಗುಂಡೇಟಿಗೆ ಬಲಿಯಾದ

1971 - ಲಿಬಿಯಾ :

ಬ್ರಿಟಿಷ್ ಸೇನೆ ಲಿಬಿಯಾದಿಂದ ಕಾಲ್ತೆಗೆಯುತ್ತಲೆ ಅಮೆರಿಕಾ ಲಿಬಿಯಾದ ವಿರುದ್ಧ ಬುಡಮೇಲು ಕೃತ್ಯಗಳನ್ನು ಆರಂಭಿಸಿತು. ಅಮೆರಿಕಾಕ್ಕೆ ಲಿಬಿಯಾದ ತೈಲ ನಿಕ್ಷೇಪದ ಮೇಲೆ ಕಣ್ಣು. 1975 ರಲ್ಲಿ ಲಿಬಿಯಾದ ಮೇಲೆ ಆರ್ಥಿಕ ದಿಗ್ಬಂಧನ ಹೇರಲಾಯಿತು. 1979 ರಲ್ಲಿ ಅಮೆರಿಕಾ ಲಿಬಿಯಾವನ್ನು ಅಂತರಾಷ್ಟ್ರೀಯ ಭಯೋತ್ಪಾಧನೆಯ ಪ್ರಚೋದಕನೆಂದು ಬ್ರಾಂಡ್ ಮಾಡಿತು. ರಾಜಧಾನಿ ಟ್ರಿಪೋಲಿಯ ಮೇಲೆ ಬಾಂಬ್ ಮಳೆಗರೆಯಲಾಯಿತು. ಲಿಬಿಯಾದ ಅಧ್ಯಕ್ಷ ಗಡ್ಡಾಫಿಯವರ 18 ತಿಂಗಳ ಮಗಳು ಕೊಲೆಯಾದಳು. ಲಿಬಿಯಾದ ಕಡಲ ತೀರದಲ್ಲಿ ಬೀಡುಬಿಟ್ಟ ಅಮೆರಿಕಾದ ಸೇನಾಪಡೆಯು ಇರಾನ್ ತನಕ ಅಘೋಷಿತ ಯುದ್ಧವನ್ನು ಮಾಡುತ್ತಲೇ ಇತ್ತು. ಇತ್ತೀಚೆಗೆ ಲಾಕರ್‌ಬೀ ಪ್ರಕರಣವನ್ನೆತ್ತಿಕೊಂಡು ಇಡೀ ಜಗತ್ತೇ ಲಿಬಿಯಾಕ್ಕೆ ದಿಗ್ಬಂಧನ ಹೇರಬೇಕೆಂಬ ಯು.ಎನ್. ನಿರ್ಣಯ ಕೂಡಾ ಅದೇ ಹಳೆಯ ಸರ್ಕಸ್‌ನ ಒಂದು ಮುಂದುವರಿದ ಭಾಗ - 'ಚಂಡಾಲ ಚೌಕಡಿ'ಯ ಹೊಸ ಸಂಚು.

1979 - ಎಲ್ ಸೆಲ್ವಡೋರ್:

ಸರ್ವಾಧಿಕಾರಿ ರೊಮೆರಿಯೊನ ಬಳಿ ಅಮೆರಿಕಾದ 'ಸ್ಪೆಶಲ್ ಸರ್ವಿಸ್' ಒಂದು ಮಿಲಿಟರಿ ಗ್ಯಾಂಗ್‌ನ್ನು ನಿಯಮಿಸಿತು. ಈ ದುಷ್ಟ ಕೂಟವು ದೇಶದಲ್ಲಿ ನಾಗರಿಕ ಯುದ್ಧವನ್ನು ಪ್ರಚೋದಿಸಿತು. ಈ ಆಡಳಿತಕೂಟಕ್ಕೆ ಇಡೀ ದೇಶದ ವಿರೋಧವಿದ್ದರೂ ಅದು ಇನ್ನೂ ಅಧಿಕಾರದಲ್ಲಿ ಉಳಿದಿದೆ. ಆದರೆ ಅಮೆರಿಕಾ ಹೇಳುವುದೇನು? ಎಲ್ ಸೆಲ್ವಡೋರ್‌ನಲ್ಲಿ ತನ್ನ ಗ್ಯಾಂಗ್ 'ಪ್ರಜಾಪ್ರಭುತ್ವದ ಮಾದರಿಯ ಸುಧಾರಣೆಗಳನ್ನು ತರುತ್ತಿದೆ.' ಆದರೆ ಈ ಸುಧಾರಣೆ ಐವತ್ತು ಸಾವಿರಕ್ಕೂ ಹೆಚ್ಚು ಅಮಾಯಕ ಜನರನ್ನು ಬಲಿತೆಗೆದುಕೊಂಡಿತ್ತು.

1980 - ಬೊಲಿವಿಯಾ:

ಲಿಡಿಯಾ ಗುಯೆಲ್ಲರ್ ಅವರ ಚುನಾಯಿತ ಸರಕಾರದ ವಿರುದ್ಧ ಮಿಲಿಟರಿ ದಂಗೆಯನ್ನು ಪ್ರಚೋದಿಸಲಾಯಿತು. ಇದರ ಹಿಂದೆ ಇದ್ದದ್ದೂ ಅಮೆರಿಕಾದ ಸಿ.ಐ.ಎ.ಯ ಮಾಫಿಯಾ ಗ್ಯಾಂಗ್.

ಇದೇ ಕಾಲದಲ್ಲಿ ಇರಾನಿನ ಆಡಳಿತದ ವಿರುದ್ಧವೂ ಸಶಸ್ತ್ರ ದಂಗೆಯನ್ನು ಪ್ರೋತ್ಸಾಹಿಸಲಾಯಿತು.

1981 - ಕ್ಯೂಬಾ:

ಅಮೆರಿಕಾವು ಕ್ಯೂಬಾದ ವಿರುದ್ಧ ಹೊಸಬಗೆಯ ನೌಕಾದಿಗ್ಬಂಧನವನ್ನು ಹೇರಿದುದಲ್ಲದೆ ಪ್ರಚೋದನಾತ್ಮಕ ಬಾಂಬೆಸತಗಳನ್ನು ಮಾಡಿತು.

ಪುಟ 15ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ನಿರೀಕ್ಷೆ ಸುಳ್ಳು ಮಾಡಿದ ಸಂಪುಟ

ಗುಲಬರ್ಗಾದಲ್ಲಿ ನಡೆದ ಸರ್ಕಾರದ ವಿಶೇಷ ಸಂಪುಟ ಸಭೆಯು ಸರ್ಕಾರ ಜನರಲ್ಲಿ ಹುಟ್ಟುಹಾಕಿದ್ದ ಬಹುನಿರೀಕ್ಷೆಗಳನ್ನು ಹುಸಿ ಮಾಡಿದೆ. ಹೈದ್ರಾಬಾದ್-ಕರ್ನಾಟಕದ ಅಭಿವೃದ್ಧಿಯ ಪ್ರಶ್ನೆಗಳತ್ತಲೇ ಈ ಸಭೆಯು ಗಮನ ಕೇಂದ್ರೀಕರಿಸಿ ಹಲವಾರು ಮಹತ್ತರ ಕಾರ್ಯಯೋಜನೆಗಳನ್ನು ಪ್ರಕಟಿಸುವುದಾಗಿ ಹೇಳಲಾಗಿತ್ತು. ಆದರೆ ಸಂಪುಟವು ಮೂಲಭೂತ ಪ್ರಶ್ನೆಗಳ ಪರಿಹಾರದತ್ತ ಕ್ರಮ ವಹಿಸದೇ ಕನಿಷ್ಠ ದೃಷ್ಟಿಯನ್ನು ಹಾಯಿಸದೇ ಕೆಲವು ಜನಪ್ರಿಯ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಪ್ರಕಟಿಸಿದ್ದಾರೆ. ಯಾದಗಿರಿಯನ್ನು ಹೊಸ ಜಿಲ್ಲೆಯನ್ನಾಗಿ ಪ್ರಕಟಿಸಿರುವುದನ್ನು ಬಿಟ್ಟರೆ ನಂಜುಂಡಪ್ಪ ವರದಿ ಜಾರಿಗೆ ಕಾರ್ಯಕ್ರಮದ ಪ್ರಕಟಣೆಯಾಗಲಿ, ಕಾಲುವೆ ರಿಪೇರಿ, ವಿದ್ಯುತ್, ಬಳ್ಳಾರಿಗೆ ವಿಮಾನ, ಪ್ರವಾಸೋದ್ಯಮ, ಸ್ಮಾರಕ ರಕ್ಷಣೆ ಇವೆಲ್ಲಾ ಸರ್ಕಾರದ ನಿತ್ಯದ ಕೆಲಸಗಳು ಹಾಗೂ ಈಗಾಗಲೇ ಬಜೆಟ್‌ನಲ್ಲಿ ಪ್ರಕಟಿಸಲಾಗಿರುವ ಯೋಜನೆಗಳೇ ಆಗಿವೆ. ಇವುಗಳನ್ನು ಪ್ರಕಟಿಸಲು ಸಂಪುಟವೇ ಗುಲಬರ್ಗಾಕ್ಕೆ ಬರಬೇಕಿತ್ತಾ, ಅಂದಾಜಿನಂತೆ ಎರಡು ಕೋಟಿಯಷ್ಟು ಖರ್ಚು ಮಾಡಬೇಕಿತ್ತಾ, ಹಾಗೆಯೇ ಇಡೀ ಆಡಳಿತ ಯಂತ್ರವೇ ವಾರಾನುಗಟ್ಟಲೇ ಸಾಮಾನ್ಯ ಕೆಲಸಗಳನ್ನು ಬದಿಗೊತ್ತಿ ಇದೇ ಕೆಲಸದಲ್ಲಿ ತೊಡಗಿಸಬೇಕಿತ್ತಾ ಎಂಬ ಪ್ರಶ್ನೆಗಳೂ ಏಳುತ್ತವೆ.

ಜಿಲ್ಲಾ ಕೇಂದ್ರವನ್ನಾಗಿಸಬೇಕೆಂಬ ಕೂಗು ಗುಲಬರ್ಗಾ ಜಿಲ್ಲೆಯ ಶಹಪುರ ಹಾಗೂ ಯಾದಗಿರಿ ಈ ಎರಡು ತಾಲ್ಲೂಕುಗಳ ನಡುವೆ ಸ್ಪರ್ಧೆ ಏರ್ಪಟ್ಟಿತು, ಯಾದಗಿರಿಯನ್ನು ಜಿಲ್ಲಾ ಕೇಂದ್ರವನ್ನಾಗಿಸುವ ಪ್ರಕಟಣೆಯಿಂದ ಸ್ಪರ್ಧೆಯು ವಿರೋಧಕ್ಕೆ 'ಸಂಪೂರ್ಣ' ಬಂದ್ ನಡೆಸುವಷ್ಟರ ಮಟ್ಟಿಗೆ ಸರ್ಕಾರ ತೀರ್ಮಾನಕ್ಕೆ ತಕ್ಷಣದ ಪ್ರತಿಕ್ರಿಯೆ ಸಿಕ್ಕಿದೆ. ಜನತೆಯ ನಡುವೆ ಒಂದು ತಿಳುವಳಿಕೆ ಬರುವಂತಹ ಯತ್ನ ಸರ್ಕಾರದಿಂದ ನಡೆಯಬೇಕಿತ್ತು.

ಹಾಗೆಯೇ ನಂಡುಂಡಪ್ಪ ನವರ ವರದಿ ಜಾರಿಗಾಗಿ, ಒಂದು ಸಮಿತಿ ರಚಿಸುವುದಾಗಿ ಅದರ ಅಧ್ಯಕ್ಷನಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನ ಕಲ್ಪಿಸುವುದು ಸಚಿವ ಸ್ಥಾನಾಕಾಂಕ್ಷಿ ಬಿಜೆಪಿ ಅತೃಪ್ತರಿಗೆ 'ಪುನರ್ವಸತಿ' ಕಲ್ಪಿಸುವ ಕಾರ್ಯಕ್ರಮವಾಗಿದೆ. ಹೀಗೆ ಅದು ಸಚಿವ ಸ್ಥಾನಗಳ ಮಿತಿಗೆ ಇರುವ ಶಾಸನವನ್ನು ಅತ್ಯಂತ ನಾಜೂಕಾಗಿ ಹಿಂಬಾಗಿಲಿನಿಂದ ಉಲ್ಲಂಘಿಸಲಾಗುತ್ತಿದೆ. ಇಂತಹ ಸಮಿತಿಗಳು ಸ್ಥಳೀಯ ಆಡಳಿತವನ್ನು ದುರ್ಬಲಗೊಳಿಸುವುದು.


ಮುಖ್ಯವಾಗಿ, ಈ ಪ್ರದೇಶದ ಜನತೆ ಎದುರಿಸುತ್ತಿರುವ ಕೃಷಿ - ಕೈಗಾರಿಕೆ ಆಧಾರಿತವಾದ ಹಲವು ಸಮಸ್ಯೆಗಳನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಹೈ.ಕ. ಪ್ರದೇಶದ ಈ ಭಾಗದಲ್ಲಿ ಶೇ. 35 ರಿಂದ 40 ರಷ್ಟು ಕೂಲಿಕಾರರೇ ಇದ್ದಾರೆ. ಬೆಂಗಳೂರು, ಮುಂಬೈ, ಹೈದ್ರಾಬಾದ್ ಮುಂತಾದೆಡೆಗೆ ಗುಳೆ ಹೋಗುವ ಅತ್ಯಧಿಕ ವಲಸೆಗಾರರು ಇಲ್ಲಿಂದಲೇ. ಇದರ ಧಾರುಣ ಸ್ಥಿತಿಯನ್ನು 'ಸುಧಾರಿಸುವ' 'ಚ'ಕಾರವೂ ಸಂಪುಟ ಸಭೆಯ ಚರ್ಚೆಗಳಲ್ಲಿ ಬಂದೇ ಇಲ್ಲ. ಇಂತಹ ವಲಸೆಹೋಗುವ ಕೂಲಿಕಾರರಿಗೆ ಒಂದು ಕೂಲಿಕಾರರ ಎಕ್ಸ್‌ಪ್ರೆಸ್ ರೈಲನ್ನು ದೊರಕಿಸಿಕೊಡಲು ಕೇಳಿಕೆ ಇತ್ತು. ಬೆಂಗಳೂರಿಗೆ ವಲಸೆ ಬಂದಾಗ ಶಿಕ್ಷಣ, ವಸತಿ, ಭದ್ರತೆಯಂತಹ ಜ್ವಲಂತ ಪ್ರಶ್ನೆಗಳಿದ್ದವು. ಕೂಲಿಕಾರರಿಗೆ ಕೆಲಸ ನೀಡುವಂತಹ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆ (ರೆಗಾ)ಯ ಕಟ್ಟುನಿಟ್ಟಿನ ಸಂಪೂರ್ಣ ಅನುಷ್ಠಾನಕ್ಕೆ, ಕೂಲಿಕಾರರ ವೇತನದ ಹೆಚ್ಚಳಕ್ಕೆ ಕ್ರಮ ವಹಿಸಬೇಕಿತ್ತು. ವಿಶೇಷವಾಗಿ ಈ ಭಾಗದ ರೈತರು ಬೆಳೆದ ಶೇಂಗಾ, ಹತ್ತಿ, ತೊಗರಿ, ಮೆಣಸಿನಕಾಯಿ ಮುಂತಾದ ಫಸಲಿಗೆ ಬೆಂಬಲಿತ ಲಾಭದಾಯಕ ಬೆಲೆ ಸಿಗುವಂತೆ, ಸೂಕ್ತ ಮಾರುಕಟ್ಟೆ ವ್ಯವಸ್ಥೆಗಾಗಿ, ತೊಗರಿ ಬೋರ್ಡ್ ರಚಿಸುವಂತಹ ಹಲವಾರು ಬೇಡಿಕೆಗಳನ್ನು ಮಂಡಿಸುತ್ತಲೇ ಬಂದಿದ್ದಾರೆ. ಒಣ ಪ್ರದೇಶಗಳ ನೀರಾವರಿಗೂ ಸತತ ಕೇಳಿಕೆ ಇದ್ದು ಅದು ನೆನೆಗುದಿಗೆ ಬಿದ್ದಿದೆ. ಈ ಪ್ರದೇಶವು ಇಡೀ ರಾಜ್ಯದಲ್ಲಿಯೇ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಅತ್ಯಂತ ಕಡೆಯ ಸ್ಥಾನವನ್ನು ಪಡೆದಿದೆ. ಇಂತಹ ಗಹನ ಪ್ರಶ್ನೆಗೆ ಪರಿಹಾರ ರೂಪಿಸದೇ ಅಭಿವೃದ್ಧಿ ಹೇಗಾದರೂ ಸಾಧ್ಯವಾದೀತು? ಆದರೆ ಈ ಅಂಶವನ್ನು ಪುನಃ ನಿರ್ಲಕ್ಷಿಸಲಾಗಿದೆ.

ಅಲ್ಲದೇ ಈ ಪ್ರದೇಶವು ಭೂಹಂಚಿಕೆಯಲ್ಲಿ ಸಾಕಷ್ಟು ಅಸಮತೋಲನವನ್ನು ಹೊಂದಿದೆ. ಭೂ ಹೀನರೇ ಅತ್ಯಧಿಕ. ಇಲ್ಲಿ ಭೂ ಸುಧಾರಣೆಯ ಕಾನೂನನ್ನು ನಿಷ್ಠುರವಾಗಿ ಜಾರಿಗೊಳಿಸಲು ಬಿಗಿ ಕ್ರಮವಹಿಸುವ ಬಗ್ಗೆಯಾಗಲಿ, ವಿಪರೀತ ಭೂ ಕೇಂದ್ರೀಕರಣ ತೊಡೆಯಲು ಕೈಗೊಳ್ಳಬೇಕಾದ ಹೆಜ್ಜೆಗಳಾಗಲೀ ಇಲ್ಲಿ ಪ್ರಸ್ತಾಪನೆಗೆ ಬರಲೇ ಇಲ್ಲ. ಅಂದರೆ ಇಂತಹ ಮೂಲಭೂತ ಪ್ರಶ್ನೆಗಳನ್ನು ಇತ್ಯರ್ಥ ಪಡಿಸದೇ ಯಥಾ ಸ್ಥಿತಿಯನ್ನೇ ಕಾಯ್ದುಕೊಂಡು ಹೋಗಲು, ಆದರೆ ಜನರನ್ನು ವಂಚಿಸಲು ನಡೆಸಿದ ಒಣ ಕಸರತ್ತು ಈ ಸಂಪುಟದ ಸಭೆಯಾಗಿದೆ. ತಾನು ಮಾಡಬೇಕಾದ್ದನ್ನು ಬಿಟ್ಟು 371 ನೇ ಕಲಮಿನ ವಿಷಯವೆತ್ತಿ ಕೇಂದ್ರ ಸರ್ಕಾರದ ಮೇಲೆ ದೂಷಣೆಗೆ ಸೀಮಿತವಾಗಿದೆ.

ಕನಕದಾಸ ಜಯಂತಿಯನ್ನು ಸರ್ಕಾರವೇ ಆಚರಿಸುವುದು, ಕುರುಬ ಜನಾಂಗದ ಸಮಸ್ಯೆ ಬಗೆಹರಿಸುವುದೇ? ಅಂಬೇಡ್ಕರ್ ಅಧ್ಯಯನ ಕೇಂದ್ರಕ್ಕೆ 4 ಕೋಟಿ ಕೋರುವುದು ದಲಿತರ ಮೇಲಿನ ದೌರ್ಜನ್ಯಗಳನ್ನು ಶೋಷಣೆಯನ್ನು ತಡೆಯುವುದಾಗಲೀ ಅಸಂಭವವೇ. ಇಲ್ಲಿಯೂ ಯಡಿಯೂರಪ್ಪ ದಲಿತರ ಮೂಗಿಗೆ ತುಪ್ಪ ಸವರುವ ಜಾತಿ ರಾಜಕಾರಣವನ್ನೇ ಸಂಪುಟದ ಸಭೆಯ ಮೂಲಕವೂ ಮುಂದುವರಿಸಿದ್ದಾರೆ. ಕಾಲುವೆ ರಿಪೇರಿ, ನೀರಾವರಿಗೆ ನೀಡುವ ಹಣವೂ ಬಿಜೆಪಿ ಕೃಪಾಪೋಷಿತರಿಗೆ ಹಾಗೂ ಮುಂದಿನಚುನಾವಣಾ ಖರ್ಚುಗಳಿಗೆ ಸರ್ಕಾರಿ ಹಣ ಕಬಳಿಸುವ ಯೋಜಿತ ಸೂತ್ರವೇ ಆಗಿದೆ.

ಹೀಗಾಗಿ ಯಡಿಯೂರಪ್ಪನವರ ಜಂಬೂಸವಾರಿ ಸಂಪುಟವು ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಮೂಲಭೂತ ಪರಿಹಾರ ರೂಪಿಸದೇ ಮುಂದಿನ ಚುನಾವಣೆಗೆ ಮಂಕುಬೂದಿ ಎರಚುವ ಕಸರತ್ತಾಗಿದೆ.

ಬೀದಿಗಳಲ್ಲಿ ಒಡೆದ ಹೃದಯಗಳೇ..!



'ನೀವು ನನ್ನನ್ನು ಬೇಕಾದರೆ ಕೊಂದು ಬಿಡಿ, ತುಂಡು ತುಂಡು ಮಾಡಿ...ಆದರೆ 'ಆತ'ನನ್ನೇಕೆ ಕತ್ತರಿಸುತ್ತೀರಿ. ಆ ಕರುಣಾಮಯಿಯನ್ನೇಕೆ ಕಡಿಯುತ್ತೀರಿ"... ಆ ಯುವಕ ಆಕ್ರಂದಿಸುತ್ತಲೇ ಆಕ್ರೋಶಿಸುತ್ತಲೇ ಎಲ್ಲರೆದುರು ಕೂಗುತ್ತಿದ್ದ. ಈ ದೃಶ್ಯ ಟಿ.ವಿ.ಗಳಲ್ಲಿ ಪ್ರಸಾರವಾಯಿತು. ನೋಡಿದ ಕಣ್ಣುಗಳು ಸಾವಿರಾರು. ಆದರೆ ಈತನ ಅಳಲನ್ನು ಅರ್ಥಮಾಡಿಕೊಂಡವರೆಷ್ಟೋ, ಮಿಡಿದವರೆಷ್ಟೋ...


ಇದು ಕರ್ನಾಟಕ ಇತ್ತೀಚೆಗೆ ಕಂಡ ಹಲವು ಘಟನೆಗಳಲ್ಲಿ ಒಂದು ದೃಶ್ಯ. ಆ ಯುವಕ ಹೇಳುತ್ತಿದ್ದುದು ಇತ್ತೀಚೆಗೆ ಕ್ರಿಶ್ಚಿಯನ್ನರು ಹಾಗೂ ಚರ್ಚ್‌ಗಳ ಮೇಲೆ ನಡೆದ ದಾಳಿಗಳ ಹಿನ್ನೆಲೆಯಲ್ಲಿ ಭಜರಂಗದಳದ ಫ್ಯಾಸಿಷ್ಟರು ಚರ್ಚ್‌ನಲ್ಲಿದ್ದ ಯೇಸುವಿನ ಮೂರ್ತಿಯನ್ನು ಧ್ವಂಸಗೊಳಿಸಿದ್ದರು. ಕೈ ಕಾಲು ಕಡಿದರು. ಮೇರಿ ಮಾತಾ ವಿಗ್ರಹ ಒಡೆದು ಹಾಕಿದರು. ಆ ಯುವಕ ಹೇಳಿದ್ದು ಇದನ್ನೇ.

ರಾಜ್ಯದಲ್ಲಿ ಚರ್ಚ್‌ಗಳು ಹಾಗೂ ಕ್ರಿಶ್ಚಿಯನ್ನರ ಮೇಲಿನ ದಾಳಿಗಳು ಒಂದು ಗಂಭೀರ ವಾತಾವರಣವನ್ನು ಸೃಷ್ಟಿಸಿದೆ. ಮುಸ್ಲಿಮರು, ಕ್ರಿಶ್ಚಿಯನ್ನರು, ಕಮ್ಯುನಿಸ್ಟರ ಮೇಲೆ ಆರಂಭಗೊಂಡಿರುವ ಸಂಘ ಪರಿವಾರದ ಯೋಜಿತ ದಾಳಿಗಳನ್ನು ಗಮನಿಸಿದರೆ, ರಾಜ್ಯ ಕೋಮುದ್ವೇಷದ ಕುಂಡದಲ್ಲಿ ಬೆಂದು ಹೋಗುವುದೇ ಎಂಬ ಆತಂಕವೂ ಮೂಡುತ್ತಿದೆ. ಪ್ರತಿಯೊಂದು ದಾಳಿಗಳು ಅತ್ಯಂತ ಪೂರ್ವಯೋಜಿತ, ನಿಶ್ಚಿತ! ಕಾನೂನುಬಾಹಿರ ಕೃತ್ಯಗಳಿಗೆ ಕಾನೂನು ಪಾಲಕರ, ಆಡಳಿತದಲ್ಲಿರುವವರ ಸಕ್ರಿಯ ಬೆಂಬಲ. ಇತ್ತೀಚೆಗೆ ಬೆಂಗಳೂರಿನಲ್ಲಿ ದಾಳಿ ನಡೆದ ಎರಡು ಚರ್ಚ್ ಹಾಗೂ ಗಣೇಶ ಮೆರವಣಿಗೆಯ ಸಂದರ್ಭದಲ್ಲಿ ಸಿಡಿದ ಗಲಭೆಯ ವಿವರಗಳನ್ನು ಪರಿಶೀಲಿಸಲು ಹೋದ ನಮ್ಮ ಅಧ್ಯಯನ ತಂಡದಲ್ಲಿ ಕಂಡಿದ್ದು ಅದೇ 'ಗುಜರಾತ್ ಮಾದರಿ' ಯ ಪೂರ್ವ ಸೂಚನೆಗಳು.



"ನಮ್ಮಲ್ಲಿ ಯಾವತ್ತೂ ಹೀಗೆ ಆಗಿರಲಿಲ್ಲ. ನಮ್ಮ ಚರ್ಚ್‌ಗೆ ಏನಿಲ್ಲವೆಂದರೂ ನೂರಾರು ವರ್ಷಗಳ ಇತಿಹಾಸವಿದೆ. ಎಲ್ಲಾ ಧರ್ಮೀಯರು ಸೌಹಾರ್ದತೆಯಿಂದ ಬಾಳುತ್ತಾ ಬಂದಿದ್ದೇವೆ. ಗಣೇಶ ಹಬ್ಬವನ್ನು ಕ್ರಿಸ್‌ಮಸ್‌ನ್ನು ನಾವು ಕೂಡಿಯೇ ಮಾಡುತ್ತೇವೆ. ಈಗಲೂ ನಮ್ಮ ಊರಲ್ಲಿ ಬೇಧಭಾವಗಳಿಲ್ಲ" ಎನ್ನುತ್ತಾರೆ ಬೆಂಗಳೂರಿನ ಮರಿಯಣ್ಣನ ಪಾಳ್ಯದ ನಾಗರೀಕರು. 20ರ ಮಧ್ಯರಾತ್ರಿ ಕಳೆದ ಬಳಿಕ 'ಸಂತ ಜೇಮ್ಸ್ ಚರ್ಚ್'ನ ಬಾಗಿಲುಗಳನ್ನು ಒಡೆದು ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಪಾದ್ರಿಯವರ ಬಟ್ಟೆ, ಪುಸ್ತಕಗಳನ್ನು ಹರಿದು ಹಾಕಿ ಚೆಲ್ಲಾಪಿಲ್ಲಿ ಎಸೆದಿದ್ದಾರೆ. ಮುಖ್ಯವಾಗಿ ಪ್ರಾರ್ಥನಾ ಮಂದಿರದ ಅತ್ಯಂತ ಪವಿತ್ರವಾದ ಪ್ರಸಾದವಿರುವ ಕಬ್ಬಿಣದ ತಿಜೋರಿಯನ್ನು ಒಡೆದು ಪರಮ ಪ್ರಸಾದವನ್ನು ನೆಲಕ್ಕೆ ಚೆಲ್ಲಿದ್ದಾರೆ. ಮೇರಿಯ ವಿಗ್ರಹದ ಗಾಜನ್ನು ಒಡೆದು ಹಾಕಿದ್ದಾರೆ. ಇದು ಸ್ಪಷ್ಟವಾಗಿ ಚರ್ಚ್ ಹಾಗೂ ಪೂಜಾ ವಸ್ತು, ಸ್ಥಳಗಳ ಮೇಲೆ ನಡೆದ ದಾಳಿ. ಇಲ್ಲಿ ಪರಮ ಪ್ರಸಾದವನ್ನು ಚೆಲ್ಲಿರುವುದು ಭಕ್ತರಿಗೆ ಅಪಾರ ನೋವು ತಂದಿದೆ. ಹೀಗಿರುವಾಗ ಅಲ್ಲಿಗೆ ಭೇಟಿ ನೀಡಿದ ಪೋಲಿಸ್ ಕಮೀಷನರ್ ಶಂಕರ್ ಬಿದರಿ 'ಇದು ಕಳ್ಳತನದ ಪ್ರಯತ್ನ ಅಷ್ಟೇ' ಎಂದು ಹೇಳಿದ್ದು, ಭಾವನೆಗಳನ್ನು ಇನ್ನಷ್ಟು ಘಾಸಿಗೊಳಿಸಿದೆ. 'ಇದು ಕಳ್ಳತನದ ಯತ್ನವೇ ಆಗಿದ್ದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ವಸ್ತುಗಳಿದ್ದರೂ ಯಾಕೆ ಅದನ್ನು ಮುಟ್ಟಿಲ್ಲ' ಎಂಬ ಪ್ರಶ್ನೆಗೆ ಕಮೀಷನರರಿಂದ ಉತ್ತರವಿಲ್ಲ. ಹೀಗಾಗಿ ಬಿದರಿ ಹೇಳಿಕೆ ಎಲ್ಲರಿಗೂ ಬೇಸರ ತಂದಿದೆ. 'ನಮಗೆ ಧಾರ್ಮಿಕ ಭಾವನೆಗಳಿಲ್ಲವೇ' ಎಂದು ಜನ ಪ್ರಶ್ನಿಸುತ್ತಿದ್ದಾರೆ. ಬಿದರಿ ಹೇಳಿಕೆ ಬೇಜಾಬ್ದಾರಿತನದ್ದು ಎನ್ನುತ್ತಾರೆ ನಾಗರೀಕರು. ಆದರಿಲ್ಲಿ ಈ ಘಟನೆ ನಡೆದ ಒಂದು ವಾರದ ಹಿಂದೆ 14.09.2008ರಂದು ರವಿವಾರ ಪ್ರಾರ್ಥನೆಗೆ ಜನರೆಲ್ಲಾ ಸೇರಿರುವಾಗಲೇ ಸುಮಾರು 200 ರಷ್ಟಿದ್ದ ಆರ್‌ಎಸ್‌ಎಸ್‌ನ ಚಡ್ಡಿ, ಹಾಗೂ ಕೋಲು ಧಾರಿಗಳು ಬ್ಯಾಂಡ್ ಹೊಡೆದು ಭಗವಾಧ್ವಜ ಹಿಡಿದು ಘೋಷಣೆ ಕೂಗುತ್ತಾ ಪಥಸಂಚಲನ ಮಾಡಿದ್ದಾರೆ. ಚರ್ಚ್ ಮುಂದೆ ಬಂದಾಗ ನಿಂತು ಪ್ರಾರ್ಥನೆಗೆ ಅಡ್ಡಿಯಾಗುವಂತೆ ನಡೆದುಕೊಂಡಿದ್ದಾರೆ. ಪ್ರಚೋದಕ ಘೋಷಣೆ ಹಾಕಿದ್ದಾರೆ ಎನ್ನುತ್ತಾರೆ ನಾಗರೀಕರು, ಇದಾದ ಒಂದು ವಾರದ ಬಳಿಕ, ಈ ಘಟನೆ ನಡೆದಿದೆ. ಖಂಡಿತವಾಗಿ ಭಜರಂಗದಳದವರ ದಾಳಿಯೇ ಇದಾಗಿದೆ ಎಂದು ಖಚಿತವಾಗಿ ಹೇಳುತ್ತಾರೆ. ಗಮನಿಸಬೇಕಾದ

ಪುಟ 4 ಕ್ಕೆ



ಒಗ್ಗರಣೆ ವರದಿಗಳು

ವಸ್ತುನಿಷ್ಠ ವರದಿಗಳ ಬದಲು ಆಳುವವರ ಪುಂಗಿಗೆ ತಲೆಯಾಡಿಸುವವರಾದರೇ?

ಮಿದುಳಿನಲ್ಲಿ ಕೋಮುವಾದಿ ಪೂರ್ವಾಗ್ರಹಗಳು ವಿಷದಂತೆ ಆಳಕ್ಕೆ ಇಳಿದು ಬಿಟ್ಟಿದ್ದರೆ, ಬರೆಯುವ ಲೇಖನಿ ಏನನ್ನು ಬರೆಯುತ್ತದೆ. ಹೇಗೆ ವಸ್ತು ನಿಷ್ಠವಾಗಿರಬೇಕಾದವರು ಪೂರ್ವಾಗ್ರಹ ಪೀಡಿತವಾದ ವರದಿಗಳನ್ನು ಬರೆಯುತ್ತಾರೆಂಬುದಕ್ಕೆ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಉದಾಹರಣೆಗಳು ದೊರೆಯುತ್ತಿವೆ.

ಸೆಪ್ಟೆಂಬರ್ 23 ರ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವರದಿ ಇದೆ. ಕೆ.ಸಿ.ಆರ್. ಇಂಡಿಯಾ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಡಯೆಟ್ ಮುಂತಾದ ಸಂಘಟನೆಗಳು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಸಂಘಟಿಸಿದ್ದ 'ಮತಾಂತರ ಏಕೆ?' ಕುರಿತ ವಿಚಾರ ಸಂಕಿರಣದ ವರದಿ ಇದೆ.

ವರದಿಯ ಆರಂಭದಲ್ಲೇ ಸಾಂಗ್ಲಿಯಾನ ಅವರ ಮಾತುಗಳನ್ನು ಉಲ್ಲೇಖಿಸಲಾಗಿದೆ. ಎಚ್.ಟಿ.ಸಾಂಗ್ಲಿಯಾನ ಬಿಜೆಪಿ ಪಕ್ಷದ ವಿರುದ್ಧ ಕಿಡಿ ಕಾರಿದ್ದಾರೆ. ಬಿಜೆಪಿ ಜಾತ್ಯಾತೀತ ಪಕ್ಷ ಅಲ್ಲ ಅಂತ ಜರೆದಿದ್ದಾರೆ. ಅಷ್ಟಕ್ಕೆ ಈ ಪ್ರಜಾವಾಣಿಯ ವರದಿ ಮಾಡುವ ವ್ಯಕ್ತಿಗೆ ಉರಿ ಎದ್ದಿರಬೇಕು.

'ಅವರು ವೇದಿಕೆಯಿಂದಿಳಿಯುತ್ತಿದ್ದಂತೆ ರಾಷ್ಟ್ರಗೀತೆ ಹಾಡಲಾಯಿತು, ಕ್ರಿಶ್ಚಿಯನ್, ಮುಸ್ಲಿಮರಿಂದಲೇ ತುಂಬಿದ್ದ ಸಭೆಯಲ್ಲಿ ಕೆಲವರು ಎದ್ದು ನಿಂತು ಗೌರವ ಸೂಚಿಸಲಿಲ್ಲ' ಎನ್ನುತ್ತದೆ ವರದಿ. ರಾಷ್ಟ್ರಗೀತೆಗೆ ಎದ್ದು ನಿಂತು ಗೌರವ ಸೂಚಿಸಬೇಕೆಂದು ನಿರೀಕ್ಷಿಸುವುದು ಸರಿಯಾಗಿದೆ. ಆದರೆ 'ಕ್ರಿಶ್ಚಿಯನ್ನರು, ಮುಸ್ಲಿಮರೇ ಹೆಚ್ಚಿದ್ದ ಸಭೆಯಲ್ಲಿ' ಅಂತ ವಿಶ್ಲೇಷಣೆಯ ಒಗ್ಗರಣೆ ಯಾಕೆ? ವರದಿಯೇ ಸಾರುವಂತೆ 'ಕೆಲವರು' ತಮ್ಮ ಬೇಜವಾಬ್ದಾರಿಯಿಂದಾಗಿ ರಾಷ್ಟ್ರಗೀತೆಗೆ ಗೌರವ ಸಲ್ಲಿಸದಿದ್ದಲ್ಲಿ ಅದಕ್ಕೆ ಅಲ್ಲಿ ನೆರೆದಿದ್ದ ಜನರ ಧರ್ಮಗಳ ಹೆಸರು ಉಲ್ಲೇಖಿಸಿ ವರದಿಯನ್ನು ಕೋಮುವಾದಿ ಮಾಡಬೇಕೇ?

ಅಲ್ಪಸಂಖ್ಯಾತರು ಹೆಚ್ಚಿಲ್ಲದ ಕಡೆಗಳಲ್ಲೂ ಎಷ್ಟೋ ಬಾರಿ ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲದಿರುವುದು, ಆ ಬಗ್ಗೆ ಗಮನಿಸದಿರುವುದು, ಫೋಟೋ ಗ್ರಾಹಕರು ಫೋಟೋ ತೆಗೆಯುವುದು ನಡೆದಿರುತ್ತದೆ. ಆಗೆಲ್ಲಾ 'ಹಿಂದೂಗಳೇ ಹೆಚ್ಚಿದ್ದ ಸಭೆಯಲ್ಲಿ' ಅಂತ ಬರೆಯಲಾಗುವುದೇ?

ಇದೇ ವರದಿ ನಂತರ ವಿ.ಟಿ.ರಾಜಶೇಖರ್ ಉದ್ರೇಕಕಾರಿ ಭಾಷಣ ಮಾಡಿದರು ಎನ್ನುತ್ತದೆ. 'ಈಗ ನಡೆಯುತ್ತಿರುವ ಮತಾಂತರ ಏನೇನು ಸಾಲದು. ಇನ್ನಷ್ಟು ಮತಾಂತರ ನಡೆಯಬೇಕು' ಎಂದರಂತೆ. ಬಿ.ಟಿ.ರಾಜಶೇಖರ್‌ರವರಾದರೂ ಏನು ಹೇಳಿರಬಹುದು? ಈ ದೇಶದ ದಲಿತರ ಮೇಲೆ ಆಗುತ್ತಿರುವ ದಬ್ಬಾಳಿಕೆ, ಅವರಿಗೆ ಮಾಡಲಾಗುತ್ತಿರುವ ಅಪಮಾನ, ಜಾತಿ ತಾರತಮ್ಯ, ಅಸ್ಪೃಶ್ಯತೆಗಳನ್ನು ಪ್ರಸ್ತಾಪಿಸಿ ಅವರು ಹೇಳಿದ್ದಾರಂತೆ. "ಅಸ್ಪೃಶ್ಯತೆ, ಜಾತಿಯತೆ ಬಗೆಗೆ ಏನೊಂದು ಮಾತು ಉಲ್ಲೇಖಿಸದೆ ಬರೀ 'ಇನ್ನಷ್ಟು ಮತಾಂತರ ನಡೆಯಬೇಕು' ಎಂದರು ಎಂದು ಬಿಟ್ಟರೆ ಅದು ನ್ಯಾಯವಾ?

ಏನು ವರದಿಗಾರಿಕೆ ಏನು ಹೊಣೆಗಾರಿಕೆ ಇದು. ಅಂಬೇಡ್ಕರ್ ಅವರಾದರೂ ಏನು ಹೇಳಿದರು. ಏನು ಮಾಡಿದರು. ಮತಾಂತರ ಅಂದಾಕ್ಷಣ ಪತ್ರಿಕಾ ವರದಿಗಾರರು ಉರಿದು ಬೀಳುವಂತಾದರೆ ಈ ದೇಶದ ಭವಿಷ್ಯವೇನು?

ಮತಾಂತರ ಸಮಸ್ಯೆಗಳಿಗೆ ಪರಿಹಾರವೇ ಎನ್ನುವುದು ಬೇರೆ ಮಾತು. ಬುದ್ಧನ ಕಾಲದಲ್ಲಿ ಮತಾಂತರ ಆಗಲಿಲ್ಲವೇ? ಶಂಕರಾಚಾರ್ಯರ ಕಾಲದಲ್ಲಿ ಆಕ್ರಮಣಕಾರಿ ಮರು ಮತಾಂತರ ಆಗಲಿಲ್ಲವೇ? ಬಸವಣ್ಣ ಏನು ಮಾಡಿದರು? ಪತ್ರಿಕೆ ಮಾಲೀಕರು, ಪತ್ರಕರ್ತರು ಇತಿಹಾಸ ಓದುವುದಿಲ್ಲವೇ? ಓದಿದ್ದನ್ನು ಜಾಣತನದಿಂದ ಮರೆತು ಬಿಡುತ್ತಾರೆಂದರೆ ಹೇಗೆ?

ಒಡೆದ ಹೃದಯಗಳು.....

ಪುಟ 3 ರಿಂದ

ವಿಷಯವೆಂದರೆ ಅಂದು ದಾಳಿಯಾದ ರಾತ್ರಿ ಕಾವಲಿದ್ದ ಪೋಲೀಸರು ಅಲ್ಲಿಂದ ಆ ಹೊತ್ತಿನಲ್ಲಿ 'ಮಾಯಾ' ವಾಗಿದ್ದದ್ದು!

'ನಮ್ಮ ಚರ್ಚ್ ಯಾರನ್ನೂ ಮತಾಂತರಿಸಿಲ್ಲ. ಯಾರನ್ನೂ ಬೇಕಾದರೂ ಕೇಳಲಿ. ನಾವು ಆಮಿಷ ಒಡ್ಡಿದ್ದೇವೆಯೇ? ಬಲತ್ಕಾರ ಮಾಡಿದ್ದೇವೆಯೇ' ಹೀಗೆ ಮುಂದುವರೆಯುತ್ತದೆ ಅವರ ಪ್ರಶ್ನೆಗಳು.

ಆದರೆ ಒಂದಂತೂ ನಿಜ. ಕೊಡಗಿನ ಚಿಡ್ಡಿ ಚಿಟ್ಟಿಯಪ್ಪ ಎಂಬ ಆರ್‌ಎಸ್‌ಎಸ್‌ನ ಪೂರ್ಣಾವಧಿ ಕಾರ್ಯಕರ್ತ ಈ ಪ್ರದೇಶಕ್ಕೆ ಬಂದ ನಂತರ ಭಜರಂಗದಳದವರ ಚಟುವಟಿಕೆಗಳು ಆರಂಭಗೊಂಡವು. ಆತನೊಂದಿಗೆ ವಿಷ್ಣು ಮೂರ್ತಿ ಎಂಬ ಇನ್ನೊಂದು 'ಚಿಡ್ಡಿ' ಸೇರಿಕೊಂಡಿದೆ. ಅವರು ಏನೆಲ್ಲಾ ಪ್ರಚೋದಿಸಿದರೂ ಇಲ್ಲಿನ ಜನ ಅವರ ಹಿಂದೆ ಹೋಗಿಲ್ಲ. ಅವರ ಕಾರ್ಯಕ್ರಮಗಳಿಗೆ ಜನವೇ ಇರಲ್ಲ. ಅದಕ್ಕಾಗಿ ಗಣೇಶನನ್ನು ಬಳಸಲು ನೋಡಿದರು. ಅಷ್ಟು ಆಗಲಿಲ್ಲ. ಆದರೆ ಇಲ್ಲಿ ಚಟುವಟಿಕೆ ಬರುವವರೆಲ್ಲಾ ಹೊರಗಿನವರು. ಅವರಿಂದಲೇ ರಾದ್ಧಾಂತಗಳು ನಡೆಯುತ್ತಿವೆ ಎಂಬುದು ಅಲ್ಲಿನ ಜನರ ವಿವರಣೆ. ಒಟ್ಟಾರೆ ಚರ್ಚ್ ಮೇಲೆ ದಾಳಿ ಮತ್ತು ಪರಮ ಪ್ರಸಾದ ಚೆಲ್ಲಿದ್ದು ಭಕ್ತರ ಮನಸ್ಸಿಗೆ ತುಂಬಾ ನೋವಾಗಿದೆ. 'ನಾನು, ನನ್ನ ಅಪ್ಪ, ಅವರಪ್ಪ ಬೆಳೆದು ಬಾಳಿದ ಊರು ಇದು. ನಾವೆಲ್ಲಿಂದಲೋ ಬಂದಿಲ್ಲ, ಇಲ್ಲಿಯೇ ಹುಟ್ಟಿ ಬೆಳೆದವರು. ನಮಗೆ ಶಾಂತಿ ನೀಡುವ ಧರ್ಮ, ದೇವರನ್ನು ಆಯ್ಕೆ ಮಾಡಿಕೊಳ್ಳುವುದು, ಪೂಜಿಸುವುದು ತಪ್ಪೇ' ಎಂದು ಪ್ರಶ್ನಿಸುವ ಕಾನಿಕ ರಾಜು ಅವರು ಧರ್ಮದ ಆಯ್ಕೆಯ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿರುವುದನ್ನು ಪ್ರಶ್ನಿಸುತ್ತಾರೆ.

ಅದೇ ರೀತಿ, 20.09.2008ರ ನಸುಕಿನಲ್ಲಿ ನಡೆದಿರುವ ರಾಜರಾಜೇಶ್ವರಿನಗರ ಚರ್ಚ್ ಮೇಲಿನ ದಾಳಿಯಿಂದಾಗಿ ಬಾಲ ಯೇಸುವಿನ ಮೂರ್ತಿಗೆ ಹಾನಿಯಾಗಿದೆ ಹಾಗೂ ಗಾಜು ಪುಡಿಯಾಗಿದೆ. ಈ ಹಿಂದೆಯೂ ಸಹ, 14.08.2005ರ ಮಧ್ಯರಾತ್ರಿ ಸಂಘ ಪರಿವಾರದ ಕೆಲವು ಸಂಘಟನೆಗಳು ಅಖಂಡ ಭಾರತ ಸಂಕಲ್ಪದಿನದ ಹೆಸರಿನಲ್ಲಿ ನಡೆಸಿದ ಮೆರವಣಿಗೆ ಸಮಯದಲ್ಲಿ ಕೆಲವು ಕೇಸರಿ ಧ್ವಜಾದಾರಿಗಳು ಕಲ್ಲು ತೂರಿ ಹೋಗಿರುತ್ತಾರೆ. ಬ್ಯಾಟರಾಯನಪುರ ಪೊಲಿಸ್ ಠಾಣೆಯಲ್ಲಿ ಅಂದೇ ದೂರು ದಾಖಲಿಸಿದ್ದಾರೆ. 'ಆದರೆ ಇದುವರೆಗೂ ಆ ಕುರಿತು ತನಿಖೆಯಾಗಲೀ, ಕ್ರಮವಾಗಲೀ ಜರುಗಿಲ್ಲ' ಎನ್ನುತ್ತಾರೆ ಅಲ್ಲಿನ ಪಾದ್ರಿಯವರು. ಹಾಗೆಯೇ ಇತ್ತೀಚೆಗೆ 2008ರ ಮೇ ತಿಂಗಳಲ್ಲಿ ಇಂತಹ ಪ್ರಯತ್ನವೊಂದು ನಡೆದಿದೆಯಂತೆ. ಹಾಗಾಗಿ ಸೆ.20 ರಂದು ನಡೆದದ್ದು ಮೂರನೆಯ ದಾಳಿಯಾಗಿರುತ್ತದೆ. ಈ ದಾಳಿ ಕುರಿತು ಪ್ರತಿಕ್ರಿಯೆ ನೀಡಿರುವ ಮಾನ್ಯ ಪೋಲೀಸ್ ಆಯುಕ್ತರು "ಇದೇನು ಮೊದಲನೆಯದಲ್ಲ, ಸುಮಾರು 800 ರೂಪಾಯಿ ಗಾಜು ಪುಡಿಯಾಗಿದೆ" ಎಂಬಂತೆ ನೀಡಿರುವ ಹೇಳಿಕೆಯು ಅತ್ಯಂತ ಉಡಾಫೆ ಹೇಳಿಕೆಯಾಗಿದೆ. ಈ ರೀತಿ ಆಡಳಿತ ಪಕ್ಷದ ವಕ್ತಾರರಂತೆ ಹೇಳಿಕೆ ನೀಡಿರುವುದು ಜನತೆಯಲ್ಲಿ ಆತಂಕವನ್ನುಂಟು ಮಾಡಿದೆ. ಈ ಅವಧಿಯಲ್ಲಿಯೇ ನಡೆದ ಇನ್ನೊಂದು ಘಟನೆಯೂ ಇಡೀ ಸಂಘ ಪರಿವಾರದ ಅಜೆಂಡಾದ ಜಾರಿಯಲ್ಲಿರುವುದನ್ನೇ ತೋರಿಸುತ್ತದೆ. ಗಂಗೊಂಡನಹಳ್ಳಿಯಲ್ಲಿ ಗಣೇಶನ ವಿಗ್ರಹ ವಿಸರ್ಜನೆ ಮೆರವಣಿಗೆ ಮೇಲೆ ಕಲ್ಲು ತೂರಲಾಯಿತೆಂದು, ನಂತರ ಅದನ್ನು ಅನುಸರಿಸಿ ಗಲಭೆ ನಡೆಯಿತೆಂದೂ ವರದಿಗಳು ಬಂದವು. ಚಂದ್ರಲೇಔಟ್ ಠಾಣೆಯ ವ್ಯಾಪ್ತಿಯ ಗಂಗೊಂಡನಹಳ್ಳಿ ಯಲ್ಲಿ ಗಲಭೆ ನಡೆದದ್ದು ಮೊದಲನೆಯ ಬಾರಿ. ಇದು ಮುಸ್ಲಿಂರೇ ಅಧಿಕ ಸಂಖ್ಯೆಯಲ್ಲಿರುವ ಪ್ರದೇಶ. ಹಿಂದೆಲ್ಲಾ ಅಲ್ಲಿ ಒಂದು ಗಣೇಶ ವಿಗ್ರಹ ಕೂಡಿಸಲಾಗುತ್ತಿತ್ತು. ಆದರೆ ಈ ವರುಷ ಏಳು ವಿಗ್ರಹ ಕೂಡಿಸಲಾಗಿದೆ. ಅವುಗಳ ವಿಸರ್ಜನೆಯ ಮೆರವಣಿಗೆಗೆ ಸುತ್ತಲಿನವರು ಬಂದಿದ್ದಾರೆ. ಅಂದು ಮೆರವಣಿಗೆ ಶಾಂತರೀತಿಯಲ್ಲೇ ಸಾಗುತ್ತಿತ್ತು. ಅದು ಮಸೀದಿ ಮುಂದೆ ಹಾದುಹೋಗುವಾಗ ಬೇಕೆಂದೇ ಕೆಲವರು ಮೆರವಣಿಗೆ ನಿಲ್ಲಿಸಿ ತಮಟೆ ಬಾರಿಸಿ ಘೋಷಣೆ ಕೂಗುತ್ತಾ ಗದ್ದಲ ವೆಬ್ಬಿಸಿದ್ದಾರೆ. ಆಗ ಮಸೀದಿಯಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಅಲ್ಲಿದ್ದ ಹಿರಿಯರು ಮನವಿ ಮಾಡಿದರೂ ಅವರು ಜಗ್ಗಿಲ್ಲ. ಕೊನೆಗೆ ಅಲ್ಲಿಂದ ಮೆರವಣಿಗೆಯನ್ನು ದಾಟಿಸಲು ಹಿರಿಯರು ಯಶಸ್ವಿಯಾಗಿದ್ದಾರೆ. ಅಲ್ಪಸಂಖ್ಯಾತರು ಮೆರವಣಿಗೆಯೊಂದಿಗೆ ನಡೆದಿದ್ದಾರೆ. ಆ ಹೊತ್ತಿನಲ್ಲಿ ಪೋಲಿಸರು ಕೆಲವು ಹುಡುಗರ ಮೇಲೆ ಲಾಠಿ ಏಟು ಹಾಕಿದ್ದರಿಂದ ಆ ಹುಡುಗರು ಪೋಲಿಸರಿಗೆ ಕಲ್ಲು ತೂರಿದ್ದಾರಂತೆ. ಇದನ್ನೇ ನೆಪಮಾಡಿಕೊಂಡ ಗಣೇಶನ ಮೆರವಣಿಗೆಯಲ್ಲಿದ್ದ ಕೆಲವರು ವಿಗ್ರಹಗಳನ್ನು ಅಲ್ಲೆ ಇಟ್ಟು ಟಿವಿ 9 ರವರನ್ನು ಕರೆಸಿಕೊಂಡು ರಾದ್ಧಾಂತ ಏರ್ಪಡಿಸಿದ್ದಾರೆ. ಟಿ.ವಿ.ಯವರು ಬರಲು 2 ಗಂಟೆ ಸಮಯ ಹಿಡಿದಿದೆಯಂತೆ. ಅಲ್ಲಿಯೇ ಮೊಕ್ಕಾಂ ಹೂಡಿ ರಾದ್ಧಾಂತ ಎಬ್ಬಿಸಿದ್ದಾರೆನ್ನುತ್ತಾರೆ ಅಲ್ಲಿಯ ಜನ.

ಇದನ್ನು ಅನುಸರಿಸಿದ ಪೋಲಿಸರು ಮನೆಗಳಿರುವ ಓಣಿಗೆ ನುಗ್ಗಿ ಮನಸೋ ಇಚ್ಛೇ ಹೊಡೆದಿದ್ದಾರೆ. ಮೆಕ್ಕಾ ಮಸೀದಿಯ ಹತ್ತಿರದ ಮನೆಯೊಳಗೆ ಪೇದೆ ದೊಡ್ಡಣ್ಣ ಎಂಬಾತನ ನೇತೃತ್ವದಲ್ಲಿ ಮನೆಯ ಬಾಗಿಲು ಮುರಿದು, ಮಹಿಳೆ ಮಕ್ಕಳಿಗೆ ಥಳಿಸಿದ್ದಾರೆ. ಕಿಟಕಿ, ಮನೆ ಮೇಲಿನ ಸಿಮೆಂಟ್ ಶೀಟ್‌ಗಳನ್ನು ಪುಡಿ ಮಾಡಿದ್ದಾರೆ. ಇದು ರಾತ್ರಿಯಲ್ಲೆಲ್ಲಾ ನಡೆದಿದೆ. ನಂತರ ಮುಗ್ಧರು ಅಮಾಯಕರನ್ನು ಠಾಣೆಗೆ ಎತ್ತಿಕೊಂಡು ಹೋಗಿ ಜೈಲಿಗಟ್ಟಿದ್ದಾರೆ. ಇದರಲ್ಲಿ ಬಹುತೇಕ ಎಲ್ಲರೂ ಮುಸ್ಲಿಂ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ.

ಈ ಪ್ರದೇಶಗಳಲ್ಲಿ ಸುತ್ತಾಡಿದರೆ ಎಲ್ಲೆಲ್ಲೂ ದ್ವೇಷದ ವಾತಾವರಣ, ಕರ್ಫ್ಯೂ ವಿಧಿಸಿದಂತೆ ಭಯದ ಹೊದಿಕೆ ಹೊದ್ದ ಮೌನ. ಒಂದಾಗಿಯೇ ಇದ್ದವರ ಎದೆಯಲ್ಲಿ ಆತಂಕ, ಅನುಮಾನ. ಒಂದಂತೂ ಸತ್ಯ ಈ ಘಟನೆ ಅಲ್ಲಿದ್ದವರಲ್ಲಿ ಕೋಮು ವಿಭಜನೆ ಹುಟ್ಟಿಸಲು ಕಾರಣವಾಗಿದೆ. 'ಅವರು ನಾವು' ಎಂದು ಜನ ಮಾತನಾಡತೊಡಗಿದ್ದಾರೆ. ಹಲವಾರು ದಶಕಗಳಿಂದ ಸಾಧಿಸಿದ ಸೌಹಾರ್ದತೆ, ಸಾಮರಸ್ಯ, ಪ್ರೀತಿ ವಿಶ್ವಾಸಗಳ ಮಡಿಕೆ ಒಡೆದ ಚೂರುಗಳು ಆ ಬೀದಿಗಳಲ್ಲಿ... 'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'!

ಅಲ್ಲಿ ಹುತ್ತ ಬೆಳೆಯುವ ಮುನ್ನ ಅಲ್ಲಿ ಮತ್ತೆ ಸಾಮರಸ್ಯದ ಮನೆ ಕಟ್ಟಬೇಕು. ಆದರೆ ಕೆಡುಕು ಬಗೆವವರೇ ಅಧಿಕಾರದಲ್ಲಿದ್ದಾಗ ... ಕಟ್ಟುವುದೂ ಒಂದು ಹೋರಾಟವೇ.

ಮಂಗಳೂರು ಗಲಭೆ : ಭಜರಂಗದಳದ 'ಬಿ' ಟೀಂ ಆಗಿ ಪೊಲೀಸರು, ಪತ್ರಕರ್ತರು

ಮಂಗಳೂರು ಕೋಮು ಕದನದ ಇತಿಹಾಸದಲ್ಲಿ ಇಲ್ಲಿನ ಪೋಲಿಸರಿಗೂ ಪತ್ರಕರ್ತರಿಗೂ ಮಹತ್ವದ ಸ್ಥಾನ ಇದ್ದೇ ಇದೆ. ತೊಂಭತ್ತರ ದಶಕದಿಂದ ಬಿಜೆಪಿಯ ಮತೀಯ ರಾಜಕಾರಣ ಜಿಲ್ಲೆಯಲ್ಲಿ ಮೇಲುಗೈ, ಸಾಧಿಸಲು ಆರಂಭವಾದಾಗ ಬಿಜೆಪಿರೊಂದಿಗೆ ಕೈ ಜೋಡಿಸಿದ್ದು ಇಲ್ಲಿನ ಕೋಮು ಮನಸ್ಸಿನ ಒಂದು ವಿಭಾಗದ ಪೋಲೀಸರು ಮತ್ತು ಪತ್ರಕರ್ತರು. ರಾಜ್ಯದಲ್ಲಿ ಜಾತ್ಯಾತೀತ ಪಕ್ಷಗಳ ಸರ್ಕಾರವಿದ್ದಾಗಲೂ ಅಂತರ್ಯದಲ್ಲಿ ಭಜರಂಗಿಗಳಿಗೆ ಸಹಾಯ ಮಾಡುತ್ತಾ ಬಂದಿದ್ದ ಚಡ್ಡಿ ಮನಸ್ಸಿನ ಕೆಲ ಪೋಲೀಸರು ಹಾಗೂ ತಮ್ಮ ಪತ್ರಿಕೆಗಳಲ್ಲಿ ಕೋಮು ಕದನಗಳಿಗೆ ತುಪ್ಪ ಸುರಿಯುವ ಸುಳ್ಳು ಬರಹಗಳನ್ನು ವರದಿಗಳನ್ನು ಪ್ರಕಟಿಸುತ್ತಾ, ಮುಸ್ಲಿಮರ ವಿರುದ್ದ ಸಾಮಾನ್ಯ ಹಿಂದೂಗಳನ್ನು ಎತ್ತಿ ಕಟ್ಟುತ್ತಿದ್ದ ಪತ್ರಕರ್ತರ ಗೆಟಪ್ಪಿನ ಆರ್‌ಎಸ್‌ಎಸ್ ಸ್ವಯಂ ಸೇವಕರು ಇವರುಗಳ ಸಹಾಯದಿಂದಲೇ ಇಂದು ಸಂಘ ಪರಿವಾರ ಕರಾವಳಿಯಲ್ಲಿ ಈ ಮಟ್ಟಿಗೆ ಬೆಳೆದಿರುವುದು.

ಇಂದು ಬಿಜೆಪಿ ಸರ್ಕಾರ ರಚಿಸಿದ ನಂತರ ಇಂತಹ ಪೋಲೀಸ್ ಪತ್ರಕರ್ತರಿಗೆ ತಾವು ಕನಿಷ್ಠ ಅಂತರವನ್ನಾದರೂ ಸಂಘ ಪರಿವಾರದಿಂದ ಕಾಯ್ದುಕೊಳ್ಳಬೇಕು ಎಂಬುದು ಮರತೇ ಹೋಗಿದೆ. ಮೊನ್ನೆಯ ಚರ್ಚುಗಳ ಮೇಲಿನ ದಾಳಿ ಅನಂತರ ಕ್ರೈಸ್ತರ ಪ್ರತಿಭಟನೆಯ ಸಂದರ್ಭದಲ್ಲಿ ಇವರ ನಿರ್ಲಜ್ಜ ವರ್ತನೆ ಎಂತಹವರಿಗೂ ವಾಕರಿಕೆ ಬರುವಂತಿತ್ತು.

ಕರಾವಳಿಯ ಚಡ್ಡಿ ಪೋಲೀಸರ ನೇತೃತ್ವ ವಹಿಸಿದಂತಿರುವ ಇನ್ಸ್‌ಪೆಕ್ಟರ್ ಗಣಪತಿಯಂತೂ ಒಂದೆರಡು ದಿನಗಳ ಮಟ್ಟಿಗೆ, ತಾನು ಪೋಲೀಸ್ ಎಂಬುದುನ್ನು ಮರತೇ ಬಿಟ್ಟಿದ್ದ. ಪ್ರತಿಭಟನಾಕಾರರ ಮೇಲಿನ ಹಲ್ಲೆ, ಕುಲಶೇಖರ ಚರ್ಚ್‌ಗೆ ಬೆಳಿಗ್ಗಿನಿಂದ ಸಾಯಂಕಾಲದವರೆಗೆ ತನ್ನ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಗಣಪತಿ ಮುತ್ತಿಗೆ ಹಾಕಿಸಿದ್ದು, ಗೇಟ್ ಮುರಿದು ಕೊನೆಗೆ ಚರ್ಚ್‌ನೊಳಗೆ ಪ್ರವೇಶಿಸಿ ಅಮಾನುಷ ಲಾಠಿ ಚಾರ್ಜ್ ಮಾಡಿದ್ದು ಉದಾಹರಣೆ. ಖಾಕಿ ಪ್ಯಾಂಟಿನ ಬದಲು ಖಾಕಿ ಚಡ್ಡಿ ತೊಟ್ಟಂತೆ ಆಡುವ ಈತ ಇತ್ತೀಚಿಗೆ ಕುಡಿಯುವ ನೀರಿನ ಪ್ರತಿಭಟನೆಯಲ್ಲೂ ಆರ್‌ಎಸ್‌ಎಸ್ ನಿರ್ದೇಶನದಂತೆ ವಿನಾಕಾರಣ ಡಿವೈಎಫ್‌ಐ ಮತ್ತು ಸಿಪಿಐ(ಎಂ) ಕಾರ್ಯಕರ್ತರ ಮೇಲೂ ಲಾಠಿ ಚಾರ್ಜ್ ಹೆಸರಲ್ಲಿ ರಕ್ಕಸನಂತೆ ವರ್ತಿಸಿದ್ದ. ಅಷ್ಟಲ್ಲದೇ ಇಲ್ಲಿ ಪೋಲೀಸರೇ ಕ್ರೈಸ್ತರಿಗೆ ಸೇರಿದ ವಾಹನಗಳಿಗೆ ಕಲ್ಲು ತೂರಿ ಪುಡಿಗಟ್ಟಿರುವುದು ನಡೆದಿದೆ.

ಕೋಮುವಾದಿ ಚಡ್ಡಿಗಳೇ ನಾಚಿಕೊಳ್ಳುವಂತೆ ಪೊಲೀಸರು, ಪತ್ರಕರ್ತರು ನಡೆದು ಕೊಳ್ಳುತ್ತಾರೆಂದರೆ...

ಇಂತಹ ಪೋಲಿಸರನ್ನು ನಾಚಿಸುವಂತೆ ವರ್ತಿಸಿದ್ದು, ಇಲ್ಲಿನ ಕೆಲವು ಸ್ವಯಂ ಸೇವಕ ಪತ್ರಕರ್ತರು, ತೊಕ್ಕೊಟ್ಟುವಿನ ಪೆರ್ಮನ್ನೂರು ಚರ್ಚಿನಲ್ಲಿ ಅತಿ ಹೆಚ್ಚು ಪೋಲೀಸ್ ದೌರ್ಜನ್ಯ ನಡೆದಿದ್ದು ಇಲ್ಲಿ 500ಕ್ಕೂ ಹೆಚ್ಚು ಪ್ರತಿಭಟನಾಕಾರರು ನೆರೆದಿದ್ದರು. ಆರಂಭದಲ್ಲಿ ಇಲ್ಲಿ ಒಂದೆರಡು ಕಲ್ಲು ತೂರಾಟ ಕೂಡ ನಡೆದಿದೆ. ಇದನ್ನೇ ನೆಪವನ್ನು ಇಲ್ಲಿಗೆ ಎಸ್‌ಪಿ ನೇತೃತ್ವದಲ್ಲಿ ದೊಡ್ಡ ಪೋಲಿಸ್ ಪಡೆ ಬಂದು ಚರ್ಚ್‌ಗೆ ಮುತ್ತಿಗೆ ಹಾಕಿತು. ಸ್ಥಳೀಯ ಶಾಸಕ ಯು.ಟಿ. ಖಾದರ್ ಮತ್ತು ಚರ್ಚಿನ ಫಾದರ್ ಎಸ್‌ಪಿಯ ಬಳಿ ಬಂದು ಪರಿಸ್ಥಿತಿ ತಿಳಿಗೊಳಿಸಿ ಚರ್ಚ್ ನಲ್ಲಿದ್ದ ಜನರನ್ನು ಹೊರಗಡೆ ಕಳಿಸುವ ಬಗ್ಗೆ ಮಾತುಕತೆ ನಡೆಸತೊಡಗಿದ್ದರು. ಎಸ್‌ಪಿ ಯನ್ನು ಶಾಸಕ ಹಾಗೂ ಫಾದರ್ ಚರ್ಚ್‌ಗೆ ನುಗ್ಗದಂತೆ ಪರಿಪರಿಯಾಗಿ ವಿನಂತಿಸಿಕೊಳ್ಳುತ್ತಿದ್ದಂತೆ ಮಧ್ಯ ಪ್ರವೇಶಿಸಿದ್ದು ಇದೇ ಚಡ್ಡಿ ಪತ್ರಕರ್ತರು. ವಿಜಯಕರ್ನಾಟಕದ ಸುಧಾಕರ್ ಎರ್ಮಾಳ್, ಹಾಗೂ ಇವರ ಮರಿಸೈನ್ಯ, ಎಸ್‌ಪಿ ಮೌನವಾಗಿ ನಿಂತಿದ್ದಾಗಲೂ ಫಾದರ್ ಮತ್ತು ಯು.ಟಿ.ಖಾದರ್ ರನ್ನು ಗದರಿದ ಈ ಮಹಾನ್ ಪತ್ರಕರ್ತರು ಏರಿದ ದನಿಯಲ್ಲಿ 'ಹೋಗ್ರಿ ನಿಮ್ಮ ಹುಡುಗರಿಗೆ ಬುದ್ದಿ ಹೇಳಿ. ನಾವಂತೂ ಬಿಡುವುದಿಲ್ಲ ಚರ್ಚ್‌ಗೆ ನುಗ್ಗುವುದೇ' ಎಂದು ಅಬ್ಬರಿಸತೊಡಗಿ ತಾವೇ ಎಸ್‌ಪಿ ಎನ್ನುವ ರೀತಿಯಲ್ಲಿ ಅಬ್ಬರಿಸಿದ ಇವರ ಪರಿಗೆ ಸ್ಥಳದಲ್ಲಿದ್ದ ಇತರ ಪತ್ರಕರ್ತರು ಪೆಚ್ಚಾದರು.

ಇಷ್ಟಕ್ಕೂ ಸುಮ್ಮನಾಗದ ಇವರು ಎಸ್‌ಪಿಗೆ ಚರ್ಚ್‌ಗೆ ನುಗ್ಗಲು ಒತ್ತಾಯಿಸುತ್ತಾ ತಾವೇ ನೇರವಾಗಿ ಚರ್ಚ್‌ನ ಗೇಟ್ ಬಳಿ ಹೋಗಿ ಕ್ರೈಸ್ತ ಯುವಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸ ತೊಡಗಿದರು. ಇದರಿಂದ ಆಕ್ರೋಶಗೊಂಡ ಯುವಕರು ಈ ಚಡ್ಡಿ ಪತ್ರಕರ್ತನ ಮೇಲೆ ಒಂದೆರಡು ಕಲ್ಲು ಎಸೆದದ್ದೇ, ಎಸ್‌ಪಿಯನ್ನು ಒತ್ತಾಯಿಸಿ ಚರ್ಚ್‌ಗೆ ನುಗ್ಗಿಸಿಯೇ ಬಿಟ್ಟರು. ಚರ್ಚ್‌ಗೆ ನುಗ್ಗಿದ ಪೋಲೀಸರಿಗೆ ತಾವೇ ನಿರ್ದೇಶನ ಕೊಡುತ್ತಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು. ಪೋಲಿಸರು ಬಂಧಿಸಿ ಹೊರ ಕರೆದೊಯ್ಯುತ್ತಿದ್ದ ಕ್ರಿಶ್ಚಿಯನ್ ಯುವಕರಿಗೆ ಎಲ್ಲರ ಎದುರು ಸುಧಾಕರ್ ಎರ್ಮಾಳ್ ಭಾರಿ ಪ್ರತಿಭಟನೆ ಮಾಡುತ್ತೀರಾ ಎಂದು ಹಲ್ಲೆಯನ್ನು ನಡೆಸಿದ.

ಇದು ಕರಾವಳಿಯಲ್ಲಿ ಕೋಮುವಾದ ತಲುಪಿರುವ ಕರಾಳ ಹಂತ. ಕರಾವಳಿಯನ್ನು ಯಾರಾದರೂ ಈ ಮತೀಯ ಶಕ್ತಿಗಳಿಂದ ರಕ್ಷಿಸಲು ಸಾಧ್ಯವೇ?

- ಸಂಜಯ

ಅಣು ಒಪ್ಪಂದ : ಮನಮೋಹನ್ ಸಿಂಗ್ ಗೋಗರೆತ

2008ರ ಸೆಪ್ಟೆಂಬರ್ 25ರಂದು ಭಾರತ - ಅಮೇರಿಕಾ ಅಣು ಒಪ್ಪಂದಕ್ಕೆ ಸಹಿ ಹಾಕಲಾಗುವುದೆಂದು ನಿರೀಕ್ಷಿಸಲಾಗಿದ್ದರೂ, ಈ ಲೇಖನ ಮುದ್ರಣಕ್ಕೆ ಹೋಗುವವರೆಗೆ ಒಪ್ಪಂದಕ್ಕೆ ಸಹಿ ಬಿದ್ದಿಲ್ಲ. ಆದರೆ ಭಾರತದ ಪ್ರಧಾನಿ ಮನಮೋಹನ್‌ಸಿಂಗ್ ಮತ್ತು ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಶ್ ಒಬ್ಬರು ಇನ್ನೊಬ್ಬರನ್ನು ಹೊಗಳಿಕೊಳ್ಳುತ್ತಾ ತಮ್ಮ ಅನುಬಂಧವನ್ನು ಬಿಚ್ಚಿಟ್ಟಿದ್ದಾರೆ.

ಇವರಿಬ್ಬರಲ್ಲೂ ಒಂದು ಸಾಮ್ಯತೆ ಇದೆ. ಅದೇನೆಂದರೆ ಇಬ್ಬರೂ ತಮ್ಮ ತಮ್ಮ ದೇಶಗಳಲ್ಲಿ ಜನಪ್ರಿಯತೆ ಕಳೆದುಕೊಳ್ಳುತ್ತಿದ್ದಾರೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ಅಮೇರಿಕಾದಲ್ಲಿ ಶೇ.72ರಷ್ಟು ಜನರು ಬುಶ್ ಅವರ ನೀತಿಯ ವಿರುದ್ಧವಾಗಿದ್ದಾರೆ. ಭಾರತದಲ್ಲಿ ಮನಮೋಹನ್‌ಸಿಂಗ್‌ರವರು ಪ್ರಧಾನಮಂತ್ರಿಯಾದ ನಂತರ ಯಾವುದೇ ರಾಜ್ಯದಲ್ಲೂ ಕಾಂಗ್ರೆಸ್ ಸ್ವಂತ ಬಲದ ಮೇಲೆ ಅಧಿಕಾರ ಪಡೆದಿಲ್ಲ. ಅಸ್ಸಾಂನಲ್ಲಿ ಕೂಡಾ ಅಲ್ಲಿನ ಪ್ರಾದೇಶಿಕ ಪಕ್ಷದ ಸದಸ್ಯರ ಬೆಂಬಲ ಪಡೆದೇ ಅಧಿಕಾರ ನಡೆಸುತ್ತಿದೆ.

ಈಗಾಗಲೇ ಚರ್ಚಿಸಿದಂತೆ ಬುಶ್‌ರವರಿಗೆ ಮಿತ್ರರಾಗಿದ್ದ ಬ್ರಿಟನ್, ಜಪಾನ್, ಆಸ್ಟ್ರೇಲಿಯಾ ಮೊದಲಾದ ದೇಶಗಳ ಪ್ರಧಾನಿಗಳು ತಮ್ಮ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತೆಂಬುದು ಸತ್ಯ. ಬಹುಶ: ಅದೇ ಪರಿಸ್ಥಿತಿ ಭಾರತದ ಪ್ರಧಾನಿ ಮನಮೋಹನ್‌ಸಿಂಗ್ ಅವರಿಗೂ ಕಾದಿದೆ ಎಂಬಂತೆ ಕಾಣುತ್ತಿದೆ.

ಭಾರತದ ಜನರು ಬುಶ್‌ರನ್ನು ಪ್ರೀತಿಸುತ್ತಿದ್ದಾರೆಯೇ? :

'ಭಾರತದ ಜನ ನಿಮ್ಮನ್ನು ತುಂಬಾ ಪ್ರೀತಿಸುತ್ತಾರೆ' ಎಂದು ಮನಮೋಹನ್‌ಸಿಂಗ್‌ರವರು ಇನ್ನೊಂದು ಸುಳ್ಳನ್ನು ಅಮೇರಿಕಾದಲ್ಲಿ ಹರಿಯಬಿಟ್ಟರು. ಬ್ರಿಟೀಷರ ವಿರುದ್ಧ ಹೋರಾಟ ನಡೆಸಿ ಸ್ವಾತಂತ್ರ್ಯ ಗಳಿಸಿದ ಭಾರತದ ಜನತೆ ಅಮೇರಿಕಾದ ಯುದ್ಧದಾಹಿ ನೀತಿಯನ್ನು ಯಾವಾಗಲೂ ಖಂಡಿಸುತ್ತಿದ್ದರು. ಅಫಘಾನಿಸ್ತಾನ, ಇರಾಕ್ ಮೇಲಿನ ಅಮೇರಿಕಾದ ದಾಳಿ, ಮುಗ್ಧ ಜನರ ಹತ್ಯೆಯ ನಂತರ ಭಾರತದ ಜನತೆ ತೀವ್ರವಾಗಿ ಪ್ರತಿಭಟಿಸಿದರು. ಬುಶ್ ಅವರನ್ನು ಕ್ರೂರಿ ಎಂದೇ ಭಾರತದ ಬಹುತೇಕ ಪ್ರಜ್ಞಾವಂತ ಜನತೆ ಬಣ್ಣಿಸಿದರು.

ಇದೀಗ ದೂರದೃಷ್ಟಿ ಇಲ್ಲದ ಆರ್ಥಿಕ ನೀತಿಗಳಿಂದಾಗಿ ಒಂದೊಂದೇ ದೈತ್ಯ ಕಂಪನಿಗಳು ಮುಳುಗಿ ಅಮೇರಿಕಾದ ಜನತೆಯೂ ಸೇರಿದಂತೆ, ಭಾರತದ ಉದ್ಯೋಗಿಗಳನ್ನು ನಿರುದ್ಯೋಗದ ಕೂಪಕ್ಕೆ ದೂಡುತ್ತಿರುವ ಸಂದರ್ಭದಲ್ಲಿ 'ಅಂಕಲ್ ಬುಶ್ ನಾವು ನಿಮ್ಮನ್ನು ಪ್ರೀತಿಸುತ್ತೇವೆ' ಎಂದು ಭಾರತದ ಜನತೆ ಹೇಳಲು ಸಾಧ್ಯವೇ? ಅಮೇರಿಕಾದ ದೊಡ್ಡಣ್ಣನ ಎಂಜಲು ತಿನ್ನುವವರು ಮಾತ್ರ ಹಾಗೆ ಹೇಳಲು ಸಾಧ್ಯ.

ಹೈಡ್ ಕಾಯಿದೆಗೆ ಬದ್ಧ : ಅಮೇರಿಕಾದ ಸಂಸತ್ತಿನ ವಿವಿಧ ಹಂತಗಳಲ್ಲಿ ಚರ್ಚಿತವಾಗಿರುವ ಭಾರತ-ಅಮೇರಿಕಾ ನಾಗರಿಕ ಪರಮಾಣು ಒಪ್ಪಂದವು ಅಮೇರಿಕಾ ದೇಶದ ಹೈಡ್ ಕಾಯಿದೆ, ಅಣು ಇಂಧನ ಕಾಯಿದೆ ಮತ್ತಿತರ ಕಾನೂನುಗಳಿಗೆ ಒಳಪಡುತ್ತದೆ ಎಂದು ಅಮೆರಿಕಾ ಕಾಂಗ್ರೆಸ್‌ನಲ್ಲಿ ಮಂಡಿಸಲಾಗುತ್ತಿರುವ ಮಸೂದೆ(bill)ಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಅಂದರೆ, ಯಾವುದೇ ಕಾರಣಕ್ಕಾಗಿ ಅಮೇರಿಕಾದಿಂದಾಗಲೀ, ಭಾರತದಿಂದಾಗಲೀ ಒಪ್ಪಂದವು ರದ್ದಾದರೆ ಭಾರತಕ್ಕೆ ರಿಯಾಕ್ಟರ್, ಯುರೇನಿಯಂ ಇತ್ಯಾದಿ ಸಲಕರಣೆಗಳನ್ನು ಪೂರೈಸದಂತೆ ವಿತರಣಾ ಗುಂಪಿನ 45 ರಾಷ್ಟ್ರಗಳ ಮೇಲೆ ಒತ್ತಡ ಹೇರುವ ಹಕ್ಕನ್ನು ಅಮೇರಿಕಾ ಉಳಿಸಿಕೊಂಡಿದೆ.

ಹಾಗಾದರೆ 2006 ರಲ್ಲಿ ಭಾರತದ ಸಂಸತ್ತಿಗೆ ಪ್ರಧಾನಮಂತ್ರಿ ಮನಮೋಹನ್‌ಸಿಂಗ್ ನೀಡಿದ ವಾಗ್ದಾನ ಎಲ್ಲಿ ಹೋಯ್ತು?

ಭಾರತದ ಪ್ರಧಾನಿ ಮತ್ತು ಅಮೇರಿಕಾದ ಅಧ್ಯಕ್ಷರೊಂದಿಗೆ 2005 ಜುಲೈನಲ್ಲಿ ನಡೆದ ಜಂಟಿ ಒಪ್ಪಂದ ಹಾಗೂ 2006 ಮಾರ್ಚ್‌ನಲ್ಲಿ ಸಹಿ ಹಾಕಿದ್ದ 'ವಿಂಗಡಣಾ ಯೋಜನೆ' (seperation plan) ಎರಡರ ಕುರಿತು ಭಾರತದ ಸಂಸತ್ತಿನಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿತ್ತು. ಆಗ ಮನಮೋಹನ್‌ಸಿಂಗ್‌ರವರು 9 ಭರವಸೆಗಳನ್ನು ನೀಡಿದ್ದರು. 'ಒಪ್ಪಂದಗಳಲ್ಲಿರುವ ಅಂಶಗಳನ್ನು ಬುಶ್ ಅವರ ಗಮನಕ್ಕೆ ತರಲಾಗಿದ್ದು ಅಂತಿಮವಾಗಿ ಸಹಿ ಹಾಕುವ ಒಪ್ಪಂದದಲ್ಲಿ ಈ ಅಂಶಗಳು ಇದ್ದಲ್ಲಿ ಭಾರತವು ಬೇರೆಯೇ ನಿರ್ಧರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡುವುದಾಗಿಯೂ, ಹೇಳಿದ್ದರು.

ಆದರೆ ಈಗ ಆಗುತ್ತಿರುವುದೇನು? 2006 ರಲ್ಲಿ ಭಾರತದ ಸಂಸತ್ತಿನಲ್ಲಿ ಚರ್ಚೆ ನಡೆದ ನಂತರ ಅಮೇರಿಕಾದಲ್ಲಿ ಹೈಡ್ ಕಾಯಿದೆ ಜ್ಯಾರಿಗೆ ಬಂದಿದೆ. ಇರಾನ್‌ನ ಪರಮಾಣು ಮನರ್ ಉತ್ಪಾದನೆಯೂ ಎಲ್ಲಾ ವಿಷಯಗಳಲ್ಲಿ ಭಾರತದ ನಿಲುವು ಅಮೇರಿಕಾದ ನಿಲುವಿಗೆ ಪೂರಕವಾಗಿರಬೇಕು. ಇಲ್ಲವಾದಲ್ಲಿ ಒಪ್ಪಂದವನ್ನು ರದ್ದುಗೊಳಿಸುವ ಹಕ್ಕನ್ನು ಅಮೇರಿಕಾ ಇಟ್ಟುಕೊಂಡಿದೆ. ಅಮೇರಿಕಾ ಅಧ್ಯಕ್ಷರು ಜನವರಿ 2008 ರಂದು ಅಲ್ಲಿನ ಕಾಂಗ್ರೆಸ್ (ಸಂಸತ್ತು)ಗೆ ಬರೆದ ಪತ್ರವಾಗಲೀ, ಈಗ ಅಮೇರಿಕಾದ ವಿದೇಶಾಂಗ ವ್ಯವಹಾರಗಳ ಇಲಾಖೆಯಲ್ಲಿ ಚರ್ಚಿತವಾಗಿರುವ ವಿಷಯಗಳಾಗಲೀ, ಈ ಅಂಶಗಳನ್ನು ಸ್ಪಷ್ಟಪಡಿಸಿದೆ.

ಹಾಗಾದರೆ 2006 ರಲ್ಲಿ ಮನಮೋಹನ್‌ಸಿಂಗ್ ಭಾರತದ ಸಂಸತ್ತಿಗೆ ನೀಡಿದ 9 ಭರವಸೆ ಏನಾಯ್ತು? ಹೀಗಿದ್ದೂ ಭಾರತದ ಜನತೆ ಬುಶ್‌ರನ್ನು ಪ್ರೀತಿಸೋದು ಹೇಗೆ? - ನೀವೇ ಹೇಳಿ ಮನಮೋಹನ್ ಸಿಂಗ್‌ರೇ ನಿಮ್ಮ ಮನಮೋಹಕ ಮಾತುಗಳಿಗೆ ಭಾರತದ ಜನತೆ ಮರುಳಾಗುವುದಿಲ್ಲ.

- ಬಾಲಕೃಷ್ಣ ಶೆಟ್ಟಿ

ಬುಶ್ ಜನಪ್ರಿಯತೆ ಅತ್ಯಂತ ಕೆಳಮಟ್ಟದಲ್ಲಿ

ಸೆಪ್ಟೆಂಬರ್ 25 ರಂದು ನ್ಯೂಯಾರ್ಕ್ ನಲ್ಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಮೇರಿಕಾದ ಅಧ್ಯಕ್ಷ ಜಾರ್ಜ್ ಬುಶ್‌ರವರು ಹೊರಡಲನು ವಾಗಿದ್ದರು. ಬೆಳಿಗ್ಗೆ 9-45ರ ಸಮಯ. ಕಛೇರಿಗೆ ತೆರಳುವ ಜನರಿಗೆ ರಸ್ತೆ ದಾಟಲೂ ಪೋಲೀಸರು ಬಿಡುತ್ತಿರಲಿಲ್ಲ. ಆದ್ದರಿಂದ ಜನನಿಬಿಡವಾಗಿತ್ತು. 12 ಕಾರುಗಳ ರಕ್ಷಣೆಯೊಂದಿಗೆ ಅಧ್ಯಕ್ಷರ ವಾಹನ ಚಲಿಸಿತು. ಬುಶ್ ಜನರತ್ತ ಕೈಬೀಸಿದರು. ಆದರೂ ಯಾರೂ ವಾಪಾಸು ಕೈಬೀಸಲಿಲ್ಲ. ಬುಶ್‌ರ ಜನಪ್ರಿಯತೆ ಅಮೇರಿಕಾದಲ್ಲಿ ಅಷ್ಟೊಂದು ಕುಗ್ಗಿದೆ.

ಇತ್ತೀಚಿಗೆ ನಡೆದ ಸಮೀಕ್ಷೆಯೊಂದರಲ್ಲಿ ಶೇ.72ರಷ್ಟು ಅಮೇರಿಕನ್ನರು ಬುಶ್ ಅವರ ನೀತಿಗಳನ್ನು ತಿರಸ್ಕರಿಸಿದರು. ಅಮೇರಿಕಾದ ಬಹುಸಂಖ್ಯಾತ ಜನರಿಂದ ತಿರಸ್ಕರಿಸಲ್ಪಟ್ಟ ಬುಶ್ ಮನಮೋಹನ್ ಸಿಂಗ್‌ರವರಿಗೆ ಬೇಕಾದವನಾಗಿದ್ದರೆಂದರೆ ಆಶ್ಚರ್ಯ.

ಕಲ್ಯಾಣ ಮಂಡಳಿಯ ಕಾರ್ಡ್‌ಗಾಗಿ ಕಾಯುತ್ತಿರುವ ಕಟ್ಟಡ ಕಾರ್ಮಿಕರು

ಕಟ್ಟಡ ಕಾರ್ಮಿಕರ ದೀರ್ಘ ಹೋರಾಟದ ನಂತರ ರಾಜ್ಯ ಸರ್ಕಾರ ಕಲ್ಯಾಣ ಮಂಡಳಿ ರಚನೆ ಮಾಡಿ ಹನ್ನೊಂದು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. 10 ಲಕ್ಷಕ್ಕಿಂತ ಹೆಚ್ಚಿನ ಹಣದ ನಿರ್ಮಾಣ ಕೆಲಸಗಳಿಗೆ ಶೇಖಡ 1 ರಂತೆ ಹೆಚ್ಚಿನ ತೆರಿಗೆಯನ್ನು ಸರ್ಕಾರ ಸಂಗ್ರಹಿಸಿ ಮಂಡಳಿಗೆ ನೀಡುತ್ತದೆ. ಈಗ ಕಲ್ಯಾಣ ಮಂಡಳಿಯಲ್ಲಿ 100 ಕೋಟಿ ರೂ.ಗಳ ಜಮಾ ಆಗಿದೆ. ಅದಕ್ಕೆ ಬಡ್ಡಿಯಲ್ಲದೆ ಹೊಸ ನಿರ್ಮಾಣಗಳಿಂದ ಹಣ ದೊಡ್ಡ ರೀತಿಯಲ್ಲಿ ಹರಿದುಬರುತ್ತಿದೆ.

ಮಂಡಳಿಯ ಕಲ್ಯಾಣ ಕಾರ್ಯಕ್ರಮವನ್ನು ಪಡೆಯಬೇಕಾದರೆ ಕಟ್ಟಡ ಕಾರ್ಮಿಕರು ಮಂಡಳಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಪ್ರತಿ ತಿಂಗಳು 10 ರೂ.ನಂತೆ ವರ್ಷಕ್ಕೆ 120 ರೂ. ಚಂದಾ ಸಂದಾಯ ಮಾಡಬೇಕು. 1-11-2006 ರಂದು ಕಲ್ಯಾಣ ಮಂಡಳಿ ರಚನೆಯಾಗಿದ್ದು ಇಲ್ಲಿಯವರೆಗೂ ಕಾರ್ಮಿಕರನ್ನು ನೋಂದಣಿ ಮಾಡಲು ಯಾವುದೇ ಸಿಬ್ಬಂದಿಯನ್ನು ಕಾರ್ಮಿಕ ಫಲಾನುಭಾವಿ ಅಧಿಕಾರಿಗಳಿಗೆ ನೀಡಿಲ್ಲ. ಇದರಿಂದ ನೋಂದಣಿಗೆ ಕಾರ್ಮಿಕರೂ ಅರ್ಜಿ ಸಲ್ಲಿಸಿದರೆ ನೋಂದಾಯಿತ ಕಾರ್ಡು ಪಡೆಯಲು ಕಾರ್ಮಿಕರು ಕನಿಷ್ಠ ಎರಡು ತಿಂಗಳು ಕಾಯಬೇಕಾಗಿದೆ.

10-7-2008 ರಂದು ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಕಲ್ಯಾಣ ಮಂಡಳಿ ಹೆರಿಗೆ ಭತ್ಯೆ, ವಿದ್ಯಾರ್ಥಿ ವೇತನ, ವೈದ್ಯಕೀಯ ಮುಂತಾದ ಸೌಲಭ್ಯಗಳ ಹಣವನ್ನು ಹೆಚ್ಚಳ ಮಾಡುವುದರ ಜೊತೆಗೆ ನೋಂದಣಿ ಮಾಡಲು ಸಿಬ್ಬಂದಿಯನ್ನು ನೀಡುವುದಾಗಿ ಹೇಳಿದರು.

15-7-2008 ರಂದು ಸಿಐಟಿಯು ನಾಯಕತ್ವದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಡಬ್ಲ್ಯುಎಫ್ಐ) ಸಂಘದ ವತಿಯಿಂದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ಧರಣಿ ಕಾರ್ಯಕ್ರಮ ನಡೆಸಿ ಕಾರ್ಮಿಕ ಮಂತ್ರಿಗಳಿಗೆ ಸಿಬ್ಬಂದಿ ಕೊರತೆ ಮತ್ತು ಇತರ ಬೇಡಿಕೆಗಳಿಗೆ ಮನವಿ ಸಲ್ಲಿಸಿತು. ಆಗ ಸರ್ಕಾರ ಅಧಿಕಾರಿಗಳಿಗೆ ನೊಂದಣಿಯನ್ನು ತಡ ಮಾಡದೆ ಬೇಗನೆ ಮಾಡಿ ಕಾರ್ಮಿಕರಿಗೆ ಕಾರ್ಡ್‌ಗಳನ್ನು ನೀಡಬೇಕೆಂದು ರಾಜ್ಯದ ಎಲ್ಲ ಕಾರ್ಮಿಕ ಕಛೇರಿಗಳಿಗೂ ಸುತ್ತೋಲೆ ಹೊರಡಿಸಿದರು. ಇಂಗ್ಲೀಷ್‌ನಲ್ಲಿ ಮಾತ್ರವಿದ್ದ ನೋಂದಣಿ ಅರ್ಜಿಯ ಜೊತೆಗೆ ಕನ್ನಡದಲ್ಲಿಯೂ ಅರ್ಜಿಗಳಿಗೂ ಒತ್ತಾಯಿಸಿದಕ್ಕೆ ಕನ್ನಡದಲ್ಲಿಯೂ ಅರ್ಜಿಗಳನ್ನು ಮುದ್ರಿಸಿಕೊಟ್ಟರು. ಸಿಬ್ಬಂದಿಯನ್ನು ಗುತ್ತಿಗೆ ಆಧಾರಲ್ಲಿ ನೇಮಕ ಮಾಡಿಕೊಳ್ಳುವುದಾಗಿ ಹೇಳಿದರು.

ಆದರೆ ಮೂರು ತಿಂಗಳು ಕಳೆದರು ಯಾವುದೇ ಸಿಬ್ಬಂದಿಯನ್ನು ನೇಮಕ ಮಾಡಲಿಲ್ಲ. ಈ ಕಾರಣದಿಂದ ಕಾರ್ಮಿಕ ಸಂಘಗಳ ನಾಯಕರುಗಳೇ ಕಛೇರಿಯಲ್ಲಿ ಕುಳಿತು ಕಾರ್ಡ್‌ಗಳಿಗೆ ಮತ್ತು ದಾಖಲಾತಿ ಪುಸ್ತಕಗಳಿಗೆ ಬರೆಯಬೇಕಾಗಿದೆ. ಇಲ್ಲದಿದ್ದರೆ ಎರಡು ಮೂರು ತಿಂಗಳಾದರೂ ನೋಂದಾಯಿತ ಕಾರ್ಡ್‌ಗಳು ಕಾರ್ಮಿಕರಿಗೆ ಸಿಗುವುದಿಲ್ಲ. ಇದರಿಂದ ಬೇರೆ ಬೇರೆ ರಾಜ್ಯ ಮತ್ತು ಜಿಲ್ಲೆಗಳಿಂದ ವಲಸೆ ಬಂದಿರುವ ಬಡ ಅವಿದ್ಯಾವಂತರಾದ ಕಾರ್ಮಿಕರು ಮಂಡಳಿಯಲ್ಲಿ ನೋಂದಣಿ ಮಾಡಲು ಇಷ್ಟು ತಿಂಗಳಾದರೆ ಸೌಲಭ್ಯ ಪಡೆಯಲು ಎಷ್ಟು ವರ್ಷಗಳು ಬೇಕೋ ಎಂದು ಕಲ್ಯಾಣ ಕಾರ್ಯಕ್ರಮದ ಬಗ್ಗೆ ನಂಬಿಕೆ ಕಳೆದುಕೊಂಡಿದ್ದಾರೆ.

ಕಟ್ಟಡ ಕಾರ್ಮಿಕರ ದೀರ್ಘ ಹೋರಾಟಕ್ಕೆ ರಾಜ್ಯ ಸರ್ಕಾರ ಸ್ಪಂದಿಸಿ ಹನ್ನೊಂದು ಕಲ್ಯಾಣ ಕಾರ್ಯಕ್ರಮಗಳನ್ನು ರಾಜ್ಯ ಕಲ್ಯಾಣ ಮಂಡಳಿ ರಚನೆ ಮಾಡಿ ಜಾರಿಗೆ ತಂದಿದೆ. ಇದರಲ್ಲಿ ಕೆಲವು ಲೋಪಗಳ ಸರಿಪಡಿಸುವಿಕೆ ಅಗತ್ಯವಿದೆ.

ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯ ವಿರುದ್ಧ ಸಿಐಟಿಯು ನಾಯಕತ್ವದ ಕಟ್ಟಡ ಕಾರ್ಮಿಕರ ಸಂಘ 26-9-2008 ರಂದು ಕಾರ್ಮಿಕ ಆಯುಕ್ತರ ಕಛೇರಿಯ ಮುಂದೆ

1. ಕಲ್ಯಾಣ ಮಂಡಳಿಗೆ ಸಿಬ್ಬಂದಿಯನ್ನು ನೇಮಕ ಮಾಡಿ ಕಾರ್ಡ್ ನೀಡುವಲ್ಲಿ ಆಗುತ್ತಿರುವ ತೊಂದರೆಗಳನ್ನು ತಕ್ಷಣ ಸರಿಪಡಿಸಬೇಕು.
2. ಕಾರ್ಮಿಕ ಕಛೇರಿ ಮದ್ಯಾಹ್ನ 3 ಗಂಟೆಯ ನಂತರ ಕಾರ್ಮಿಕರ ಸಂಪರ್ಕ ಚಟುವಟಿಕೆಗಳು ಆರಂಭವಾಗುವುದರಿಂದ ಆ ಸಂದರ್ಭದಲ್ಲಿ ಹಲವರು ಕಾರ್ಮಿಕರ ಕೇಸುಗಳು ವಿಚಾರಣೆ ನಡೆಯುತ್ತಿರುವುದರಿಂದ ಕಟ್ಟಡ ಕಾರ್ಮಿಕರ ಅರ್ಜಿಗಳನ್ನು ನೀಡಲು ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಅದಕ್ಕೆ ಅರ್ಜಿ ಸ್ವೀಕರಿಸಲು ಮಂಡಳಿ ಒಂದು ಸ್ವೀಕೃತಿ ಕೇಂದ್ರವನ್ನು ತೆರೆಯಬೇಕು ಎಂದು.
3. ಮಂಡಳಿಯ ನಿಯಮದಂತೆ ಕಾರ್ಮಿಕರಿಗೆ ಆರೋಗ್ಯದ ಸಮಸ್ಯೆಯಾದರೆ ಪರಿಹಾರ ಪಡೆಯಬೇಕಾದರೆ ಇಂದು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಗಿದೆ. ಇದನ್ನು ಖಾಸಗಿ ಆಸ್ಪತ್ರೆಗಳಿಗೂ ವಿಸ್ತರಿಸಬೇಕು ಎಂದು
4. ಕ್ವಾರಿ ಕಾರ್ಮಿಕರು ಮತ್ತು ಮರಳು ತೆಗೆಯುವವರನ್ನು ಕಟ್ಟಡ ಕಾರ್ಮಿಕರೆಂದು ಪರಿಗಣಿಸಬೇಕು ಎಂದು.

5) ಕಟ್ಟಡ ಕಾರ್ಮಿಕರಿಗೆ ವಸತಿ ನಿವೇಶನ ನೀಡಬೇಕು ಎಂಬ ಬೇಡಿಕೆಗಳಿಗಾಗಿ ಧರಣಿ ಕಾರ್ಯಕ್ರಮ ನಡೆಸಲಾಯಿತು.

ಧರಣಿಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಫೆಡರೇಷನ್ ಪ್ರಧಾನ ಕಾರ್ಯದರ್ಶಿಯಾದ ಕಾಂ. ವೀರಸ್ವಾಮಿಯವರು "ಈ ದಿನ ದೆಹಲಿಯಲ್ಲಿ ಎಲ್ಲ ರಾಜ್ಯಗಳ ಕಟ್ಟಡ ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಸೇರಿ 1996ರ ಕಟ್ಟಡ ನಿರ್ಮಾಣ ಶ್ರಮೀಕರಣ ಮತ್ತು ಕ್ರಮಿಕರಣ ಅಖಿಲ ಭಾರತ ಕಾಯ್ದೆ ಕೇರಳ, ತಮಿಳುನಾಡು, ಕರ್ನಾಟಕ, ಪಶ್ಚಿಮ ಬಂಗಾಳ, ತ್ರಿಪುರ ರಾಜ್ಯಗಳಲ್ಲಿ ಮಾತ್ರ ಜಾರಿಯಲ್ಲಿದ್ದು ದೇಶದ ಎಲ್ಲ ರಾಜ್ಯಗಳಲ್ಲೂ ಜಾರಿಗೆ ತರಬೇಕು ಎಂದರು. ಕಟ್ಟಡ ನಿರ್ಮಾಣ ಸಾಮಗ್ರಿಗಳಾದ ಸಿಮೆಂಟ್, ಕಬ್ಬಿಣ, ಮರಳು ಬೆಲೆಗಳನ್ನು ಇಳಿಸಬೇಕು. ಅಂತರರಾಜ್ಯ ವಲಸೆ ಕಾರ್ಮಿಕರ 1979 ಮತ್ತು 1983 ರ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ರೂ.10 ಲಕ್ಷಕ್ಕಿಂತ ಮೇಲ್ಪಟ್ಟ ಕಟ್ಟಡಗಳಿಗೆ ಕಾಯಿದೆಯ ಸೆಸ್ ಮಿತಿಯನ್ನು ಹೆಚ್ಚಿಸಬಾರದು. ದೇಶದ ಎಲ್ಲಾ ಕಟ್ಟಡ ಕಾರ್ಮಿಕರಿಗೂ ವಸತಿ ನೀಡಬೇಕೆಂದು ಪಾರ್ಲಿಮೆಂಟ್ ಭವನದ ಮುಂದೆ ಧರಣಿ ನಡೆಸುತ್ತಿದ್ದರೆ ರಾಜ್ಯದ ಬಳ್ಳಾರಿ, ರಾಯಚೂರು ಗುಲಬರ್ಗಾ ಮುಂತಾದ ಜಿಲ್ಲೆಯಿಂದ ಕಾರ್ಮಿಕರು ದೆಹಲಿಯ ಹೋರಾಟಕ್ಕೆ ಹೋಗಿದ್ದಾರೆ. ಆದರೆ ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕರನ್ನು ಮಂಡಳಿಯಲ್ಲಿ ನೋಂದಣಿ ಮಾಡುವುದರಲ್ಲಿ ಸಮಸ್ಯೆ ಇರುವುದರಿಂದ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಧರಣಿ ಕಾರ್ಯಕ್ರಮ ನಡೆಸುತ್ತಿದ್ದೇವೆ. ಕಾರ್ಮಿಕರು ಸಂಘ ಬಲಪಡಿಸಿ ಮಂಡಳಿಯ ಸೌಲಭ್ಯ ಪಡೆಯುವಲ್ಲಿ ಇರುವ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಬೇಕು ಎಂದರು.

ನಂತರ ಕಾರ್ಮಿಕ ಆಯುಕ್ತರು ಸಂಘದ ನಾಯಕರುಗಳನ್ನು ಕರೆದು ಸಮಸ್ಯೆ ಬಗ್ಗೆ ಚರ್ಚೆ ನಡೆಸಿ ಸ್ವೀಕೃತಿ ಕೇಂದ್ರ ತೆರೆಯಲು ಒಪ್ಪಿದರ ಜೊತೆಗೆ ಮುಂದಿನ ತಿಂಗಳಲ್ಲಿ ಮಂಡಳಿಯ ತಂತ್ರಾಂಶ ಸಿದ್ಧವಾಗುತ್ತಿದ್ದು ಸಿಬ್ಬಂದಿಯನ್ನು ನೇಮಕ ಮಾಡಲಾಗುವುದು ಎಂದು ಹೇಳಿದರು. ಧರಣಿ ಕಾರ್ಯಕ್ರಮಕ್ಕೆ ಜಿಲ್ಲಾ ಸಂಚಾಲಕರಾದ ಎಸ್.ಶಂಕರ್ ಸ್ವಾಗತಿಸಿದರು. ಉತ್ತರ ವಲಯದ ಟಿ.ಎಂ.ರಾಮಕೃಷ್ಣ ವಂದಿಸಿದರು. ರಾಜಾಜಿನಗರ ವಲಯ ಪ್ರದೇಶದಿಂದ ಹೆಚ್ಚಿನ ಕಾರ್ಮಿಕರು ಹಾಜರಿದ್ದರು.

ವರದಿ : ಎಸ್.ಶಂಕರ್

'ಜನಶಕ್ತಿ' ತಲುಪುತ್ತಿಲ್ಲವೇ ?

'ಜನಶಕ್ತಿ ಕನ್ನಡ ವಾರಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪುತ್ತಿಲ್ಲ ಎಂಬ ಹಾಗೂ ತಲುಪುತ್ತಲೇ ಇಲ್ಲ ಎಂಬ ದೂರುಗಳು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿದೆ.

ವಿಳಾಸ ಸರಿಯಾಗಿದ್ದಾಗಲೂ, ನಿಗದಿತ ವೇಳಾಪಟ್ಟಿಯಂತೆ ಪತ್ರಿಕೆಯನ್ನು ಅಂಚೆಗೆ ಹಾಕುತ್ತಿದ್ದಾಗಲೂ ಇಂತಹ ದೂರುಗಳು ಬರುತ್ತಿದೆ ಎಂಬುದನ್ನು ಗಮನಿಸಲಾಗಿದೆ.

ಮುಂದೆ ತಮಗೆ ಸಮಯಕ್ಕೆ ಸರಿಯಾಗಿ ಪತ್ರಿಕೆ ತಲುಪದಿದ್ದರೆ ಅಥವಾ ಬರದೇ ಹೋದರೆ ಹೀಗೆ ಮಾಡಿ- ವೀರಣ್ಣ ಕಲ್ಮನಿ- 94480141132 ಇವರನ್ನು ಸಂಪರ್ಕಿಸಿ, ವಿಳಾಸ ಸರಿಯಾಗಿದೆಯೇ ಎಂದು ಖಚಿತ ಮಾಡಿಕೊಳ್ಳಿ ಮತ್ತು ಈ ಕೆಳಕಂಡವರಿಗೆ ಒಂದು ಲಿಖಿತ ದೂರು ದಾಖಲಿಸಿ. ದೂರಿನ ಪ್ರತಿಯನ್ನು ಪತ್ರಿಕೆಯ ಕಛೇರಿಗೆ ಸಹ ಕಳಿಸಿ, ನಾವು ಮುಂದಿನ ಕ್ರಮವಹಿಸಲು ಅನುಕೂಲವಾಗುತ್ತದೆ.

ವಿಳಾಸ:

ಇವರಿಗೆ, ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ಸ್ (ಉದಾ:) ಕೋಲಾರ/ ಗುಲ್ಬರ್ಗಾ / ಹಾಸನ ಡಿವಿಜನ್ ಇತ್ಯಾದಿ (ಸಂಬಂಧಿಸಿದ ಜಿಲ್ಲಾ ಕೇಂದ್ರ. ಉದಾ: ಹಾಸನ)

ವಿ.ಸೂ. ದಾವಣಗೆರೆ ಜಿಲ್ಲೆಯ ದೂರನ್ನು ಚಿತ್ರದುರ್ಗಕ್ಕೆ ಕಳಿಸಬೇಕು. ರಾಮನಗರ ಜಿಲ್ಲಾ ಕಛೇರಿ ಚನ್ನಪಟ್ಟಣದಲ್ಲಿದೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದ ದೂರನ್ನು ನೇರವಾಗಿ ಜನಶಕ್ತಿ ಕಛೇರಿಗೆ ಕಳಿಸಿಕೊಡಿ.

ಕೋರಿಯರ್ ಬಗೆಗಿನ ದೂರುಗಳು

ಕೋರಿಯರ್ ಮೂಲಕ ಏಜೆಂಟರಿಗೆ ಹೋಗುವ ಪತ್ರಿಕೆಗಳು ಸಹ ತೀರಾ ತಡವಾಗಿ ತಲುಪುತ್ತಿರುವುದಾಗಿ ದೂರುಗಳು ಬರುತ್ತಿವೆ.

ಪ್ರತಿ ಸೋಮವಾರದಂದು ಕೋರಿಯರ್ ಮೂಲಕ ಹೋಗುವ ಪತ್ರಿಕೆಗಳು ಸಹ ನಿಗದಿಯಂತೆ ರವಾನೆಯಾಗುತ್ತಿದ್ದು ಒಂದೆರಡು ದಿನಗಳಲ್ಲಿ ತಮಗೆ ಪತ್ರಿಕೆ ತಲುಪದಿದ್ದಲ್ಲಿ ತತ್‌ಕ್ಷಣ ತಾವು ವೀರಣ್ಣ ಕಲ್ಮನಿಯವರಲ್ಲಿ ದೂರು ದಾಖಲಿಸುವುದು ಮತ್ತು ತೀರಾ ತಡವಾಗಿ ಅಂದರೆ 2-3 ವಾರಗಳ ಪತ್ರಿಕೆಯನ್ನು ಒಟ್ಟಿಗೆ ತಂದುಕೊಟ್ಟಲ್ಲಿ ಕೊರಿಯರ್ ವ್ಯಕ್ತಿ ತಮ್ಮ ಬಳಿಯಲ್ಲಿರುವಾಗಲೇ ತತ್‌ಕ್ಷಣ ಸಂಪರ್ಕಿಸುವುದು.

ಸಂ-

ಧಾಳಿ, ಗಲಭೆ: ಸಿಪಿಐ(ಎಂ) ನಿಯೋಗ ಭೇಟಿ

ಬೆಂಗಳೂರಿನ ವಿವಿಧ ಕಡೆ ಚರ್ಚುಗಳ ಮೇಲೆ ದಾಳಿ ಹಾಗೂ ಗಂಗೊಂಡನಹಳ್ಳಿಯ ಗಣೇಶ ವಿಸರ್ಜನೆ ಸಂದರ್ಭದ ಗಲಭೆಪೀಡಿತ ಸ್ಥಳಕ್ಕೆ ಸೆ.23 ರಂದು ಸಿಪಿಐ (ಎಂ) ಪಕ್ಷದ ನಿಯೋಗ ಭೇಟಿಕೊಟ್ಟು ಪರಿಶೀಲಿಸಿ, ಭಜರಂಗದಳದ ಈ ಧಾಳಿಯ ಹಿಂದೆ ಸರ್ಕಾರದ ಕುಮ್ಮಕ್ಕು ಇರುವುದನ್ನು ಸಿಪಿಐ(ಎಂ) ಪಕ್ಷವು ಮನಗಂಡಿತು.

ಚರ್ಚುಗಳ ಮೇಲಿನ ಧಾಳಿ ಅಲ್ಪಸಂಖ್ಯಾತರಲ್ಲಿ ಭಯ ಹುಟ್ಟಿಸುವುದು ಇದರ ಹಿಂದೆ ಇರುವ ಷಡ್ಯಂತ್ರ ಈ ಧಾಳಿಯ ಸಾರಥ್ಯ ವಹಿಸಿದ್ದ ಭಜರಂಗದಳವನ್ನು ಮಟ್ಟಹಾಕದೇ ಬಿಜೆಪಿ ಸರ್ಕಾರವು ತನ್ನ ಮಾತೃ ಪ್ರೇಮವನ್ನು ಮೆರೆದಿದೆ ಎಂದು ನಿಯೋಗ ಅಭಿಪ್ರಾಯಪಟ್ಟಿತು.

ಈ ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿ (ಮಾಜಿ ಶಾಸಕರು), ಎಸ್.ವೈ.ಗುರುಶಾಂತ್, ಮಾರುತಿ ಮಾನ್ಪಡೆ, ಬೆಂಗಳೂರು ಜಿಲ್ಲಾ ಮುಖಂಡರಾದ ಹೆಚ್.ಎನ್. ಗೋಪಾಲಗೌಡ, ಕೆ.ಎನ್. ಉಮೇಶ್ ಮುಂತಾದವರು ಇದ್ದರು.

ಹಾಗೆಯೇ ಸೆ. 24 ರಂದು ಅಮಾಯಕರ ಮೇಲಿನ ಕೇಸ್‌ಗಳನ್ನು ಹಿಂತೆಗೆಯಲು ಆಗ್ರಹಿಸಿ ಡಿ.ಜಿ. ಕಛೇರಿ ಎದುರು ಪ್ರದರ್ಶನ ನಡೆಯಿತು.

ದಲಿತರ ಮೇಲೆ ದೇಶವೇ ನಾಚಿ ತಲೆತಗ್ಗಿಸಬೇಕಾದಂತಹ ಹೀನ ಅತ್ಯಾಚಾರ, ದೌರ್ಜನ್ಯ ಎಸಗಿ, ಕೊಲೆಗೈದಿದ್ದ ಅಪರಾಧಿಗಳಲ್ಲಿ ಕೆಲವರಿಗೆ ಶಿಕ್ಷೆಯಾಗಿದೆ. ಆದರೆ ಸಿಕ್ಕ ನ್ಯಾಯ ಅಪೂರ್ಣವಾಗಿದೆ.

ಖೈರ್ಲಾಂಜಿ ತೀರ್ಪು : ಅಪೂರ್ಣ ನ್ಯಾಯ

ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯ ಖೈರ್ಲಾಂಜಿ ಎಂಬ ಹಳ್ಳಿಯಲ್ಲಿ ಎರಡು ವರ್ಷಗಳ ಹಿಂದೆ, 2006ರ ಸೆಪ್ಟಂಬರ್ 29 ರಂದು ಒಂದು ದಲಿತ ಕುಟುಂಬದ ನಾಲ್ಕು ಮಂದಿಯನ್ನು ಹಾಡುಹಗಲೇ ಕೊಂದವರಲ್ಲಿ ಆರು ಮಂದಿಗೆ ಈಗ ಸೆಶನ್ಸ್ ನ್ಯಾಯಾಲಯ ಮರಣ ದಂಡನೆ ವಿಧಿಸಿದೆ; ಇನ್ನಿಬ್ಬರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಮೂರು ಮಂದಿಯ ಖುಲಾಸೆಯಾಗಿದೆ. ಸಿಬಿಐ ತನಿಖೆಯ ಆಧಾರದಲ್ಲಿ ಈ ತೀರ್ಪು ನೀಡಲಾಗಿದೆ. ಮಹಾರಾಷ್ಟ್ರದ ಉಪಮುಖ್ಯಮಂತ್ರಿಗಳು ಇದೊಂದು ಐತಿಹಾಸಿಕ ತೀರ್ಪು ಎಂದಿದ್ದಾರೆ. ಈ ದುಷ್ಕೃತ್ಯ ಮಹಾರಾಷ್ಟ್ರದಂತಹ ಪ್ರಗತಿಪರ ರಾಜ್ಯಕ್ಕೊಂದು ಕಪ್ಪು ಚುಕ್ಕೆಯಾಯಿತು, ಈಗ ಈ ತೀರ್ಪು ದಲಿತರ ಮೇಲೆ ಇಂತಹ ಅತ್ಯಾಚಾರಗಳನ್ನು ಈ ರಾಜ್ಯದಲ್ಲಿ ಸಹಿಸಿಕೊಳ್ಳುವುದಿಲ್ಲ ಎಂಬ ಸಂಕೇತ ನೀಡಿದೆ ಎಂದು ಹೇಳಿದ್ದಾರೆ. ದೇಶದ ಪ್ರಜಾಪ್ರಭುತ್ವವಾದಿಗಳೂ ಈ ತೀರ್ಪನ್ನು ಸ್ವಾಗತಿಸಿದರೂ ಇದರಿಂದ ಸಂಪೂರ್ಣ ನ್ಯಾಯ ದೊರೆತಿಲ್ಲ ಎಂಬ ಬೇಸರವೂ ಇದೆ.

ಈ ಹಳ್ಳಿಯ ಬೊತ್ಮಂಗೇ ಎಂಬ ದಲಿತ ಕುಟುಂಬದ ಸುರೇಖಾ, ಆಕೆಯ ಹದಿ ಹರೆಯದ ಮಗಳು ಪ್ರಿಯಾಂಕ ಹಾಗೂ ಇಬ್ಬರು ಗಂಡು ಮಕ್ಕಳನ್ನು (ಇವರಲ್ಲಿ ಒಬ್ಬ ಭಾಗಶಃ ಕುರುಡ) ಮೇಲ್ಜಾತಿಯ ಜನ ಮನೆಯಿಂದ ಹೊರಗೆಳೆದು ತಂದು ಸಾರ್ವಜನಿಕವಾಗಿಯೇ ಅಮಾನುಷವಾಗಿ ಹೊಡೆದು ಸಾಯಿಸಿದರು, ಮಹಿಳೆಯರಿಬ್ಬರ ಮೇಲೆ ಅತ್ಯಾಚಾರವೂ ನಡೆಯಿತು. ನಂತರ ಹೆಣಗಳನ್ನು ಕಾಲುವೆಗೆ ಎಸೆಯಲಾಯಿತು. ಧಾಳಿಯಿಂದ ಪಾರಾಗಿದ್ದ ಈ ಕುಟುಂಬದ ಏಕೈಕ ಸದಸ್ಯ ಹಾಗೂ ಸುರೇಖಾಳ ಗಂಡ ಭೈಯಾಲಾಲ್ ಬೊತ್ಮಂಗೇ ಪೋಲೀಸರಿಗೆ ದೂರು ನೀಡಿದಾಗ ಅವರು ನಿರ್ಲಕ್ಷ್ಯ ತೋರಿದರು. ವೈದ್ಯಕೀಯ ಅಧಿಕಾರಿಗಳೂ ಕಾನೂನಿನ ಪ್ರಕಾರ ಮರಣೋತ್ತರ ಪರೀಕ್ಷೆ ನಡೆಸಲಿಲ್ಲ. ಕೊನೆಗೆ ಸಾರ್ವತ್ರಿಕ ಪ್ರತಿಭಟನೆಗಳ ಒತ್ತಡದಿಂದ ಸಿಬಿಐ ತನಿಖೆ ನಡೆಸಿ ವಿಶೇಷ ನ್ಯಾಯಾಲಯಕ್ಕೆ ಈ ಕೇಸನ್ನು ಒಪ್ಪಿಸಲಾಯಿತು.

ಈ ಘಟನೆಗೆ ಮೇಲ್ನೋಟಕ್ಕೆ ಜಮೀನು ವಿವಾದ ಕಾರಣವಾಗಿ ಕಂಡರೂ ವಾಸ್ತವವಾಗಿ ಜಾತಿ ವೈಷಮ್ಯ, ದಲಿತರ ಪ್ರಗತಿಯನ್ನು ಸಹಿಸಲಾರದ ಜಾತಿವಾದವೇ ಕಾರಣ ಎಂಬುದು ಸ್ಪಷ್ಟವಾಗಿತ್ತು.

ಎಂಟು ಜನಕ್ಕೆ ಶಿಕ್ಷೆಯೇನೋ ಆಯಿತು. ಆದರೆ ಶಿಕ್ಷೆಯಾಗಿರುವುದು ಕೊಲೆಗಾಗಿ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳ ಮೇಲೆ ಅತ್ಯಾಚಾರ ತಡೆ ಕಾನೂನಿನ ಪ್ರಕಾರ ಅಲ್ಲ. ಅಲ್ಲದೆ ಮಹಿಳೆಯರ ಮೇಲಿನ ಅತ್ಯಾಚಾರದ ಪ್ರಶ್ನೆಯೇ ಬರಲಿಲ್ಲ, ಏಕೆಂದರೆ ಪೋಲೀಸರ ಉದಾಸೀನದ ನಿಲುವಿನಿಂದಾಗಿ ಈ ಆಪಾದನೆಯನ್ನು ಹಾಕಿರಲೇ ಇಲ್ಲ.

ತೀರ್ಪಿನಿಂದ ಭೈಯಾಲಾಲ್ ಬೊತ್ಮಂಗೆಯವರಿಗೆ ತೀವ್ರ ನಿರಾಸೆಯಾಗಿದೆಯೆಂದು ವರದಿಯಾಗಿದೆ. ಖುಲಾಸೆಯಾದ ಮೂವರು ವ್ಯಕ್ತಿಗಳು ನಿಜವಾದ ಅಪರಾಧಿಗಳು ಎಂದೂ ಹೇಳಲಾಗುತ್ತಿದೆ. ಆದರೆ ಭೈಯಾಲಾಲ್ ಬೊತ್ಮಂಗೆಯವರಿಗೂ ಈ ತೀರ್ಪಿನಿಂದ ತೃಪ್ತಿಯಾಗಿ ದೆಯೆಂದು ಉಪಮುಖ್ಯಮಂತ್ರಿಗಳು ಭಾವಿಸುತ್ತಾರೆ. ಆದರೂ ಈ ತೀರ್ಪಿನ ಪೂರ್ಣ ಪ್ರತಿ ಕೈಸೇರಿದ ಮೇಲೆ ಮುಂದಿನ ಕ್ರಮದ ಬಗ್ಗೆ ವಿಚಾರ ಮಾಡುತ್ತೇವೆ, ಸಿಬಿಐ ತನಿಖೆಯಿಂದ ದಲಿತರ ಮೇಲಿನ ಅತ್ಯಾಚಾರ ತಡೆ ಕಾನೂನಿನ ಅಡಿಯಲ್ಲಿ ಆರೋಪ ಹಾಗೂ ಮಹಿಳೆಯರ ಮಾನಭಂಗದ ಆಪಾದನೆ ಏಕೆ ಸಾಬೀತಾಗಲಿಲ್ಲ ಎಂಬ ಬಗ್ಗೆ ಪರೀಕ್ಷಿಸಲಾಗುವುದು ಎಂದೂ ಅವರು ಹೇಳಿದರು.

ಈ ದುಷ್ಕೃತ್ಯದ ತನಿಖೆಯಾಗುತ್ತಿದ್ದಾಗ ಅಲ್ಲಿಗೆ ಭೇಟಿ ನೀಡಿ ಅಧ್ಯಯನ ನಡೆಸಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ತಂಡ ತನಿಖೆಯಲ್ಲಿನ ಲೋಪಗಳು, ಕಳಪೆ ಮಟ್ಟದ ಬಗ್ಗೆ ಬಲವಾಗಿ ಟೀಕಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರಕಾರ ಮಧ್ಯಪ್ರವೇಶಿಸಿದ್ದರೆ ಮಹಿಳೆಯರ ಮೇಲಿನ ಅತ್ಯಾಚಾರದ ಅಪರಾಧವೂ ಸಾಬೀತಾಗುತ್ತಿತ್ತು ಎಂದು ಆ ಸಂಘಟನೆ ಈ ತೀರ್ಪಿಗೆ ಪ್ರತಿಕಿಯಿಸುತ್ತಾ ಹೇಳಿದೆ. ಅದೇ ರೀತಿ ಸರಕಾರೀ ವಕೀಲರು ಇದು ದಲಿತರಿಗೆ 'ಪಾಠ ಕಲಿಸಲು' ಎಂದು ನಡೆಸಿದ ಪೂರ್ವ ಯೋಜಿತ ಮೇಲ್ಜಾತಿ ಹಿಂಸಾಚಾರ ಎಂದು ಸಾಬೀತು ಮಾಡುವಲ್ಲಿ ವಿಫಲವಾಗಿರುವ ಬಗ್ಗೆ ಅದು ಖೇದ ವ್ಯಕ್ತಪಡಿಸಿದೆ.

ಆದರೂ ಮಹಾರಾಷ್ಟ್ರದಂತಹ ಬಲವಾದ ಜಾತಿ-ವಿರೋಧಿ ಆಂದೋಲನಗಳ ಇತಿಹಾಸವಿರುವ ಹಾಗೂ ಅಭಿವೃದ್ಧಿ ಹೊಂದಿರುವ ರಾಜ್ಯದಲ್ಲಿ ದಲಿತರ ಮೇಲೆ, ಅದರಲ್ಲೂ ದಲಿತ ಮಹಿಳೆಯರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ತೀರ್ಪು ಮಹತ್ವದ್ದಾಗಿದೆ. ಮಹಾರಾಷ್ಟ್ರ ಸರಕಾರ ಜಾತಿ ಅತ್ಯಾಚಾರಕ್ಕಾಗಿ ಅರೋಪಿಗಳನ್ನು ಶಿಕ್ಷಿಸುವಂತೆ ಮೇಲಿನ ನ್ಯಾಯಾಲಯಕ್ಕೆ ಹೋಗಬೇಕು. ಆರಂಭದಲ್ಲಿ ಈ ಅಪರಾಧವನ್ನು ಉಪೇಕ್ಷಿಸಿದ ಮತ್ತು ಪುರಾವೆಗಳನ್ನು ಮರೆ ಮಾಚಿದ ಪೋಲೀಸ್ ಅಧಿಕಾರಿಗಳಿಗೆ ದಲಿತರ ಹಕ್ಕುಗಳ ಸಂವಿಧಾನಿಕ ರಕ್ಷಣೆಯನ್ನು ಉಲ್ಲಂಘಿಸಿದ್ದಕ್ಕಾಗಿ ಶಿಕ್ಷೆ ವಿಧಿಸಬೇಕಾಗಿದೆ. ○

ನಾನಾವತಿ ಆಯೋಗದ ವರದಿ :ಹಲವು ಅನುಮಾನಗಳು

ನರೇಂದ್ರಮೋದಿ ಮತ್ತೆ ಜೋರಾಗಿ ಕಿರುಚಲಾರಂಭಿಸಿದ್ದಾರೆ. 2002 ರ ಮಾರ್ಚ್‌ನಲ್ಲಿ ನಡೆದ ಗೋಧ್ರಾ ಘಟನೆ ಪೂರ್ವಯೋಜಿತ ಕೃತ್ಯವಂತೆ. ಸಬರಮತಿ ಎಕ್ಸ್‌ಪ್ರೆಸ್ ರೈಲಿನ ಎಸ್-6 ಕೋಚ್‌ಗೆ ಬೆಂಕಿ ಇಡುವ ಪಿತೂರಿಯನ್ನು ಗೋಧ್ರಾದ ಅಮಾನ್ ಅತಿಥಿಗೃಹದಲ್ಲಿ ರೂಪಿಸಲಾಯಿತಂತೆ. ಇದಕ್ಕಾಗಿ 140 ಲಿ.ಪೆಟ್ರೋಲ್‌ನ್ನು ಖರೀದಿಸಲಾಗಿತ್ತಂತೆ ಮತ್ತು ಒಟ್ಟಾರೆ ಗೋದ್ರಾ ಘಟನೆಯ ಸಂಬಂಧದಲ್ಲಿ ನರೇಂದ್ರ ಮೋದಿ ನಿರ್ದೋಷಿಯಂತೆ.

ನಿಜ, ನಿವೃತ್ತ ನ್ಯಾಯಮೂರ್ತಿ ಜಿ.ಟಿ.ನಾನಾವತಿ ನೇತೃತ್ವದ ಆಯೋಗವು ಈ ಮೇಲಿನಂತೆ ವರದಿ ನೀಡಿದೆ. ಈ ವರದಿಯ ಶೋಧನೆಗಳ ಬಗೆಗೆ ಹಲವು ರೀತಿಯ ಸಂಶಯಗಳು ಪ್ರಶ್ನೆಗಳು ಅತ್ಯಂತ ಸಹಜವಾಗಿ ಎದ್ದಿದೆ.

2002 ರಲ್ಲಿ ರಚನೆಯಾದ ಈ ಆಯೋಗವು ಸಹಜವಾಗಿ ವರದಿ ನೀಡಬೇಕಾದ ಸಮಯಕ್ಕಿಂತ ತುಂಬಾ ತಡವಾಗಿ ವರದಿ ನೀಡಿದೆ. ಈಗಲೂ ಸಹ ವರದಿಯನ್ನು ಪೂರ್ಣವಾಗಿ ನೀಡಿಲ್ಲ. ವರದಿಯ ಮೊದಲಿನ ಭಾಗವನ್ನು ಮಾತ್ರ ನೀಡಿದೆ. ಈ ವರದಿಯ ಮೊದಲ ಭಾಗವು ಆರೆಸ್ಸೆಸ್-ಬಿಜೆಪಿ -ವಿಶ್ವಹಿಂದೂ ಪರಿಷತ್, ಭಜರಂಗದಳಗಳು ಹೇಳುತ್ತಿರುವ 'ಕ್ರಿಯೆ- ಪ್ರತಿಕ್ರಿಯೆ' ಸಿದ್ಧಾಂತಕ್ಕೆ ತಕ್ಕಂತೆಯೇ ಇದೆ. ಅಂದರೆ ರೈಲಿಗೆ ಬೆಂಕಿ ಇಟ್ಟು ಕರ ಸೇವಕರನ್ನು ಸುಟ್ಟಿದ್ದರಿಂದಾಗಿ ಗುಜರಾತ್ ಗಲಭೆಗಳು ನಡೆದವು ಅಂತ.

ಆದರೆ ಸುಪ್ರೀಂಕೋರ್ಟ್ ನ ನಿವೃತ್ತ ನ್ಯಾಯಾಧೀಶರಾದ ಯು.ಸಿ.ಬ್ಯಾನರ್ಜಿ ಸಮಿತಿಯು ಈಗಾಗಲೇ ನೀಡಿರುವ ವರದಿಯ ಇದಕ್ಕೆ ತದ್ವಿರುದ್ಧ ವಾದದ್ದನ್ನು ಹೇಳಿದೆ. ಬ್ಯಾನರ್ಜಿ ವರದಿಯು ವೈಜ್ಞಾನಿಕವಾದ 'ಫೋರೆನ್ಸಿಕ್' ವರದಿಯನ್ನು ಆಧರಿಸಿತ್ತು.



ರೈಲು ಭೋಗಿಯು ಹೊತ್ತಿ ಉರಿಯಲು ಕಾರಣವಾದ ರಾಸಾಯನಿಕ ವಸ್ತುವನ್ನು ರೈಲಿನ ಹೊರಗಿನಿಂದ ಎರಚಲಾಗಿಲ್ಲ. ಆ ವಸ್ತುವು ಒಳಗಿನಿಂದಲೇ ಚೆಲ್ಲಲ್ಪಟ್ಟಿದೆ ಎಂಬುದು ಸುಟ್ಟ ರೈಲು ಭೋಗಿಯ ವೈಜ್ಞಾನಿಕ ರಾಸಾಯನಿಕ ತಪಾಸಣೆಯಿಂದ ದೃಢಪಟ್ಟಿತ್ತು. ಹಾಗೂ ರೈಲು ಭೋಗಿಗಳಿಗೆ ಪೆಟ್ರೋಲ್ ಎರಚಲಾಯಿತು ಎನ್ನಲಾದ ಸ್ಥಳದಲ್ಲಿ ನಿಂತು ರಾಸಾಯನಿಕವು ಹರಡಿ ಬಿದ್ದ ಸ್ವರೂಪಕ್ಕೆ ಎರಚಲು ಸಾಧ್ಯವೇ ಇಲ್ಲ ಎಂದೂ ಕೂಡ ಬ್ಯಾನರ್ಜಿ ವರದಿಯು ವೈಜ್ಞಾನಿಕವಾಗಿ ಖಚಿತ ಪಡಿಸಿತ್ತು.

ಈ ಎಲ್ಲದರ ಆಧಾರದಲ್ಲಿ ಗೋಧ್ರಾ ರೈಲು ಭೋಗಿಗೆ ಬೆಂಕಿ ಹೊತ್ತುಕೊಂಡ ಪ್ರಕರಣವು ಆಕಸ್ಮಿಕ ಅಪಘಾತವಾಗಿರಬಹುದು ಎಂದು ಅಭಿಪ್ರಾಯಕ್ಕೆ ಬರಲು ಪ್ರಬಲ ಕಾರಣಗಳಿದ್ದವು. ಖಾಸಗಿ ಟಿ.ವಿ.ಚಾನಲ್ ಒಂದು ನಡೆಸಿದ ರಹಸ್ಯವಾದ 'ಆಪರೇಷನ್ ಕಳಂಕ್' ಸಹ ಇದೇ ರೀತಿಯ ಸತ್ಯವನ್ನು ಬಹಿರಂಗ ಪಡಿಸಿತ್ತು.

ಸುಪ್ರೀಂಕೋರ್ಟ್ ತಿರಸ್ಕರಿಸಿತ್ತು

ಈ ನಾನಾವತಿ ಆಯೋಗದ ವರದಿಯು ನೊಯಲ್ ಪಾರ್‌ಮಾತ್ ಎಂಬ ಗೋಧ್ರಾ ರೈಲು ದಹನ ಪ್ರಕರಣದ ತನಿಖಾಧಿಕಾರಿಯ ವರದಿಯೊಂದನ್ನೇ ಆಧರಿಸಿದೆ. ಆದರೆ ಮಾರ್ಚ್ 26, 2008ರಂದು ಈ ದೇಶದ ಸುಪ್ರೀಂಕೋರ್ಟ್ ಪಾರ್‌ಮರ್ ವರದಿಯನ್ನು ತಿರಸ್ಕರಿಸಿತು.

ಪುಟ 13 ಕ್ಕೆ

ಬ್ಯಾಂಕುಗಳು ಅಮೆರಿಕಾದ ಬ್ಯಾಂಕುಗಳಂತೆ ಅಪಾಯಕ್ಕೆ ಸಿಲುಕುವಂತವುಗಳಲ್ಲ, ಆದ್ದರಿಂದ ಭಯ ಪಡಲು ಕಾರಣಗಳಿಲ್ಲ ಎಂದಿದ್ದಾರೆ ನಮ್ಮ ಹಣಕಾಸು ಮಂತ್ರಿಗಳು. ಆದರೆ ಭಾರತದ ಆರ್ಥಿಕ ಇನ್ನೂ ಸಂಪೂರ್ಣ ನಿಯಂತ್ರಣಹೀನವಾಗಿ ಇರದಿರುವುದರಿಂದಲೇ ಇಷ್ಟಾದರೂ ಸಾಧ್ಯವಾಗಿದೆ, ಉದಾರೀಕರಣಕ್ಕೆ ಎಡಪಕ್ಷಗಳ ನಿರಂತರ ಪ್ರತಿರೋಧಗಳಿಂದಾಗಿ ಭಾರತದ ಆರ್ಥಿಕದಲ್ಲಿ ಈ ಸಾಮರ್ಥ್ಯ ಇನ್ನೂ ಉಳಿದಿದೆ ಎಂದಂತೂ ಅವರು ಹೇಳಲಾರರು. ಈಗಲಾದರೂ ಅವರ ನವ-ಉದಾರವಾದವನ್ನು ಕಣ್ಣು ಮುಚ್ಚಿ ಅನುಸರಿಸುವವರು ಕಣ್ಣು ತೆರೆಯಬೇಕು ಎನ್ನುತ್ತಾರೆ ಪ್ರಕಾಶ್ ಕಾರಟ್‌ರವರು.

ಆರ್ಥಿಕ ಸುಧಾರಣೆಗಳೆಂಬ ಬಡಬಡಿಕೆ

ಸುಮಾರು ಮೂರು ತಿಂಗಳ ಹಿಂದೆ ಜುಲೈ 2008ರಲ್ಲಿ, ಎಡಪಕ್ಷಗಳು ಯುಪಿಎ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಪರಮಾಣು ವ್ಯವಹಾರದ ಪ್ರಶ್ನೆಯ ಮೇಲೆ ಹಿಂತೆಗೆದುಕೊಂಡಾಗ ನಮ್ಮ ದೇಶದ ಬಂಡವಾಳಿಗರು, ಅವರ ಕೈಯಲ್ಲಿರುವ ಮಾಧ್ಯಮಗಳು ಇನ್ನು ಮುಂದೆ 'ಆರ್ಥಿಕ ಸುಧಾರಣೆ'ಯ ಉಳಿದ ಅಜೆಂಡಾಗಳನ್ನು ಸರಕಾರ ನಿರ್ಭಿಡೆಯಿಂದ ಮುಂದೊತ್ತಬಹುದು ಎಂದು ಆನಂದ ತುಂದಿಲರಾಗಿದ್ದರು. ನಮ್ಮ ಕೇಂದ್ರ ಹಣಕಾಸು ಮಂತ್ರಿಗಳು ಸಂತೋಷದಿಂದ ಅದಕ್ಕೆ ತಲೆದೂಗಿದ್ದರು. ಬಿಜೆಪಿಯೂ ಈ 'ಸುಧಾರಣೆ'ಗಳಿಗೆ ಬೆಂಬಲ ಕೊಡಬೇಕಾಗುತ್ತದೆ ಎಂಬ ನಿರೀಕ್ಷೆಯನ್ನು ಕೂಡ ವ್ಯಕ್ತ ಪಡಿಸಿದ್ದರು.

ಈಗ ಈ 'ಸುಧಾರಣೆ'ಗಳ ಆದರ್ಶವಾಗಿದ್ದ ಅಮೆರಿಕಾವನ್ನು ತಟ್ಟಿರುವ ಹಣಕಾಸು ಬಿಕ್ಕಟ್ಟು ಪರಿಸ್ಥಿತಿಯನ್ನು ಬದಲಿಸಿದೆ. ಅಲ್ಲಿಯ ಪ್ರಮುಖ ಹಣಕಾಸು ಸಂಸ್ಥೆಗಳನ್ನು ಉಳಿಸಲು ಅಲ್ಲಿನ ಸರಕಾರವೇ ಧಾವಿಸಬೇಕಾಗಿ ಬಂದಿದೆ. ಜನಗಳು ಕೊಟ್ಟ ತೆರಿಗೆ ಹಣದಿಂದ ಈ ಖಾಸಗೀ ಲಾಭಕೋರರಿಗೆ ಈಗ ಬಿಲಿಯಗಟ್ಟಲೆ ಡಾಲರುಗಳ ನೆರವು ನೀಡಲಾಗುತ್ತಿದೆ. ಇದಕ್ಕೆ ಮಾನ್ಯ ಚಿದಂಬರಂರವರು ಏನನ್ನುತ್ತಾರೆ?

ಚಿದಂಬರಂ 'ಭರವಸೆ'ಯ ಹಿಂದೆ

'ಒಬ್ಬ ಮುಂದಾಳು ಅಥವಾ ಧೋರಣೆಗಳನ್ನು ರೂಪಿಸುವ ಒಬ್ಬ ವ್ಯಕ್ತಿ ಅನುಭವಗಳು ಮತ್ತು ವಾಸ್ತವತೆಗಳ ಬೆಳಕಿನಲ್ಲಿ ತನ್ನ ನಿಲುವುಗಳನ್ನು ಪರಾಮರ್ಶಿಸಿದರೆ ಅದು ವಿವೇಕಶೀಲತೆಯ ಲಕ್ಷಣ. ಹಣಕಾಸು ಮಂತ್ರಿ ಪಿ. ಚಿದಂಬರಂ ಈ ಪೈಕಿ ಅಲ್ಲ'.

ಅಮೆರಿಕಾದ ಅತ್ಯಂತ 'ಅನುಭವಿ' ಹಣಕಾಸು ಸಂಸ್ಥೆ ಲೆಹ್ಮನ್ ಬ್ರದರ್ಸ್ ಕುಸಿತ, ಇನ್ನೊಂದು ದೊಡ್ಡ ಹಣಕಾಸು ಕಂಪನಿ ಮೆರಿಲ್ ಲಿಂಚ್‌ನ್ನು ಅಲ್ಲಿಯ ಸರಕಾರ ವಹಿಸಿಕೊಳ್ಳಬೇಕಾಗಿ ಬಂದದ್ದು ಹಾಗೂ ಅಲ್ಲಿನ ಅತಿದೊಡ್ಡ ವಿಮಾಕಂಪನಿ ಅಮೆರಿಕನ್ ಇಂಟರ್ ನ್ಯಾಶನಲ್ ಗ್ರುಪ್(ಎಐಜಿ)ಯನ್ನು ಉಳಿಸಲು ನೂರಾರು ಬಿಲಿಯ ಡಾಲರುಗಳನ್ನು ಸುರಿಯಲು ಬುಶ್ ಸರಕಾರ ಮುಂದಾಗಿರುವುದು -ಇವೆಲ್ಲವುಗಳಿಂದ ಅಮೆರಿಕಾದಲ್ಲಿ ಉಂಟಾಗಿರುವ ಹಣಕಾಸು ಬಿಕ್ಕಟ್ಟಿನ ಬಗ್ಗೆ ನಮ್ಮ ಹಣಕಾಸು ಮಂತ್ರಿಗಳು ಏನನ್ನುತ್ತಾರೆ? ಇಲ್ಲ, ಹಣಕಾಸು ವಲಯದ ಸುಧಾರಣೆಗಳನ್ನು ನಿಲ್ಲಿಸಬೇಕಾದ ಅಗತ್ಯ ತನಗೆ ಈಗಲೂ ಕಾಣಿಸುತ್ತಿಲ್ಲ ಎಂದು ಅವರು ಸಾರಿದ್ದಾರೆ. ಭಾರತದ ಬ್ಯಾಂಕುಗಳು ಅಮೆರಿಕಾದ ಬ್ಯಾಂಕುಗಳಂತೆ ಅಪಾಯಕ್ಕೆ ಸಿಲುಕುವಂತವುಗಳಲ್ಲ, ಆದ್ದರಿಂದ ಭಯ ಪಡಲು ಕಾರಣಗಳಿಲ್ಲ, ಭಾರತ ಸರಕಾರ 'ಸಂದರ್ಭಕ್ಕೆ ಅನುಗುಣವಾಗಿ , ಅಂತರ್‍ರಾಷ್ಟ್ರೀಯ ಪರಿಸ್ಥಿತಿಗೆ ಅನುಗುಣವಾಗಿ ಮತ್ತು ನಮ್ಮ ನಿಯಂತ್ರಣಗಳನ್ನು ನವೀನತೆಗಿಂತ ಒಂದು ಹೆಜ್ಜೆ ಮುಂದೆಯೆ ಇಡುವ ನಮ್ಮ ಸಾಮರ್ಥ್ಯದೊಂದಿಗೆ' ಸುಧಾರಣೆಗಳ ನೀತಿಗಳನ್ನು ಅನುಸರಿಸುತ್ತದೆ ಎಂದು ಅವರು 'ಭರವಸೆ' ನೀಡಿದ್ದಾರೆ.

ಆದರೆ ಭಾರತದ ಹಣಕಾಸು ವಲಯ ಇನ್ನೂ ಅಮೆರಿಕಾದ ಹಣಕಾಸು ವಲಯದಂತೆ ಸಂಪೂರ್ಣ ನಿಯಂತ್ರಣ ಹೀನವಾಗಿರದಿರುವುದರಿಂದಲೇ ಭಾರತದ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳಿಗೆ ಈ ಬಿಕ್ಕಟ್ಟು ತಟ್ಟಿಲ್ಲ ಎಂಬುದನ್ನು ಅವರು ಹೇಳುವುದಿಲ್ಲ. ಎಡಪಕ್ಷಗಳ ನಿರಂತರ ಪ್ರತಿರೋಧಗಳಿಂದಾಗಿ ಭಾರತದ ಆರ್ಥಿಕದಲ್ಲಿ ಈ ಸಾಮರ್ಥ್ಯ ಇನ್ನೂ ಉಳಿದಿದೆ ಎಂದಂತೂ ಅವರು ಹೇಳಲಾರರು.

ಸಹಜ ನಿರೀಕ್ಷೆ

ಯುಪಿಎ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದಲೆ ಚಿದಂಬರಂ ತದೇಕ ಚಿತ್ತದಿಂದ ಹಣಕಾಸು ವಲಯದ 'ಉದಾರೀಕರಣ'ದ ನಿಲುವು ಅನುಸರಿಸಿರುವವರು. ಅದೇ ರೀತಿ ಎಡಪಕ್ಷಗಳು ದೇಶದ ಹಣಕಾಸು ವಲಯವನ್ನು ಜೂಜುಕೋರ ಹಣಕಾಸು ಬಂಡವಾಳಕ್ಕೆ ತೆರೆಯಬಾರದು ಎಂದು ಅಷ್ಟೇ ದೃಢವಾಗಿ, ಸತತವಾಗಿ ವಿರೋಧಿಸುತ್ತಾ ಬಂದಿವೆ. ಅಮೆರಿಕಾದಲ್ಲಿ ರಿಯಲ್ ಎಸ್ಟೇಟ್ ಬಲೂನು ಒಡೆದ ನಂತರ, ಹಣಕಾಸು ಬಿಕ್ಕಟ್ಟು ಆವರಿಸಿದ



ನಂತರವಾದರೂ ಹಣಕಾಸು ವಲಯದ ಸುಧಾರಣೆಗಳ ಈ ಕಟ್ಟಾ ಅನುಯಾಯಿ ಪುನರಾಲೋಚನೆ ಮಾಡಬಹುದು ಎಂಬ ನಿರೀಕ್ಷೆ ಸಹಜ. ಆದರೆ ಹಾಗಾಗಿಲ್ಲ.

ಆರಂಭದಿಂದಲೇ ನಮ್ಮ ಕೇಂದ್ರ ಹಣಕಾಸು ಮಂತ್ರಿಗಳು ಮತ್ತು ಕಾಂಗ್ರೆಸ್ ನೇತೃತ್ವದ ಸರಕಾರ ವಿಮಾವಲಯದಲ್ಲಿ ವಿದೇಶಿ ನೇರಹೂಡಿಕೆ (ಎಫ್‌ಡಿಐ)ಯನ್ನು 26ಶೇ.ದಿಂದ 49ಶೇ.ಕ್ಕೆ ಏರಿಸಬೇಕು ಎಂದು ದೃಢನಿರ್ಧಾರ ಮಾಡಿದ್ದರು; ಭಾರತೀಯ ಬ್ಯಾಂಕುಗಳಲ್ಲಿ ವಿದೇಶಿ ಹೂಡಿಕೆಯ ಮಿತಿಯನ್ನು 74ಶೇ, ಕ್ಕೆ ಏರಿಸಿ ಅವನ್ನು ವಿದೇಶಿ ಖಾಸಗಿ ಬ್ಯಾಂಕುಗಳು ವಹಿಸಿಕೊಳ್ಳಲು ಅನುಕೂಲ ಕಲ್ಪಿಸಬೇಕು, ಅದಕ್ಕಾಗಿ ಬ್ಯಾಂಕಿಂಗ್ ನಿಯಂತ್ರಣ ಕಾನೂನನ್ನು ತಿದ್ದುಪಡಿ ಮಾಡಿ ವಿದೇಶಿ



ಹೂಡಿಕೆದಾರರ ಮತದಾನದ ಮೇಲಿದ್ದ 10 ಶೇ.ದ ಮಿತಿಯನ್ನು ತೆಗೆಯಬೇಕೆಂದು ಬಯಸಿದ್ದರು; ಪೆನ್ಶನ್ ನಿಧಿಗಳನ್ನು ಖಾಸಗೀಕರಿಸಿ, ಅವನ್ನು ಶೇರು ಮಾರುಕಟ್ಟೆಯಲ್ಲಿ ಹೂಡುವಂತೆ ಮಾಡುವ ಹೊಸ ಪೆನ್ಶನ್ ಯೋಜನೆ ತರಲು ಹೆಣಗಿದರು, ಪೆನ್ಶನ್ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರದ ಮಸೂದೆ ಕಳೆದ ಎರಡು ವರ್ಷಗಳಿಂದ ಸಂಸತ್ತಿನ ಮುಂದಿದೆ. ಇವೆಲ್ಲದಕ್ಕೂ ಕಳಸವಿಟ್ಟಂತೆ ಭಾರತ ಪೂರ್ಣ ಪರಿವರ್ತನೀಯತೆಯತ್ತ ಹೋಗುತ್ತದೆ ಎಂದು ಪ್ರಧಾನ ಮಂತ್ರಿಗಳು ಸಾರಿದ್ದರು.

ಎಡಪಕ್ಷಗಳು ಈ ಎಲ್ಲಾ ಕ್ರಮಗಳನ್ನು ಬಲವಾಗಿ ವಿರೋಧಿಸಿದವು. ಈ ಬಗ್ಗೆ ಯಾವುದೇ ಮಸೂದೆಯನ್ನು ಸಂಸತ್ತಿನಲ್ಲಿ ತಂದರೆ ಅದರ ವಿರುದ್ಧ ಮತ ನೀಡುವುದಾಗಿ 2005ರಲ್ಲಿಯೇ ಯುಪಿಎ ಸರಕಾರವನ್ನು ಎಚ್ಚರಿಸಿದ್ದವು. ಈ ಬಗ್ಗೆ ಎಡಪಕ್ಷಗಳು ಮತ್ತು ಯುಪಿಎ ಸಮನ್ವಯ ಸಮಿತಿಯಲ್ಲಿ ಮತ್ತೆ-ಮತ್ತೆ ಚರ್ಚೆ ನಡೆಯಿತು. ತಮ್ಮ ವಿರೋಧಕ್ಕೆ ತರ್ಕಬದ್ಧ ಕಾರಣಗಳನ್ನು ವಿವರಿಸುವ ಹಲವು ಟಿಪ್ಪಣಿಗಳನ್ನು ಎಡಪಕ್ಷಗಳು ಸರಕಾರಕ್ಕೆ ಸಲ್ಲಿಸಿದವು.

2007ರ ಅಂತ್ಯದ ವೇಳೆಗೆ ಎಡಪಕ್ಷಗಳ ಮೇಲೆ ಒತ್ತಡ ಹಾಕುವ ಪ್ರಯತ್ನಗಳೆಲ್ಲಾ ವ್ಯರ್ಥ ಎಂದು ಮನವರಿಕೆಯಾಯಿತು. ಆಗ ಹಣಕಾಸು ಮಂತ್ರಿಗಳಿಗೆ ಈ ಬಗ್ಗೆ ತಮ್ಮ ಅಸಹನೆಯನ್ನು ಮುಚ್ಚಿಡಲಾಗಲಿಲ್ಲ. 'ಯುಪಿಎ ಸರಕಾರ ಹಣಕಾಸು ವಲಯದ ಸುಧಾರಣೆಗಳನ್ನು ಮುಂದೊತ್ತಲು ಕಾತುರವಾಗಿದೆ, ಏಕೆಂದರೆ ಅದಕ್ಕೆ ಉಳಿದಿರುವ ಅಧಿಕಾರಾವಧಿ ಕೇವಲ 15 ತಿಂಗಳು' ಎಂದು ಹಲುಬಿದರು.

ನಿಯಂತ್ರಣ ಹೀನತೆಯ ಕೆಸರಿನಲ್ಲಿ

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆಯುವ ಕೆಲಸ ಅಧ್ಯಕ್ಷ ರೇಗನ್ ಕಾಲದಿಂದ ಆರಂಭವಾಯಿತು. ನಂತರ 1999ರಲ್ಲಿ ಅಮೆರಿಕನ್ ಕಾಂಗ್ರೆಸ್, 'ಹಣಕಾಸು ಸೇವೆಗಳ ಆಧುನೀಕರಣ ಶಾಸನ?ವನ್ನು ಅಂಗೀಕರಿಸಿ ಹಣಕಾಸು ಸೇವೆಗಳ ಮೇಲಿನ ಎಲ್ಲ ನಿಯಂತ್ರಕ ನಿಯಮಗಳನ್ನು ರದ್ದು ಮಾಡಲಾಯಿತು. ಅಮೆರಿಕಾದಲ್ಲಿನ ಈ ನಿಯಂತ್ರಣಹೀನತೆ ಜಾಗತಿಕ ಹಣಕಾಸು ವ್ಯವಸ್ಥೆಯ ಮೇಲೂ ನಿರ್ಣಾಯಕ ಪ್ರಭಾವ ಬೀರಿತು. ಇದು ಆರ್ಥಿಕದ 'ಹಣಕಾಸೀಕರಣ'ದ ಶಕ್ತಿಗಳನ್ನು ಹರಿಯ ಬಿಟ್ಟಿತು ಮತ್ತು ಕೆಲವೇ ಹಣಕಾಸು ಕಂಪನಿಗಳ ಕೈಗಳಲ್ಲಿ ಅಧಿಕಾರ ಕೇಂದ್ರೀಕರಿಸುವಂತಾಯಿತು. ಹೂಡಿಕೆ ಬ್ಯಾಂಕುಗಳು ಮತ್ತು ಹೆಡ್ಜ್ ಫಂಡ್(ಭದ್ರ ನಿಧಿ)ಗಳು ಹಣಕಾಸು ವ್ಯವಸ್ಥೆಯನ್ನೇ ಪುನರ್‍ರಚಿಸುವಲ್ಲಿ ಮುಖ್ಯ ಪಾತ್ರ ವಹಿಸಿದವು. ಆಪ್ಶನ್ಸ್, ಫ್ಯೂಚರ್ಸ್ ಇತ್ಯಾದಿ ಹಲವು ಹಣಕಾಸು ಉಪಕರಣಗಳನ್ನು ಬಳಸಿ ಲಂಗುಲಗಾಮಿಲ್ಲದ ಹಣಕಾಸು ಜೂಜುಕೋರತನವನ್ನು ಹರಿಯ ಬಿಡಲಾಯಿತು. ಬೇಗನೇ ಲಾಭ ದೋಚುವ ಈ ದುರಾಸೆಯ ದುಷ್ಫಲವೇ ಈಗ ಕಾಣುತ್ತಿರುವ ಹಣಕಾಸು ಕುಸಿತಕ್ಕೆ ಕಾರಣ. ನಮ್ಮ ಹಣಕಾಸು ಮಂತ್ರಿಗಳಿಗೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಈ ಬೆಳವಣಿಗೆಗಳ ಬಗ್ಗೆ ಚೆನ್ನಾಗಿ ಗೊತ್ತಿದ್ದರೂ ಈಗಲೂ ಹಣಕಾಸು ವಲಯದ ಸುಧಾರಣೆಗಳಿಂದಲೇ ಬೆಳವಣಿಗೆ ಮತ್ತು ಹೂಡಿಕೆ ಸಾಧ್ಯ ಎಂದು ಹಠ ಹಿಡಿದಿದ್ದಾರೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಈ ಕುಸಿತದ ಭಾಗವಾದ ಅಮೆರಿಕಾದ ವಿಮಾಕಂಪನಿ 'ಎಐಜಿ'ಯಲ್ಲಿ ವಿಮೆಮಾಡಿದ ಪಾಲಿಸಿದಾರರು ಪಶ್ಚಿಮದ ಅಮೆರಿಕಾದಿಂದ ಹಿಡಿದು ಪೂರ್ವದ ಸಿಂಗಾಪುರದ ವರೆಗೆ ಕಂಪನಿಯ ಕಚೇರಿಗಳೆದುರು ತಮ್ಮ ಹಣ ವಾಪಾಸು ಪಡೆಯಲು ಸಾಲುಗಟ್ಟಿ ನಿಂತಿದ್ದಾಗ ನಮ್ಮ ಹಣಕಾಸು ಮಂತ್ರಿಗಳು ಭಾರತದಲ್ಲಿ ಅವರ ಸಹಯೋಗಿತ್ವದ ಟಾಟಾ-ಎಐಜಿ ಯ ಹಣಕಾಸು ಬುಡ ಗಟ್ಟಿಯಾಗಿದೆ ಎಂದು ಕೂಡಲೆ ಭರವಸೆ ನೀಡಿದರು. ಈ ಎಐಜಿಯೇ ಭಾರತದಲ್ಲಿ ವಿಮಾವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು 49 ಶೇ.ಕ್ಕೆ ಏರಿಸಬೇಕು ಎಂದು ಲಾಬಿ ಮಾಡುತ್ತಿರುವವರಲ್ಲಿ ಮುಂಚೂಣಿಯಲ್ಲಿರುವ ಕಂಪನಿ ಎಂಬುದನ್ನು ಗಮನಿಸಬೇಕು. ಹಿಂದೆ ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಫ್ರಾಂಕ್ ವಿಸ್ನೆರ್ ಈಗ ಇದರ ಉಪಾಧ್ಯಕ್ಷ. ಆತನೇ ಭಾರತದಲ್ಲಿ ವಿಮೆಯ ಖಾಸಗೀಕರಣ ಮಾಡಬೇಕೆಂದು ಬಲವಾಗಿ ಪ್ರತಿಪಾದಿಸುತ್ತಿದ್ದ ವ್ಯಕ್ತಿ. ಮಹಾರಾಷ್ಟ್ರದ ಧಭೋಲ್‌ನ ವಿದ್ಯುತ್ ಯೋಜನೆಗೆ ಎನ್ರೋನ್ ನೊಂದಿಗೆ ಸಹಿ ಮಾಡಿದಾಗ ಈತನೇ ಭಾರತದಲ್ಲಿ ಅಮೆರಿಕಾದ ರಾಯಭಾರಿ. ಈ ವಿವಾದಾತ್ಮಕ ಯೋಜನೆಯನ್ನು ಜಾರಿ ಮಾಡುವಲ್ಲಿ ಆತನ ಪ್ರಮುಖ ಪಾತ್ರವಿತ್ತು. 1997 ರಲ್ಲಿ ಆತ ಎನ್ರೋನ್ ಆಡಳಿತ ಮಂಡಳಿಯನ್ನು ಸೇರಿದರು. ಎನ್ರೋನ್ ಯೋಜನೆಯಲ್ಲಿ ಮತ್ತು

ಪುಟ 14 ಕ್ಕೆ

ಪ್ರಾಕೃತಿಕ ವಿಕೋಪಗಳು ಯಾವುದೇ ದೇಶದಲ್ಲಿ ಸಂಭವಿಸಬಹುದು. ಆದರೆ ಅದನ್ನು ಅಲ್ಲಿನ ಆಳುವ ಸರ್ಕಾರಗಳು ಹೇಗೆ ನಿರ್ವಹಿಸುತ್ತವೆ ಎಂಬುದು ಆ ಸರ್ಕಾರಗಳ ರಾಜಕೀಯ ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ಇಲ್ಲಿ ಭಾರತ, ಕ್ಯೂಬಾ, ಅಮೆರಿಕಾಗಳ ಭಿನ್ನ, ಭಿನ್ನ ಮಾದರಿಗಳಿವೆ.

ಪ್ರಕೃತಿ ವಿಕೋಪ ನಿರ್ವಹಣೆ ಎರಡು ಭಿನ್ನ ಮಾದರಿಗಳು

ಆರ್. ರಾಮಕೃಷ್ಣ

ಭಾರತ ದೇಶದ ಇತಿಹಾಸದಲ್ಲೇ ಅತಿ ಭೀಕರ ಪ್ರವಾಹಗಳಲ್ಲಿ ಒಂದು ಎನ್ನಬಹುದಾದ ಬಿಹಾರದ ಕೋಸಿ ನದಿ ಪ್ರವಾಹಕ್ಕೆ ಸಿಲುಕಿ ಲಕ್ಷಾಂತರ ಜನರು ಸೂಕ್ತ ಪರಿಹಾರ ಸೌಕರ್ಯಗಳಿಲ್ಲದೆ ಇಂದಿಗೂ ನರಳುತ್ತಿದ್ದಾರೆ. ಬಿಹಾರದ ನಂತರ ಇದೀಗ ಒರಿಸ್ಸಾ ಪ್ರವಾಹದ ಪ್ರಕೋಪಕ್ಕೆ ಸಿಲುಕಿದೆ. ಪ್ರವಾಹ, ಭೂಕಂಪ, ಚಂಡ ಮಾರುತಗಳಂತಹ ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು ಮತ್ತು ಕೆಲವನ್ನು ನಿವಾರಿಸಲು ನಮ್ಮ ಸರ್ಕಾರಗಳು ಯಾವ ರೀತಿ ಸಜ್ಜಾಗಿವೆ. ಸಂತ್ರಸ್ಥರಿಗೆ ಯಾವ ರೀತಿಯ ಪರಿಹಾರ ನೀಡಿವೆ. ಸಾಂತ್ವನ ಹೇಳಿವೆ ಎಂಬುದು ಯೋಚಿಸಬೇಕಾದ ವಿಷಯ.

ಭಾರತ ಬಿಹಾರದಲ್ಲಿ ಪ್ರವಾಹ ಉಲ್ಬಣಿಸಿದ ಸಂದರ್ಭದಲ್ಲೇ ಅಲ್ಲಿ ದೂರದ ಕ್ಯೂಬಾ ಮತ್ತು ಅಮೇರಿಕಾಗಳ ಚಂಡಮಾರುತಗಳು ನಾಡನ್ನು ಅಪ್ಪಳಿಸಿ ಅನಾಹುತ ಸೃಷ್ಟಿಸಿದವು. ಇಡೀ ಜಗತ್ತಿಗೆ ಸೂಪರ್ ಪವರ್ ತಾನೆಂದು ಕೆನೆಯುವ ದೈತ್ಯ ಬಂಡವಾಳಶಾಹಿ ದೇಶ ಅಮೇರಿಕಾ, ಅದರ ಸಮೀಪದಲ್ಲೇ ಇರುವ ಪುಟ್ಟ ಸಮಾಜವಾದಿ ಕ್ಯೂಬಾ ಪರಿಸ್ಥಿತಿಯನ್ನು ಹೇಗೆ ನಿಬಾಯಿಸಿದವು ಎಂದು ತಿಳಿಯುವುದು ಬಹಳ ಸ್ವಾರಸ್ಯಕರವಾಗಿದೆ. ಭಾರತದಂತಹ ದೇಶಕ್ಕೆ ದೊಡ್ಡ ಪಾಠವೂ ಇದರಲ್ಲಿದೆ.

ಈ ಪ್ರವಾಹ ಮಾನವ ನಿರ್ಮಿತ

ಕೋಸಿ ನದಿಯು ಹಿಮಾಲಯದಲ್ಲಿ ಹುಟ್ಟುವ ನದಿ. ನೇಪಾಳದ ಮೂಲಕ ಭಾರತದ ಬಿಹಾರವನ್ನು ಬಂದು ತಲುಪುತ್ತದೆ. ಕೋಸಿ ನದಿಯ ಪ್ರವಾಹವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನೇಪಾಳದ ಕುಸಹಾ ಎಂಬಲ್ಲಿ ಒಡ್ಡು ಕಟ್ಟಲಾಗಿದ್ದು ನೇಪಾಳ ಭಾರತಗಳ ನಡುವಿನ ಒಪ್ಪಂದದಂತೆ ಅದನ್ನು ಬಿಹಾರಸರ್ಕಾರ ನಿರ್ವಹಿಸುತ್ತಿದೆ. ಕಳೆದ ಏಪ್ರಿಲ್ ತಿಂಗಳಿನಲ್ಲೇ ಸ್ಥಳೀಯ ಇಂಜಿನಿಯರ್‌ಗಳು ಒಡ್ಡು ದುರ್ಬಲಗೊಂಡಿರುವ ಬಗೆಗೆ ದೆಹಲಿಗೆ ಫ್ಯಾಕ್ಸ್ ಕಳಿಸಿದರಂತೆ. ಫ್ಯಾಕ್ಸ್ ಧೂಳು ತಿನ್ನುತ್ತಾ ಅಧಿಕಾರಿಯ ಟೇಬಲ್ ಮೇಲೆ ಕೂತಿತು. ಏಕೆಂದರೆ ಆ ಅಧಿಕಾರಿಯು ಸ್ಥಾನ ಖಾಲಿ ಇತ್ತು. ಇಂಜಿನಿಯರ್‌ಗಳು ಬೇರೆ ಬೇರೆ ಅಧಿಕಾರಿಗಳಿಗೂ ವಿಷಯ ಮುಟ್ಟಿಸಿದರು. ಉಹುಂ. ಯಾವ ಪ್ರತಿಕ್ರಿಯೆಯೂ ಬರಲೇ ಇಲ್ಲ ಸರ್ಕಾರದಿಂದ. ಸರ್ಕಾರ ಸೂಕ್ತ ಸಮಯದಲ್ಲಿ ಎಚ್ಚೆತ್ತಿದ್ದರೆ ಎಷ್ಟೊಂದು ಪ್ರಾಣ ಹಾನಿ ಆಸ್ತಿ ಪಾಸ್ತಿ ಹಾನಿ ತಪ್ಪಿಸಬಹುದಿತ್ತು!

ಅಲ್ಲಿ ಹಾಗಲ್ಲ

ಕ್ಯೂಬಾ, ಅಮೇರಿಕಾಗಳಲ್ಲಿ ಚಂಡ ಮಾರುತಗಳ ಹಾವಳಿ ವ್ಯಾಪಕವಾದದ್ದು. ಮೊನ್ನೆ ಕ್ಯೂಬಾ, ಅಮೇರಿಕಾಗಳ ಮೇಲೆ ಮೊದಲು ಆಗಸ್ಟ್ 30 ರಂದು ಕ್ಯೂಬಾದ ಪಶ್ಚಿಮ ಕರಾವಳಿಯಲ್ಲಿ ಅಪ್ಪಳಿಸಿದ್ದು ಗುಸ್ತಾವ್ ಚಂಡ ಮಾರುತ. ಅದರ ಹಿಂದೆ ಮತ್ತೆರಡು ಚಂಡ ಮಾರುತಗಳು. ಗುಸ್ತಾವ್ ಚಂಡ ಮಾರುತದಿಂದ ಕ್ಯೂಬಾದ 1 ಲಕ್ಷ ಮನೆಗಳು ಹಾನಿಗೊಳಗಾಗಿವೆ. ಬಿಲಿಯನ್ ಡಾಲರ್ ಗಟ್ಟಲೇ ಮೌಲ್ಯದ ಆಸ್ತಿಪಾಸ್ತಿ ನಾಶವಾಗಿದೆ. ಎಷ್ಟು ಜನ ಸತ್ತರು? ಇಲ್ಲ ಯಾರು ಸಾಯಲೇ ಇಲ್ಲ.



ಇದು ಅಂತಿಂಥ ಚಂಡ ಮಾರುತವಲ್ಲ

ಜಗತ್ತಿನಲ್ಲೇ ಅತಿ ವೇಗದ ಚಂಡ ಮಾರುತ ಬೀಸಿದ್ದೆಂದು ದಾಖಲಾಗಿರುವುದು 1934 ರಲ್ಲಿ ಅಮೇರಿಕಾದ ಮೌಂಟ್ ವಾಷಿಂಗ್‌ಟನ್‌ನಲ್ಲಿ. ಗಂಟೆಗೆ 369 ಕಿ.ಮೀ.ವೇಗ. ಎರಡನೇ ಅತಿವೇಗದ ಚಂಡ ಮಾರುತ ಗಂಟೆಗೆ 340 ಕಿ.ಮೀ. ಅದೇ ಮೊನ್ನೆಯ ಗುಸ್ತಾವ್ ಚಂಡ ಮಾರುತ ವೇಗ ಆದರೂ ಯಾರೂ ಸಾಯಲಿಲ್ಲ ಏನಿದು ಪವಾಡ.

ಇಲ್ಲಿದೆ ಪ್ರಾಕೃತಿಕ ವಿಕೋಪಗಳನ್ನೆ ದುರಿಸುವ ಕ್ಯೂಬಾ ಸರ್ಕಾರದ, ಕ್ಯೂಬಾ ಜನತೆ ರಾಜಕೀಯ ಇಚ್ಛಾಶಕ್ತಿ. ಚಂಡಮಾರುತ ಮುಂತಾದ ಸಾಧ್ಯತೆಗಳ ಕುರಿತು ಮುಂಚಿತವಾಗಿಯೇ ಗ್ರಹಿಸಲಾಗುತ್ತದೆ. ಕನಿಷ್ಠ 24 ಗಂಟೆಗೆ ಮೊದಲೇ ರಕ್ಷಣಾ ಪಡೆಯ ಕಾರ್ಯಕರ್ತರು ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸುತ್ತಾರೆ. ಬಿಹಾರದ ವಿಷಯದಲ್ಲಿ ಪ್ರವಾಹ ಬಂದು ಜನರು, ಜನರ ಬದುಕೇ ಕೊಚ್ಚಿ ಹೋದರೂ ಸರ್ಕಾರ ಕೂಡಲೇ ಸ್ಪಂದಿಸಲಿಲ್ಲ.

ಕ್ಯೂಬಾದಲ್ಲಿ ಕಳೆದ ಒಂದು ದಶಕಗಳ ಅವಧಿಯ ಹಲವು ಚಂಡಮಾರುತಗಳಲ್ಲಿ ಸತ್ತವರ ಸಂಖ್ಯೆ ಕೇವಲ 23 ಮಾತ್ರ. ಮೊನ್ನೆ ಗುಸ್ತಾವ್ ನಂತರ ಬೀಸಿದ ಐಕ್ ಎಂಬ ಚಂಡ ಮಾರುತಕ್ಕೆ ಸಿಲುಕಿ 5 ಜನ ಪ್ರಾಣ ಕಳೆದುಕೊಂಡಿದ್ದಾರೆ. ಆದರೆ ಸರ್ಕಾರವು ಈ 5 ಸಾವುಗಳೇ ಆಘಾತಕಾರಿ ಎಂದು ಪರಿಗಣಿಸಿದೆ. ಇತ್ತೀಚಿನ ಒಂದು ಘಟನೆಯಲ್ಲಿ 5 ಜನರನ್ನು ರಕ್ಷಿಸಲು 36 ದೋಣಿಗಳು ಮೂರು ಹೆಲಿಕ್ಯಾಪ್ಟರ್‌ಗಳು ಹಾಗೂ ಎರಡು ವಿಮಾನ ಸತತವಾಗಿ ಸುಮಾರು 2 ದಿನ ಹುಡುಕಾಟ ನಡೆಸಿದವಂತೆ. ಅಬ್ಬ..! ಎಷ್ಟು ಅಮೂಲ್ಯ ಮನುಷ್ಯ ಜೀವಗಳು ಕ್ಯೂಬಾದಲ್ಲಿ.

ಇದೇ ಮಾತನ್ನು ಜಗತ್ತಿನ ದೈತ್ಯ ಅಮೇರಿಕಾದ ವಿಷಯದಲ್ಲಿ ಹೇಳುವಂತಿಲ್ಲ. ಅಮೇರಿಕಾದಲ್ಲಿ ಇತ್ತಿಚಿನ ಗುಸ್ತಾವ್ ಚಂಡ ಮಾರುತಕ್ಕೆ ಸಿಲುಕಿ ನೂರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ.

ಮನೆ ಬಿಡಲು ಜನ ಹೆದರುತ್ತಾರೆ

ಎಷ್ಟೋ ಸಂದರ್ಭಗಳಲ್ಲಿ ಭಾರತದಲ್ಲೂ ಅಮೇರಿಕಾದಲ್ಲೂ ಸಹ ಪ್ರಾಕೃತಿಕ ವಿಕೋಪ ಸಂಭವ ಇರುವಾಗಲೂ ಜನ ತಮ್ಮ ಮನೆ ತೊರೆಯಲು ಹಿಂಜರಿಯುತ್ತಾರೆ. ಒಮ್ಮೆ ಬಿಟ್ಟು ದೂರ ಬಂದ ಮೇಲೆ ತಮ್ಮ ಮನೆ ಹಾಗೂ ಆಸ್ತಿ ಪಾಸ್ತಿ ಅದೇ ಸ್ಥಿತಿಯಲ್ಲಿ ವಾಪಸ್ ದೊರೆಯುತ್ತದೆ ಎಂಬ ಖಾತರಿ ಜನರಿಗಿಲ್ಲ. ಪ್ರವಾಹ ಸಂತ್ರಸ್ತ ಜನರನ್ನೇ ದರೋಡೆ ಮಾಡುವ ಜನಗಳು, ಇಂಥದ್ದೆಲ್ಲ ಭಾರತದಲ್ಲೂ ಅಮೆರಿಕಾದಲ್ಲೂ ಮಾಮೂಲಿ ವಿಷಯವೇ.

ಇತ್ತೀಚಿನ ಬಿಹಾರದ ಪರಿಹಾರ ಕಾರ್ಯಾಚರಣೆಯು ಪರಿ ಇನ್ನೂ ಆಘಾತಕಾರಿಯಾಗಿದೆ. ನೀರಿನ ನಡುವೆ ಸಿಕ್ಕಿ ಬಿದ್ದವರನ್ನು ರಕ್ಷಿಸುವ ವಿಚಾರದಲ್ಲಿಯೂ ಜಾತಿ ತಾರತಮ್ಯ, ಅಸ್ಪೃಶ್ಯತೆಯಂತಹ ವಿಕೃತಿಗಳು ಕಾಣುತ್ತಿವೆ ಎಂದರೆ ಪರಿಸ್ಥಿತಿ ಏನೆಂದು ಊಹಿಸಿ. ಜನರನ್ನು ಕರೆ ತರುವ ದೋಣಿಗಳಿಗೆ ಮೊದಲ ಆದ್ಯತೆ ಮೇಲ್ಜಾತಿಯ 'ಗೌರವಸ್ಥ' ರು ಪರಿಹಾರ ವಿತರಣೆಯ ವಿಚಾರದಲ್ಲಿಯೂ ಅಷ್ಟೇ. ಅಷ್ಟ

ಪುಟ 15ಕ್ಕೆ

ಕ್ಯೂಬನ್ನರ ಆತ್ಮಗೌರವದ ಬೆಲೆ ಎಷ್ಟು ?

ಇತ್ತೀಚೆಗೆ ಚಂಡಮಾರುತ ಅನಾಹುತಗಳಿಗೆ ಸಿಕ್ಕಿರುವ ಕ್ಯೂಬಾ ದೇಶಕ್ಕೆ ಅಮೇರಿಕಾವು ನೀಡಲು ಮುಂದಾಗಿರುವ ನೆರವನ್ನು ಕ್ಯೂಬಾ ತಿರಸ್ಕರಿಸಿ ಜನತೆಯ 'ಆತ್ಮಗೌರವನ್ನು ರಾಷ್ಟ್ರದ ಆತ್ಮಗೌರವವನ್ನು ದುಡ್ಡಿನೊಂದಿಗೆ ವಿನಿಮಯ ಮಾಡಿಕೊಳ್ಳಲಾಗದು ಅಂತ ಸಾರಿ ಹೇಳಿದೆ.

ಕ್ಯೂಬಾಕ್ಕೆ ಮೊದಲಿಗೆ 1 ಲಕ್ಷ ಡಾಲರ್ ನೆರವು ಘೋಷಿಸಿದ ಅಮೇರಿಕಾ ಕ್ಯೂಬಾ ದೇಶವು ಅಮೇರಿಕಾದ ತಪಾಸಣಾ ತಂಡಕ್ಕೆ ಹಾನಿಯ ಅಂದಾಜನ್ನು ಮಾಡಲು ಅವಕಾಶ ಮಾಡಿಕೊಟ್ಟರೆ 50 ಲಕ್ಷ ಡಾಲರ್ ನೆರವು ನೀಡುವುದಾಗಿ ಹೇಳಿತು.

ಅದಕ್ಕೆ ಫಿದೆಲ್ ಕ್ಯಾಸ್ಟ್ರೋ ಹೇಳಿದರು ಗೊತ್ತೆ? ಕಳೆದ 46 ವರ್ಷಗಳಿಂದ ಅಮೇರಿಕಾದ ದೇಶವು ಕ್ಯೂಬಾದ ಮೇಲೆ ಹೇರಿರುವ ಅಮಾನವೀಯ ಆರ್ಥಿಕ ದಿಗ್ಬಂದನದಿಂದ ಕ್ಯೂಬಾದ ಸಾವಿರಾರು ಜನ ಸತ್ತಿದ್ದಾರೆ. ಕ್ಯೂಬಾಕ್ಕೆ ಅಂದಾಜು 200 ಬಿಲಿಯನ್ ಡಾಲರ್ ನಷ್ಟವಾಗಿದೆ. ಇದಕ್ಕೆ ಅಮೇರಿಕಾ ಯಾವ ಪರಿಹಾರವನ್ನು ಒದಗಿಸಲು ಸಾಧ್ಯ!

ನಮಗೆ ಅಮೇರಿಕಾದ ಯಾವ ನೆರವೂ ಬೇಡ. ನಮಗೆ ಬೇಕಾದ ವಸ್ತುಗಳನ್ನು ನಮಗೆ ಬೇಕಾದವರಿಂದ ಕೊಂಡುಕೊಳ್ಳಲು ಸಾಧ್ಯವಾಗುವಂತೆ ಅಮೇರಿಕಾ ತನ್ನ ಅನ್ಯಾಯಯುತ ದಿಗ್ಬಂಧನವನ್ನು ತೆಗೆದರೆ ಅದೇ ಸಾಕು.

ಒಪ್ಪಿತೇ, ಒಪ್ಪೀತೆ ಅಮೇರಿಕಾ? ಉಹುಂ ಒಪ್ಪಲಿಲ್ಲ. ಅಕಾರಣವಾಗಿ ನಾಗರೀಕರ ಮೇಲೆ ಅಣುಬಾಂಬ್ ಹಾಕಿ ಲಕ್ಷಾಂತರ ಜನರ ಬದುಕನ್ನು ನರಕವಾಗಿಸಿದ ಅಮೇರಿಕಾಕ್ಕೆ ಕ್ಯೂಬಾ ಜನರ ಮೇಲೇನು ವಾತ್ಸಲ್ಯ! ಔಷಧಿ, ಅಗತ್ಯ ವಸ್ತುಗಳಿಲ್ಲದೆ ಕ್ಯೂಬಾ ಜನ ಸತ್ತರೂ ತನ್ನ ಹುಕುಂ ನಡೆಯಬೇಕು. ಅದೇ ಅದರ ಹಠ. ಕಡೆಗೆ ಈ ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ತಾತ್ಕಾಲಿಕವಾಗಿಯಾದರೂ ದಿಗ್ಬಂಧನ ಸಡಿಲಿಸಿ ಎಂದರೆ ಅದಕ್ಕೂ ಅಮೇರಿಕಾದ ನಕಾರ.

ಈ ಬಾರಿ ಕ್ಯೂಬಾದಲ್ಲಿ ಅಂದಾಜು 5 ಬಿಲಿಯನ್ ಡಾಲರ್‌ನಷ್ಟು ಹಾನಿಯಾಗಿದೆ. ಆದರೆ ಕ್ಯಾಸ್ಟ್ರೋ ಗುಡುಗಿದ್ದಾರೆ. 50 ಲಕ್ಷ ಡಾಲರ್ ಬದಲಿಗೆ ಒಂದು ಬಿಲಿಯನ್ ಡಾಲರ್ ಪರಿಹಾರ ಘೋಷಿಸಿದರೂ ಅಮೇರಿಕಾಕ್ಕೆ ಕ್ಯೂಬಾದ ಉತ್ತರ ಇದೇ ಆಗಿರುತ್ತದೆ. 'ಜನತೆಯ ಆತ್ಮಗೌರವಕ್ಕೆ ಬೆಲೆ ಕಟ್ಟಲಾಗುವುದಿಲ್ಲ'.

ಜನಶಕ್ತಿ ಕನ್ನಡ ವಾರಪತ್ರಿಕೆ
ಅಕ್ಟೋಬರ್ 5, 2008



ಸ್ತ್ರೀಯರನ್ನು ನೋಡುವ ಮೂಲಭೂತ ದೃಷ್ಟಿಕೋನದಲ್ಲಿ ಶತಮಾನಗಳ ಕೀಳರಿಮೆ ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ. ಆಧುನಿಕ ವ್ಯಾಪಾರಿಲೋಕ ಭೌತ ಸಂಪತ್ತಿನ ದಾಹದೊಂದಿಗೆ ಸ್ತ್ರೀಯರನ್ನು ಅಗ್ಗದ ಸರಕಾಗಿಸುತ್ತಿದೆ.

ಕಾವ ಕೈಗಳೇ ಸಾವ ತಂದರೆ ?

ಡಾ. ಮೀನಾಕ್ಷಿ ಬಾಳಿ

ಬೆಳ್ಳಿ ಬಟ್ಟಲು ಕಳ್ಳಿ ಹಾಲು
ಕಾವ ಕೈಗಳೇ ಸಾವ ತಂದರೆ
ವಿಷವ ಉಂಡು ಉಳಿಯಲ್ಹ್ಯಾಂಗವ್ವ ॥
ತೃಷವ ಹಿಂಗ ಬದುಕಲ್ಹ್ಯಾಂಗವ್ವ॥
ಕೊಲ್ಲಬ್ಯಾಡ ಕೊಲ್ಲಬ್ಯಾಡವ್ವ ಹೇ ತಾಯಿ ನನ್ನನ್ನ....

ಹೀಗೊಂದು ಅನಾಮಿ ಪಿಂಡದ ಆರ್ತನಾದವೊಂದು ಪರಿಸರದ ತುಂಬೆಲ್ಲ ಹಬ್ಬಿತ್ತು. ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ ಜನಮಾನಸಕ್ಕೆ ಲಗ್ಗೆಯಿಟ್ಟ ಈ ಪದಮುಂಜಗಳು ಹಾಡಾಗಿ ಹರಿದು ಸ್ತಂಭೀಭೂತಗೊಳಿಸುತ್ತಿದ್ದವು. ಗರ್ಭದಲ್ಲಿರುವ ಹೆಣ್ಣು ಮಗುವಿನ ಅನಾಮಿಕ ಪಿಂಡವೊಂದು ತನ್ನನ್ನು ಕೊಲ್ಲಲು ಒಟ್ಟಾರೆ ಸಮಾಜದಲ್ಲಿ ಸಂಬೋಧಿಸುತ್ತ ತನ್ನನ್ನು ಕೊಲ್ಲದಿರುವಂತೆ, ಭೂಮಿಗೆ ಬರಲು ಒಂದೇ ಒಂದು ಅವಕಾಶ ಕೊಡುವಂತೆ ಬೇಡಿಕೊಳ್ಳುತ್ತಿತ್ತು. ಇಂಥದೊಂದು ಹಾಡಿನ ಚುಂಗು ಹಿಡಿದು ಐದು ಪುಟ್ಟ ಪುಟ್ಟ ಹೆಣ್ಣು ಕಂದಮ್ಮಗಳು ಸಭೆಯ ಮುಂದೆ ಬಂದು "ನಾನು ನಿಮ್ಮ ತಾಯಿಯಲ್ಲವೇ? ನಾನು ನಿಮ್ಮ ಮಗಳಲ್ಲವೇ? ನಾನು ನಿಮ್ಮ ಸಂಗಾತಿಯಲ್ಲವೇ? ನಾನು ನಿಮ್ಮ ಗೆಳತಿಯಲ್ಲವೇ? ನಾನು ನಿಮ್ಮ ಸಹೋದರಿಯಲ್ಲವೇ? ಎಂಬ ಫಲಕದೊಂದಿಗೆ ಸಭಿಕರ ಅಂತರಂಗವನ್ನು ಕಲಕಿದವು. ಈ ಇಡೀ ದೃಶ್ಯವು ಗುಲ್ಬರ್ಗಾ ನಗರದಲ್ಲಿ ದಿನಾಂಕ 6,7 ಮತ್ತು 8ನೇ ಸೆಪ್ಟೆಂಬರ್ 2008 ರಂದು ನಡೆದ ಹೆಣ್ಣು ಮಗು ಉಳಿಸಿ ಮಾನವ ಕುಲ ರಕ್ಷಿಸಿ" ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಕಂಡುಬಂದಿತು.

ಕಾರ್ಯಾಗಾರ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯಸಮಿತಿ, ಪ್ರಜ್ಞಾ ಕಾನೂನು ಸಲಹಾ ಸಮಿತಿ ಗುಲ್ಬರ್ಗಾ, ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ, ಈ ಮೂರು ಸಂಸ್ಥೆಗಳು ಸೇರಿ ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳ ಮಹಿಳಾ ಹೋರಾಟಗಾರ್ತಿಯರು ಮತ್ತು ಅಕಾಡೆಮಿ? ಹೆಣ್ಣು ಬ್ರೂಣ ಹತ್ಯೆ ವಿರೋಧಿ ಪ್ರಚಾರಾಂದೋಲನಕ್ಕಾಗಿ ಕಾರ್ಯಾಗಾರ ವೊಂದನ್ನು ನಡೆಸಿದವು. ದೇಶದಲ್ಲಿ ಪ್ರಸರ್ವಪೂರ್ವ ಲಿಂಗಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆ ವಿರೋಧಿ ಕಾನೂನು ಜಾರಿಯಾಗಿ ವರ್ಷಗಳೇ ಸಂದಿವೆ. ದೇಶದಲ್ಲಿ ಜಾರಿಯಾದ ಹಲವಾರು ಗಂಭೀರ ಕಾಯ್ದೆಗಳ ಪೈಕಿ ಪಿಸಿ ಆ್ಯಂಡ್ ಪಿಎನ್‌ಡಿಟಿ ಕಾಯ್ದೆಯು ತುಂಬಾ ಪ್ರಮುಖವಾದುದು. ಆದರೆ ಇಂಥ ಕಾನೂನು ಜಾರಿಯಲ್ಲಿದ್ದಾಗಲೂ ದೇಶದಾದ್ಯಂತ ಎಲ್ಲ ರಾಜ್ಯಗಳಲ್ಲಿ ದಿನದಿಂದ ದಿನಕ್ಕೆ ಹೆಣ್ಣು ಮಕ್ಕಳ ಸಂಖ್ಯೆ ಕುಸಿಯುತ್ತಿರುವುದು ಏನನ್ನು ಸೂಚಿಸುತ್ತದೆ?

ಈ ಕಾಯ್ದೆಯ ಅನುಷ್ಠಾನದಲ್ಲಿ ವ್ಯಾಪಕವಾದ ಅಡಚಣೆಗಳಿವೆ. ಸ್ತ್ರೀಯರನ್ನು ನೋಡುವ ಮೂಲಭೂತ ದೃಷ್ಟಿಕೋನದಲ್ಲಿ ಶತಮಾನಗಳ ಕೀಳರಿಮೆ ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ. ಆಧುನಿಕ ವ್ಯಾಪಾರಿಲೋಕ ಭೌತ ಸಂಪತ್ತಿನ ದಾಹದೊಂದಿಗೆ ಸ್ತ್ರೀಯರನ್ನು ಅಗ್ಗದ ಸರಕಾಗಿಸುತ್ತಿದೆ. ಈ ಎಲ್ಲ ಕಾರಣಗಳಿಗಾಗಿ ಭ್ರೂಣದಲ್ಲಿರುವಾಗಲೇ ಹೆಣ್ಣು ಜೀವವನ್ನು ಹೊಸಕಿ ಹಾಕುತ್ತಿರುವ ದಂಧೆಯು ಕಾನೂನಿನ ಮೂಗಿನಡಿಯಲ್ಲೇ ಎಗ್ಗಿಲ್ಲದೆ ನಡೆಯುತ್ತಿದೆ. ಕಾನೂನು ಮಾಡುವಲ್ಲಿ ತೋರಿಸಿದ ಕಾಳಜಿಯನ್ನು ಸರಕಾರವು ಅದನ್ನು ಜಾರಿ ಮಾಡುವಲ್ಲಿ ತೋರಿಸುತ್ತಿಲ್ಲ ಎಂಬುದೇ ದೊಡ್ಡ ದುರಂತ. ವರದಕ್ಷಿಣೆ, ವೇಶ್ಯಾವಾಟಿಕೆ, ಬಾಲ್ಯ ವಿವಾಹ, ಸತಿಪದ್ಧತಿ, ವೈಫಲ್ಯ, ಬಂಜೆತನ, ಬಹುಪತ್ನಿತ್ವ ಮುಂತಾದ ಸ್ತ್ರೀವಿರೋಧಿ ಸಾಮಾಜಿಕ ಅನಿಷ್ಟಗಳಿಗೆ ಸಂಪ್ರದಾಯಿಕ ನಂಬಿಕೆಗಳು, ಅವೈಜ್ಞಾನಿಕ ಕರ್ಮಠ ಮನೋಭಾವನೆಯೇ ಕಾರಣ ಎಂಬುದಾಗಿ ಆಧುನಿಕ ಪೂರ್ವ ಸಮಾಜವನ್ನು ಟೀಕಿಸಬಹುದಿತ್ತು. ಆದರೆ ವಿಚಿತ್ರ ಮತ್ತು ತೀರಾ ಅಭಾಸದ ಸಂಗತಿ ಎಂದರೆ ಸ್ತ್ರೀ ಭ್ರೂಣಹತ್ಯೆಯು ಆಧುನಿಕ ಮತ್ತು ಆಧುನಿಕೋತ್ತರ ವೈಜ್ಞಾನಿಕ ಆವಿಷ್ಕಾರದ ತಂತ್ರಜ್ಞಾನದ ಫಲವಾಗಿ ಹಬ್ಬಿನಿಂತಿದೆ. ಗರ್ಭದಲ್ಲಿರುವ ಶಿಶುವಿನ ಆರೋಗ್ಯ ಮತ್ತು ತಾಯಿಯ ಆರೋಗ್ಯದ ಪರೀಕ್ಷೆಗಾಗಿ ನಡೆಸುವ ಸೊನೋಗ್ರಾಫಿ ತಂತ್ರಜ್ಞಾನವು ಲಿಂಗಪತ್ತೆಯ ಸಾಧನವಾಗಿ ಪರಿಣಮಿಸಿ ಸ್ತ್ರೀಯರ ಹುಟ್ಟುವ ಹಕ್ಕಿಗೆ ಸಂಚಕಾರ ತಂದದ್ದು ಪ್ರಸ್ತುತ ಯುಗದ ಬಹುದೊಡ್ಡ ದುರಂತವಾಗಿದೆ.

ಜೀವಪರ ಮೌಲ್ಯ ಆಧಾರವಾಗದಿದ್ದಲ್ಲಿ

ಯಾವುದೇ ಒಂದು ಸಮಾಜಕ್ಕೆ ಸಮಾನತೆ, ಜೀವ ಪರವಾದ ಮೌಲ್ಯಗಳು, ಅದರ ಮೂಲ ಆಧಾರವಾಗದಿದ್ದಲ್ಲಿ, ವಿಜ್ಞಾನ, ತಂತ್ರಜ್ಞಾನ, ಮಾನವಿಕ ಜ್ಞಾನ, ಇತ್ಯಾದಿ ಯಾವುದೇ ಕ್ಷೇತ್ರದಲ್ಲಾಗುವ ಆವಿಷ್ಕಾರಗಳು ಜನತೆಗೆ ಪೂರಕವಾಗುವ ಬದಲು ಮಾರಕವೇ ಆಗುತ್ತವೆ ಎಂಬುದಕ್ಕೆ ವೈದ್ಯಕೀಯ ಕ್ಷೇತ್ರದ ರೇಡಿಯೋಲಜಿ ಜ್ವಲಂತ ಸಾಕ್ಷಿಯಾಗಿದೆ. ಈ ಹಿನ್ನೆಲೆಯಲ್ಲಿ ಜನವಾದಿ ಮಹಿಳಾ ಸಂಘಟನೆ ಕಳೆದ ಹತ್ತಾರು ವರ್ಷಗಳಿಂದ ಹೆಣ್ಣು ಭ್ರೂಣಹತ್ಯೆ ವಿರೋಧಿ ಪ್ರಚಾರಾಂದೋಲನದ ಭಾಗವಾಗಿ ಧರಣಿ ಸತ್ಯಾಗ್ರಹ, ಸಭೆ, ವಿಚಾರ ಸಂಕಿರಣ, ಕಲಾಜಾಥಾ ಮುಂತಾಗಿ ಕಾರ್ಯಯೋಜನೆಗಳನ್ನು ರೂಪಿಸುತ್ತಲೇ ಬಂದಿದೆ. ಈ ನಿಟ್ಟಿನಲ್ಲಿ ದೇಶದಲ್ಲಿಯೇ ಜನವಾದಿ ಸಂಘಟನೆ ಹಲವಾರು ಸ್ತ್ರೀಪರ ಕಾನೂನುಗಳನ್ನು ತರುವಲ್ಲಿ ಮುಂಚೂಣಿಯಲ್ಲಿದೆ.

ಕರ್ನಾಟಕದಲ್ಲಿ ಇದೇ ಆಗಸ್ಟ್ 15 ರಂದು ಸ್ತ್ರೀಯರು ಹುಟ್ಟುವ ಸ್ವಾತಂತ್ರ್ಯ ಎಂಬ ಘೋಷಣೆಯೊಂದಿಗೆ ಹೆಣ್ಣು ಭ್ರೂಣಹತ್ಯೆ ವಿರೋಧಿ ಪ್ರಚಾರಾಂದೋಲನವನ್ನು ತೀವ್ರಗೊಳಿಸಿದೆ. ರಾಜ್ಯವ್ಯಾಪಿ ಎಲ್ಲೆಡೆ ಪ್ರಚಾರ ನಡೆಸುವ ಪೂರ್ವಭಾವಿಯಾಗಿ ನಾಲ್ಕು ಕಡೆ ಕಾರ್ಯಾಗಾರ ನಡೆಸಲು ತೀರ್ಮಾನಿಸಲಾಗಿದೆ.

ಮೊದಲನೇ, ಕಾರ್ಯಾಗಾರವು ಗುಲ್ಬರ್ಗಾದಲ್ಲಿ ನಡೆದು, ಅದು ರಾಜ್ಯಕ್ಕೆ ಅಷ್ಟೇ ಅಲ್ಲ ಇಡೀ ದೇಶಕ್ಕೆ ಮಾದರಿಯಾಗುವಂತಿತ್ತು. ದಿನಾಂಕ 6.9.08 ರಂದು ಮುಂಜಾನೆ 11 ಗಂಟೆಗೆ ನಡೆದ ಉದ್ಘಾಟನಾ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ್ದ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ರಾದ ಶ್ರೀ ಹೆಚ್.ಎನ್.ನಾಗಮೋಹನ್ ದಾಸ್‌ರವರು ತಮ್ಮ ಭಾಷಣದಲ್ಲಿ ಸದರಿ ಕಾರ್ಯಾಗಾರದ ವೈಶಿಷ್ಟ್ಯ ಮತ್ತು ಸಾಂದರ್ಭಿಕ ಮಹತ್ವವನ್ನು ಎತ್ತಿ ತೋರಿಸಿದರು. ಮೊದಲ ಬಾರಿಗೆಂಬಂತೆ ಈ ಕಾರ್ಯಾಗಾರದಲ್ಲಿ ತೀರ ಗ್ರಾಮೀಣ ಪ್ರದೇಶದಿಂದ ಬಂದ ಅನಕ್ಷರಸ್ಥ ಮಹಿಳಾ ಹೋರಾಟಗಾರ್ತಿಯರೊಂದಿಗೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಶಾಲಾ ಕಾಲೇಜುಗಳ ಶಿಕ್ಷಕರು, ವಕೀಲರು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ವಿದ್ಯಾರ್ಥಿಗಳು, ವೈದ್ಯರು, ಬುದ್ದಿಜೀವಿಗಳು ಸಮಸಮವಾಗಿ ಬೆರೆತು ಅಖಂಡ ಮೂರು ದಿನಗಳವರೆಗೆ ಚರ್ಚೆ ನಡೆಸಿದರು. ತಳಮಟ್ಟದಲ್ಲಿ ಹೋರಾಟ ನಡೆಸುವ ಜನಸಾಮಾನ್ಯರ ಅನುಭವ ಪ್ರಾಮುಖ್ಯವನ್ನು ಆಧಾರವಾಗಿಟ್ಟುಕೊಂಡು ಪ್ರಯೋಗಾತ್ಮಕ ಸಿದ್ಧಾಂತಗಳನ್ನು ಕಟ್ಟಿಕೊಳ್ಳಬೇಕಾದದ್ದು ಇಂದಿನ ಜರೂರಿಯಾಗಿದೆ ಎಂದು ಅವರು ಕಾರ್ಯಾಗಾರಕ್ಕೆ ಅರ್ಥಪೂರ್ಣ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಮೂಳೆ ತಜ್ಞರಾದ ಡಾ॥ ಎಸ್.ಎಸ್.ಪಾಟೀಲ ಭ್ರೂಣಹತ್ಯೆ ವಿರೋಧಿ ಅರಿವು ಮೂಡಿಸುವ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ॥ ಹಿ.ಚಿ. ಬೋರಲಿಂಗಯ್ಯ ಅವರು ಜಾಗತಿಕ ಪೈಪೋಟಿಯ ಈ ಸಂದರ್ಭದಲ್ಲಿ ದೇಶೀಯ ಜ್ಞಾನಶಿಸ್ತುಗಳು ವಹಿಸಬೇಕಾದ ಪಾತ್ರ ಮತ್ತು ಈ ನಿಟ್ಟಿನಲ್ಲಿ ಸಾಮಾನ್ಯ ಜನತೆಯ ಪಾಲುದಾರಿಕೆ ಕುರಿತು ಗಂಭೀರ ಚಿಂತನೆ ನಡೆಸಲು ಕರೆಕೊಟ್ಟರು. ಡಾ॥ ಶಿವಾನಂದ ವಿರಕ್ತಮಠ (ನಿರ್ದೇಶಕರು ಮಹಿಳಾ ಅಧ್ಯಯನ ಕೇಂದ್ರ ಕ.ವಿ.ವಿ. ಹಂಪಿ) ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಾಗಾರದ ವಿನ್ಯಾಸ, ಉದ್ದೇಶ ಮತ್ತು ಮುಂದಿನ ಕಾರ್ಯತಂತ್ರಗಳನ್ನು ಸಾದರಪಡಿಸಿದರು. ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಡಾ.ಮೀನಾಕ್ಷಿ ಬಾಳಿಯವರು ಸ್ವಾಗತಿಸುತ್ತ ಲಿಂಗಾನುಪಾತದ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿದ ಕೆ.ನೀಲಾ ಅವರು ಚಿಂತನೆ ಚಳುವಳಿಯ ಅವಿನಾಭಾವ ಸಂಬಂಧ ಕುರಿತು ಸಭಿಕರ ಗಮನ ಸೆಳೆದರು. ಡಾ.ಶಾಂತಾ ಮಠ ಕಾರ್ಯಕ್ರಮ ನಿರೂಪಿಸಿದರು. ಜನವಾದಿಯ ಶಶಿಕಲಾ ಕಡಗಂಚಿ ವಂದಿಸಿದರು.

ಉದ್ಘಾಟನೆಯ ಗಂಭೀರತೆಯನ್ನು ಮುಂದಿನ ಗೋಷ್ಠಿಗಳು ಹೆಚ್ಚು ಉತ್ಕೃಷ್ಟಗೊಳಿಸಿದ್ದು ಉಲ್ಲೇಖನಾರ್ಹ. "ಗರ್ಭಪಾತದ ತಥ್ಯ ಮತ್ತು ಮಿಥ್ಯಗಳು" ಕುರಿತು ಡಾ.ರಸಾಳಕರ್, "ಲಿಂಗಪತ್ತೆಯ ಅಡ್ಡಪರಿಣಾಮಗಳ ಕುರಿತು ಡಾ.ಮೀನಾಕ್ಷಿ ಬಾಳಿ. "ಲಿಂಗಪತ್ತೆ ಮತ್ತು ಬ್ರೂಣಹತ್ಯೆಯ ಸುತ್ತ" ಡಾ॥ ಶಾಂತಾ ದುರ್ಗೆ, ಸಂವಾದದಲ್ಲಿ ಡಾ॥ ವನಿತಾ ಧಾರವಾಡಕರ್, ಡಾ॥ ಜಯಶ್ರೀ ಹಾಲಕಾಯಿ, ಸ್ತ್ರೀ ಸಂಕುಲ ಮತ್ತು ಪಾರಂಪಾರಿಕ ನಂಬಿಕೆ" ವಿಷಯ ಕುರಿತು ಶಿವಶರಣ ಮುಳೆಗಾಂವ, "ಲಿಂಗಾನುಪಾತದ ಇಳಿಕೆ ಮತ್ತು ರಾಜಕೀಯ ಕಾರಣಗಳು", ಕುರಿತು ಕೆ.ಎಸ್.ಲಕ್ಷ್ಮಿ ಲಿಂಗಸಂವೇದನೆ ಮತ್ತು ಸಾಂಸ್ಕೃತಿಕ ಸಾಧ್ಯತೆ ಕುರಿತು ಡಾ॥ ಶಿವಾನಂದ ವಿರಕ್ತಮಠ, "ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರ ಪಾಲುದಾರಿಗೆ" ಕೆ.ನೀಲಾ ಎಂಟಿಪಿ (ಎಂಟಿಪಿ) ಕಾಯ್ದೆಯ ಅನುಷ್ಠಾನ ಮತ್ತು ಪರಿಣಾಮಗಳನ್ನು ಕುರಿತು ಎಸ್‌ಎಸ್ ಹಿರೇಮಠ "ಪಿಸಿ ಅಂಡ್ ಪಿಎನ್‌ಡಿಟಿ ಕಾಯ್ದೆಯ ಅನುಷ್ಠಾನದಲ್ಲಿ ಸಂಘಟನೆಯ ಮಹತ್ವ" ವಿಷಯ ಕುರಿತು ಕಿರಣ ಮೋಘೆ ಮಾತನಾಡಿ ವಿಷಯವನ್ನು ಸಾದರಪಡಿಸಿದರು. ಪ್ರತಿ ವಿಷಯ ಮಂಡನೆಗಾರರೊಂದಿಗೆ ಸುದೀರ್ಘ ಚರ್ಚೆಗೆ ಅವಕಾಶ ನೀಡಲಾಗಿತ್ತು. ಸಾಯಂಕಾಲ ಬೀದರ ಸಮುದಾಯ ತಂಡದಿಂದ ಸ್ತ್ರೀಪರ ಕ್ರಾಂತಿಗೀತೆಗಳ ಮತ್ತು ಎಂ.ವಾಯ್ ಸುರಪೂರ ತಂಡದವರಿಂದ ಸ್ತ್ರೀಪರ ವಚನ ಗಾಯನ ತರಬೇತಿ ಕೊಡಿಸಲಾಯಿತು.

ಸಮಿತಿ ರಚನೆ

ಇದೇ ಸಂದರ್ಭದಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿ ಮತ್ತು ಸಮುದಾಯ ಗುಲ್ಬರ್ಗಾ ತಂಡದ ಶ್ರೀ ಶೈಲ ಘೂಳಿ, ಮೆಹರಾಜ್, ಪಟೇಲ, ಡಾ ಕೆ. ಲಿಂಗಪ್ಪ, ನಾಗೇಂದ್ರಪ್ಪ ಅವರಾದಿ ಮುಂತಾದವರಿಂದ ಬಾನಾಮತಿ ಬಯಲು ಪ್ರಾತ್ಯಕ್ಷಿಕತೆ ನಡೆಸಲಾಯಿತು. ಸಮಾರೋಪ ಭಾಷಣ ಮಾಡಿದ ಹಂಪಿ ಕ.ವಿ.ವಿ ಉಪಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರು ಆಧುನಿಕ ಆವಿಷ್ಕಾರಗಳು ಮತ್ತು ಪಾರಂಪಾರಿಕ ಜ್ಞಾನ ಶಿಸ್ತುಗಳು ಜೊತೆಗೂಡಿ ಒಟ್ಟು ಜನಪರ, ಜೀವಪರ ತುಡಿತವಾಗಿ ಅರಳಬೇಕಾದ ಅನಿವಾರ್ಯತೆಯನ್ನು ಎತ್ತಿ ತೋರಿಸಿದರು. ಚಿಂತನೆಗೆ ಆಧಾರವಾಗಬೇಕಾದ ಚಳುವಳಿಗಾರರು ಇಲ್ಲಿ ಸಮಸಮವಾಗಿ ಬೆರೆತು ಭವಿಷ್ಯದ ಪ್ರಮೇಯಗಳನ್ನು ರೂಪಿಸಿಕೊಳ್ಳುವ ದಾರಿಯಲ್ಲಿ ಪ್ರಸ್ತುತ ಕಾರ್ಯಾಗಾರವು ತುಂಬಾ ಆಶಾದಾಯಕವಾಗಿದೆ.

ಸದರಿ ಕಾರ್ಯಾಗಾರದ ಆಯೋಜಕರು ಸ್ಥಳೀಯ ಪಿಸಿ ಅಂಡ್ ಪಿಎನ್‌ಡಿಟಿ ಕಮಿಟಿಯ ಸದಸ್ಯರು ಮತ್ತು ನಗರದ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞ ವೈದ್ಯರನ್ನು ಕರೆಸಿ ಶಿಬಿರಾರ್ಥಿಗಳೊಂದಿಗೆ ಸಂವಾದಕ್ಕೆ ಒಡ್ಡಿದರು. ಈ ಸಂವಾದದ ಪ್ರಶ್ನೋತ್ತರಗಳು ಸ್ತ್ರೀಭ್ರೂಣ ಹತ್ಯೆ ತಡೆಯಬೇಕಾದ ಸರಕಾರಿ ಯಂತ್ರ ಮತ್ತು ವೈದ್ಯ ಬ್ರಹ್ಮರಿಗೆ ಎಚ್ಚರಿಕೆ ಗಂಟೆಯಾಗಿದ್ದವು. ಇದರೊಟ್ಟಿಗೆ ಜನರ ಯೋಚನಾ ಲಹರಿಯನ್ನು ಬದಲಿಸುವ ನಿಟ್ಟಿನಲ್ಲಿ ಪ್ರತಿಗ್ರಾಮ, ಮೊಹಲ್ಲಾಗಳಿಗೆ ಮುಟ್ಟಿ ಅರಿವಿನ ಆಂದೋಲನ ನಡೆಸಲು ಪ್ರಚಾರಾಂದೋಲನ ಕಮಿಟಿಯೊಂದನ್ನು ರಚಿಸಲಾಯಿತು. ಹೀಗೆ ವಿಷಯದ ಸಮಗ್ರ ಚಿಂತನೆ ಮತ್ತು ವೈವಿಧ್ಯಮಯ ಕಾರ್ಯಕ್ರಮಗಳಿಂದಾಗಿ ಕಾರ್ಯಾಗಾರವು ಮಾದರಿಯಾಗಿದೆ ಎಂಬುದು ಶಿಬಿರಾರ್ಥಿಗಳ ಅಂಬೋಣವಾಗಿದೆ. ○

ಜಾಮಿಯಾನಗರ ಎನ್‌ಕೌಂಟರ್ : ನ್ಯಾಯಾಂಗ ತನಿಖೆಯಾಗಲಿ

ಸೆಪ್ಟೆಂಬರ್ 19 ರಂದು, ನವದೆಹಲಿಯ ಜಾಮಿಯಾ ನಗರದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಭಯೋತ್ಪಾದಕರು ಎಂದು ಶಂಕಿಸಲಾದ ಅತೀಫ್ ಮತ್ತು ಸಾಜಿದ್ ಮೃತಪಟ್ಟಿದ್ದು ಹಲವಾರು ಶಂಕೆಗಳನ್ನು ಮೂಡಿಸಿದೆ. ಶಂಕಿತ ಭಯೋತ್ಪಾದಕರನ್ನು ಬಂಧಿಸಲು ಮುಂದಾದಾಗ ಎನ್‌ಕೌಂಟರ್ ನಡೆಸಲಾಗಿದೆ. ಇವರೊಂದಿಗಿದ್ದ ಪೈಶಾಚಿಕ ಬಂದವರಂತೆ ವರ್ತಿಸಿದ ಮಾಧ್ಯಮಗಳು ಇಡೀ ಜಾಮಿಯಾನಗರವನ್ನು ಪ್ರಕ್ಷುಬ್ಧ ಸ್ಥಿತಿಗೆ ದೂಡಿದ್ದವು. ಅದು ಪ್ರದೇಶದಲ್ಲಿರುವ ಜನತೆಯಲ್ಲಿ ಅಭದ್ರತೆ ಮೂಡಿಸಿತ್ತು.

ದೆಹಲಿಯ ಅನ್ಸಲ್ ಪ್ಲಾಜಾ ಎನ್‌ಕೌಂಟರ್ ಇರಬಹುದು ಇಲ್ಲವೇ ಗುಜರಾತ್‌ನಲ್ಲಿನ ಸೊಹ್ರಾಬುದ್ದೀನ್ ಮತ್ತು ಆತನ ಪತ್ನಿ ಕೌಸರ್‌ಬಿ ಇರಬಹುದು ಇವೆಲ್ಲ ನಕಲಿ ಎನ್‌ಕೌಂಟರ್‌ಗಳಾಗಿದ್ದು ದುರುದ್ದೇಶ ಪೂರಕವಾಗಿ ನಡೆಸಿರುವುದಾಗಿವೆ. ಪರಿಪೂರ್ಣವಾದ ಸ್ವತಂತ್ರ ನ್ಯಾಯಾಂಗ ತನಿಖೆಯಿಂದ ಮಾತ್ರ ಜಾಮಿಯಾನಗರದ ಎನ್‌ಕೌಂಟರ್ ಕುರಿತ ಅನುಮಾನಗಳು ನಿವಾರಣೆಯಾಗಲು ಸಾಧ್ಯ.

ದೇಶವನ್ನು ಗಂಭೀರವಾಗಿ ಕಾಡುತ್ತಿರುವ ಭಯೋತ್ಪಾದನೆಯನ್ನು ನಿಗ್ರಹಿಸಲು ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಕುರಿತು ಎರಡು ಮಾತಿಲ್ಲ. ನಾಗರೀಕ ಸಮಾಜದಲ್ಲಿ ಅಮಾಯಕರ ಸಾವಿಗೆ ಕಾರಣವಾಗುವ ಈ ಕ್ರೂರ ಭಯೋತ್ಪಾದನಾ ಕೃತ್ಯಗಳಿಗೆ ಇಲ್ಲಿ ಕಿಂಚಿತ್ತೂ ಅವಕಾಶವಿರಬಾರದು. ಸತತವಾಗಿ ನಡೆಯುತ್ತಿರುವ ಸರಣಿ ಬಾಂಬ್ ಸ್ಫೋಟಗಳು ಜನತೆ ಆತಂಕಗೊಳ್ಳುವಂತೆ ಮಾಡಿದ್ದು ದೇಶಾದ್ಯಂತ ಅಭದ್ರತೆಯ ವಾತಾವರಣ ಮೂಡಿಸಿದೆ. ಗುಪ್ತಚಾರ ಮತ್ತು ತನಿಖಾ ತಂಡಗಳ ಬೇಜವಾಬ್ದಾರಿತನ ಈ ಭೀತಿಯನ್ನು ಇನ್ನಷ್ಟು ಉಲ್ಬಣಿಸಿದೆ. ಭಯೋತ್ಪಾದನೆ ಕೃತ್ಯಗಳಿಗೆ ಮೂಲ ಕಾರಣರಾದವರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂಬುದು ಎಲ್ಲಾ ಭಾರತೀಯರ ಆಗ್ರಹವಾಗಿದೆ.

ಆದರೆ ಇಲ್ಲಿ ನಾವು ಕಾಣುತ್ತಿರುವುದೇನೆಂದರೆ ಭಯೋತ್ಪಾದನೆ ದಾಳಿ ಮತ್ತು ಕೃತ್ಯಗಳನ್ನು ನಡೆಸಿದಾಗ ಮಾತ್ರ ಅವರ ಹಿಂದಿನ ರೂವಾರಿಯನ್ನು ಬಂಧಿಸುವ ಕೆಲಸವಾಗುತ್ತಿದೆ. ಗೃಹ ಇಲಾಖೆ ಮತ್ತು ಭದ್ರತಾ, ಹಾಗೂ ಗುಪ್ತಚಾರ ಇಲಾಖೆಗಳು ಕೃತ್ಯಗಳು ಜರುಗುವ ಮೊದಲೇ ತಪ್ಪಿಸುವ ಆರೋಪಿಗಳನ್ನು ಬಂಧಿಸುವ ಸಾಕಷ್ಟು ಅವಕಾಶಗಳಿದ್ದರೂ ಅದನ್ನು ಮಾಡಲು ಮುಂದಾಗುತ್ತಿಲ್ಲ.

ಜಾಮಿಯಾನಗರದಲ್ಲಿ ಸಾಕಿಬ್ ನಿಸಾರ್ ಅವರನ್ನು ಪೋಲಿಸರು ಬಂಧಿಸಿದರು. ಅಹಮದಾಬಾದ್ ಸರಣಿ ಸ್ಫೋಟದ ಹಿಂದಿನ ರೂವಾರಿ ಈತ ಎಂದು ದೆಹಲಿ ಪೋಲೀಸರು ಹೇಳಿದರು. ಆದರೆ ಪೋಲೀಸರ ಈ ಆರೋಪಕ್ಕೆ ಸಾಕ್ಷ್ಯಾಧಾರಗಳೇ ಇರಲಿಲ್ಲ. ಅಹಮದಾಬಾದ್‌ನಲ್ಲಿ ಸರಣಿ ಸ್ಫೋಟ ಸಂಭವಿಸಿದ ದಿನ ನಿಸಾರ್ ಎಂ.ಬಿ.ಎ. ಪರೀಕ್ಷೆಗೆ ಹಾಜರಾಗಿದ್ದ ಎಂದು ದಿನಪತ್ರಿಕೆಯೊಂದು ಸಾಕ್ಷಿ ಸಹಿತ ಪ್ರಕಟಿಸಿದೆ. ಸ್ವತಃ ಎನ್‌ಕೌಂಟರ್‌ನಲ್ಲಿ ಸಾವನ್ನಪ್ಪಿದ ಪೊಲೀಸ್ ಇನ್ಸ್‌ಪೆಕ್ಟರ್ ಮೋಹನ್‌ಚಂದ್ ಶರ್ಮ ಸಾವು ಸಹ ಅನುಮಾನಾಸ್ಪದವಾಗಿದೆ ಎಂದು ಮಾಹಿತಿಗಳು ಹೇಳುತ್ತವೆ. ಹಾಗೆಯೇ 'ಭಯೋತ್ಪಾದಕರು' ಗುಂಡು ಹಾರಿಸಿದರು ಎಂಬುದನ್ನು ಸ್ಥಳೀಯರು ಪ್ರಶ್ನಿಸುತ್ತಾರೆ. ಪೋಲೀಸರು ಜಾಮಿಯಾ ನಗರದಲ್ಲಿ ನಡೆಸಿದ ಬಂಧನಗಳು ಮತ್ತು ಎನ್‌ಕೌಂಟರ್‌ಗಳು ಹಲವಾರು ಅನುಮಾನಗಳನ್ನು ಮೂಡಿಸಿದೆ. ಈ ಘಟನೆ ಕೇವಲ ಮುಸ್ಲಿಂ ಜನಾಂಗದಲ್ಲಿ ಮಾತ್ರ ಭೀತಿಯನ್ನು ಮೂಡಿಸಿಲ್ಲ. ಮೊಬೈಲ್‌ಗಳು, ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಬಳಕೆ ಮಾಡುವ ಯುವಕರು ಮತ್ತು ಪೋಷಕರಲ್ಲಿಯೂ ಭೀತಿಯನ್ನು ಮೂಡಿಸಿದೆ.

ಪೋಲಿಸರು ಜವಾಬ್ದಾರಿಯಿಂದ ಪಾರದರ್ಶಕವಾಗಿ ಹೊಣೆಗಾರಿಕೆ ಮತ್ತು ವೃತ್ತಿಪರತೆಯಿಂದ ಕರ್ತವ್ಯ ನಿರ್ವಹಿಸುವಂತೆ ಒತ್ತಾಯಿಸಬೇಕಾಗಿದೆ. ಭಯೋತ್ಪಾದನೆಯನ್ನು ನಿಗ್ರಹಿಸುವ ನೆಪದಲ್ಲಿ ಅಮಾಯಕ ಮುಸ್ಲಿಮರನ್ನು ಬಂಧಿಸಿ ಕಿರುಕುಳ ನೀಡದಂತೆ ಪೋಲಿಸರು ಕರ್ತವ್ಯ ನಿರ್ವಹಿಸಬೇಕಿದೆ.



ದೆಹಲಿ ಸರಣಿ ಸ್ಫೋಟಕ್ಕೆ ಸಂಬಂಧಿಸಿದಂತೆ ಮಾಡಿರುವ ಎಲ್ಲ ಬಂಧನಗಳನ್ನು ಪಾರದರ್ಶಕವಾಗಿ ಪೋಲೀಸರು ಬಿಚ್ಚಿಡಬೇಕು. ಯಾವುದೆ ಪ್ರದೇಶದಿಂದ ಯಾರನ್ನೇ ಬಂಧಿಸುವ ಮೊದಲು ಆ ಪ್ರದೇಶದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.


ಎಲ್ಲಾ ಮುಸ್ಲಿಮರನ್ನು ಭಯೋತ್ಪಾದರಂತೆ ಕಾಣುವ ಪ್ರವೃತ್ತಿ ಅವರಲ್ಲಿ ಪ್ರತ್ಯೇಕತಾ ಭಾವನೆ ಮೂಡಿಸುವುದರೊಂದಿಗೆ ಭಯೋತ್ಪಾದನೆ ವಿರುದ್ಧದ ಪ್ರಾಮಾಣಿಕ ಹೋರಾಟವನ್ನು ದುರ್ಬಲಗೊಳಿಸುತ್ತದೆ. ಬಿಜೆಪಿ, ಆರ್.ಎಸ್.ಎಸ್. ಮತ್ತು ವಿಹಿಪಿ ತೊಡಗಿರುವುದು ಇಂತಹ ಪ್ರವೃತ್ತಿ ಸೃಷ್ಟಿಸಲು. ಹಾಗಾಗಿ ಇದಕ್ಕೆ ಯಾರೂ ಸಹ ಅವಕಾಶ ನೀಡಬಾರದು. ಜಾಮಿಯಾ ನಗರದ ಮುಸ್ಲಿಮರು, ಅಜಂಘಡದ ಮುಸ್ಲಿಮರು ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳನ್ನು ಭಯೋತ್ಪಾದಕರ ರೀತಿಯಲ್ಲಿ ಕಾಣಲಾಗುತ್ತಿದೆ. ಮಾಧ್ಯಮಗಳು ಸಹ ಈ ಪ್ರವೃತ್ತಿಗೆ ಪೂರಕವಾಗುವಂತೆ ಪ್ರಚಾರಗಳನ್ನು ಕೈಗೊಳ್ಳುತ್ತಿವೆ.

ಸರಣಿ ಸ್ಫೋಟಗಳು ಸಂಭವಿಸಿದಾಗಿನಿಂದಲೂ ಮಾಧ್ಯಮಗಳು ಈ ಘಟನೆಗಳನ್ನು ಉದ್ರೇಕಕಾರಿಯಾಗಿ ಬಿಂಬಿಸುತ್ತಿದ್ದು ಕೋಮುವಾದಿ ಭಾವನೆಗಳನ್ನು ಕೆರಳಿಸುತ್ತಿವೆ.

ಜನತೆ ಭಯೋತ್ಪಾದನೆ ವಿರುದ್ಧ ಒಗ್ಗಟ್ಟಾಗುವುದರೊಂದಿಗೆ, ಭಯೋತ್ಪಾದನೆ ನೆಪದಲ್ಲಿ ಅಮಾಯಕ ಮುಸ್ಲಿಮರಿಗೆ ನೀಡುವ ಕಿರುಕುಳವನ್ನು ತಡೆಯಬೇಕು. ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳು ಜಾಮಿಯಾನಗರದ ಅಮಾಯಕ ಮುಸ್ಲಿಮರಿಗೆ ಬೆಂಬಲವಾಗಿ ನಿಲ್ಲಬೇಕು. ಇದರೊಂದಿಗೆ ಪೋಲೀಸರು ಭಯೋತ್ಪಾದನೆ ಹೆಸರಿನಲ್ಲಿ ಕಾನೂನು ಮತ್ತು ಇದರೊಂದಿಗೆ ಪೋಲೀಸರು ಭಯೋತ್ಪಾದನೆ ಹೆಸರಿನಲ್ಲಿ ಕಾನೂನು ಮತ್ತು ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳದಂತೆ ತಪ್ಪಿಸಬೇಕಾಗುತ್ತದೆ.

ಹೇಡಿತನದ ತೃಣಮೂಲ ದಾಳಿ

ಪಶ್ಚಿಮಬಂಗಾಳದ ಸಿಂಗೂರ್‌ನಲ್ಲಿನ ಟಾಟಾ ಮೋಟರ್ಸ್ ಘಟಕಕ್ಕೆ ಕಳೆದ 22 ರ ರಾತ್ರಿ ನುಗ್ಗಿದ ತೃಣಮೂಲ ಕಾಂಗ್ರೆಸ್ ಗೂಂಡಾಗಳು ಇಬ್ಬರು ಗಾರ್ಡ್‌ಗಳ ಮೇಲೆ ತೀವ್ರ ರೀತಿಯ ದಾಳಿ ಮಾಡಿದ್ದಾರೆ. ಇಬ್ಬರು ಗಾರ್ಡ್‌ಗಳನ್ನು ಚಿಕಿತ್ಸೆಗಾಗಿ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಇದೊಂದು ಹೇಡಿತನದ ದಾಳಿಯಾಗಿರುವುದರೊಂದಿಗೆ ಪಿತೂರಿಯಾಗಿದೆ.



ಪಶ್ಚಿಮಬಂಗಾಳದ ಎಡರಂಗ ಸರ್ಕಾರದ ಸತತ ಪ್ರಯತ್ನಗಳಿಂದಾಗಿ ಬಂದಿರುವ ಈ ಬೃಹತ್ ಯೋಜನೆ ಆಗಗೊಡದಂತಹ ದುಷ್ಕೃತ್ಯಗಳನ್ನು ನಡೆಸಲಾಗುತ್ತಿದೆ. ಸಿಂಗೂರ್‌ನ ಜನತೆಗೆ ಈಗಾಗಲೇ ವಿಶೇಷ ಪ್ಯಾಕೇಜ್ ಪ್ರಕಟಿಸಲಾಗಿದೆ. ಈ ಪ್ಯಾಕೇಜ್‌ನಲ್ಲಿ ಸುಸ್ಥಿರ ಆರ್ಥಿಕ ಮತ್ತು ಪುನರ್ ವಸತಿ ನೆರವಿದೆ. ಭೂಮಿಯ ಮಾಲೀಕರು ರೈತರು, ಭೋಗ್ಯಕ್ಕೆ ವ್ಯವಸಾಯ ಮಾಡುತ್ತಿದ್ದವರು, ಮತ್ತು ಕೃಷಿ ಕೂಲಿ ಕಾರ್ಮಿಕರಿಗೂ ಈ ಪ್ಯಾಕೇಜ್ ನೆರವಾಗಲಿದೆ.

ರೈತರು ಮತ್ತು ಕೃಷಿ ಮೇಲೆ ಅವಲಂಬಿಸಿರುವ ಎಲ್ಲರಿಗೂ ಪರಿಹಾರ ಒದಗಿಸುವ ಪ್ರಯತ್ನದಲ್ಲಿ ಎಡರಂಗ ಮುಂದೆ ಸಾಗುತ್ತಿದೆ. ಆದರೆ ತೃಣಮೂಲ ಕಾಂಗ್ರೆಸ್ ಮತ್ತು ಅವರ ಹಿಂಬಾಲಕರು ಸಿಂಗೂರ್ ಯೋಜನೆಯನ್ನು ಆಗ ಮಾಡಬಾರದೆಂಬ ಒಂದೇ ಕಾರಣದಿಂದ ಪ್ರತಿರೋಧಗಳನ್ನು ಒಡ್ಡುತ್ತಿದ್ದಾರೆ.

ವಾರದಿಂಚೀಗಿನ ಬೆಳವಣಿಗೆಗಳಿಗೂ ಮೊದಲು ತೃಣಮೂಲ ಕಾಂಗ್ರೆಸ್ 'ಧರಣಿ, ಸತ್ಯಾಗ್ರಹ'ಗಳನ್ನು ಕೈಗೊಳ್ಳುವ ಮೂಲಕ ಕಾರ್ಖಾನೆಯ ಕಾರ್ಮಿಕರಿಗೆ ಬೆದರಿಕೆಗಳನ್ನು ಒಡ್ಡಿತ್ತು. ಕಂಪನಿ ತಾತ್ಕಾಲಿಕವಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿತು. ಈಗ ಗಾರ್ಡ್‌ಗಳ ಮೇಲೆ ನಡೆಸಿರುವ ದಾಳಿ ಆ ಪಕ್ಷ ಮತ್ತು ಅವರ ಗೂಂಡಾಗಳ ಉದ್ದೇಶ ಏನೆಂಬುದನ್ನು ಸ್ಪಷ್ಟಪಡಿಸಿದೆ. ಕಾರ್ಖಾನೆಯನ್ನು ಸಂಪೂರ್ಣವಾಗಿ ಮುಚ್ಚುವುದ ಅವರ ಏಕೈಕ ಯೋಜನೆಯಾಗಿದೆ. ಇದೇ ಸಂದರ್ಭದಲ್ಲಿ ಸಿಂಗೂರ್ ಜನತೆಯನ್ನು ಎತ್ತಿ ಕಟ್ಟುವುದು ಅವರ ಮುಖ್ಯ ಉದ್ದೇಶವಾಗಿದೆ.

ಶಾಂತರೀತಿಯಿಂದ ಸತ್ಯಾಗ್ರಹ ನಡೆಸುತ್ತಿದ್ದೇವೆ ಎಂದು ತೃಣಮೂಲ ಕಾಂಗ್ರೆಸ್ ಸಾರ್ವಜನಿಕವಾಗಿ ಪ್ರಕಟಿಸುತ್ತಿದೆ. ಆದರೆ ವಾಸ್ತವವಾಗಿ ದಾಳಿಗಳನ್ನು ನಡೆಸುತ್ತಿದೆ. ಪಶ್ಚಿಮಬಂಗಾಳ ಸರ್ವತೋಮುಖ ಅಭಿವೃದ್ಧಿ ಕಾಣಬಾರದೆಂಬ ಉದ್ದೇಶದಿಂದ ಈ ಕೃತ್ಯಗಳಿಗೆ ಇಳಿದಿದೆ. ಉದ್ಯೋಗಗಳ ಸಂಖ್ಯೆ ಹೆಚ್ಚುವುದು ಅವರಿಗೆ ಇಷ್ಟವಿಲ್ಲ. ಕೈಗಾರಿಕೀಕರಣದ ಮೂಲಕ ಉದ್ಯೋಗ ಹೆಚ್ಚಾಗಿ, ರಾಜ್ಯ ಅಭಿವೃದ್ಧಿ ಕಾಣುವುದು ತೃಣಮೂಲ ಕಾಂಗ್ರೆಸ್ಸಿಗೆ ಇಷ್ಟವಿಲ್ಲ.

ಪಶ್ಚಿಮಬಂಗಾಳದ ಜನತೆ ಮುಂದೆ ಬಂದು ರಾಜ್ಯದ ಅಭಿವೃದ್ಧಿಗೆ ತೊಡಕಾಗಿರುವ ಇಂತಹ ಶಕ್ತಿಗಳ ಪ್ರಯತ್ನಗಳನ್ನು ವಿಫಲಗೊಳಿಸಬೇಕೆಂದು ಎಡರಂಗ ಸರ್ಕಾರ ಮನವಿ ಮಾಡಿದೆ. ಈ ಎಲ್ಲ ಕೃತ್ಯಗಳ ವಿರುದ್ಧ ಸಂಘಟಿತ ಹೋರಾಟ ನಡೆಸಲು ಅದು ತೀರ್ಮಾನಿಸಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ
ಅಕ್ಟೋಬರ್ 5, 2008

<u>ನಾಯಿ ಕಚ್ಚುವುದರಿಂದ ಮಾತ್ರವಲ್ಲ ರೋಗಪೀಡಿತ ಹಸುವಿನ ಹಾಲು ಕುಡಿದರೂ ರೇಬಿಸ್ ಬರಬಹುದು. ರೇಬಿಸ್‌ಗೆ ಚಿಕಿತ್ಸೆ ಏನು? ಪರಿಹಾರ ಏನು?</u>

ರೇಬಿಸ್ ರೋಗ ತಡೆಗಟ್ಟಲು ಹೊಸ ಔಷಧಿಯ ಉಪಯೋಗ

ಡಾ: ಪ್ರಕಾಶ್ ಸಿ. ರಾವ್

ಬೀದಿ ನಾಯಿಗಳು ಜನರನ್ನು ಕಚ್ಚುವ ಸುದ್ದಿಯನ್ನು ಪತ್ರಿಕೆಗಳು ವರದಿ ಮಾಡಿದಾಗ, ಎಲ್ಲರೂ ಸ್ವಲ್ಪ ದಿನದ ಮಟ್ಟಿಗೆ ರೇಬಿಸ್ ರೋಗದ ಬಗ್ಗೆ ಭಯಗ್ರಸ್ಥರಾದಂತಿತ್ತು. ಕರ್ನಾಟಕದ ಆಗಿನ ಆರೋಗ್ಯ ಮಂತ್ರಿಗಳು (2006) ದಿನಕ್ಕೆ 1000 ಬೀದಿ ನಾಯಿಗಳನ್ನು ಸಾಯಿಸುವುದಾಗಿ ಹೇಳಿಕೆ ಕೊಟ್ಟರಲ್ಲದೆ ಜನರು ನಾಯಿ ಕಂಡರೂ ಬೆಚ್ಚಿಬೀಳುವ ಪರಿಸ್ಥಿತಿಗೆ ತಲುಪುವಂತೆ ಮಾಡಿದರು. ಆದರೆ ಆರೋಗ್ಯ ಕೇಂದ್ರಗಳಲ್ಲಿ ನಾಯಿಕಚ್ಚಿ ಉಂಟಾಗುವ ರೇಬಿಸ್ ರೋಗಕ್ಕೆ ಅಗತ್ಯವಿರುವ ಔಷಧಿ ದೊರಕುವ ಸಾಧ್ಯತೆಯೇನೂ ಸುಧಾರಿಸಲಿಲ್ಲ.

ಭಾರತದಲ್ಲಿ ಪ್ರತಿವರ್ಷ ಸುಮಾರು ಹದಿನೇಳು (17) ಲಕ್ಷ ಜನರಿಗೆ ನಾಯಿಗಳು ಕಚ್ಚುತ್ತಿವೆ. ಅವುಗಳಲ್ಲಿ ಸುಮಾರು 20,000 ಜನರು ಮರಣವನ್ನಪ್ಪುತ್ತಾರೆ. ಈ ಮರಣಗಳನ್ನು ತಪ್ಪಿಸಬಹುದಾಗಿದೆ. ಇತ್ತೀಚಿಗೆ ಬಂದ ಹೊಸ ಲಸಿಕೆ ಪರಿಣಾಮಕಾರಿಯಾಗಿದೆ. ಆದರೆ ದುಬಾರಿಯಾಗಿದೆ. ಆ ಔಷಧಿಯ ಹೊಸ ಬಳಕೆಯಿಂದ (ಚರ್ಮದ ಪದರಿನಲ್ಲಿ ಕೊಡುವ ಚುಚ್ಚುಮದ್ದು) ಚಿಕಿತ್ಸೆಯ ವೆಚ್ಚ ಕಡಿಮೆಯಾಗಲಿದೆ. ಆದರೆ ಆ ವಿಧಾನವನ್ನು ಉಪಯೋಗಿಸಲಾಗುತ್ತಿಲ್ಲ ವೆಂಬುದು ವಿಷಾದಕರವಾಗಿದೆ.

ರೋಗದ ಕಾರಣ:

ಮಾನವನಿಗೆ ಉಂಟಾಗುವ ರೇಬಿಸ್ ರೋಗಕ್ಕೆ ವೈರಸ್ ಕಾರಣ. ಭಾರತದಲ್ಲಿ ಉಂಟಾಗುವ ರೇಬಿಸ್ ರೋಗಕ್ಕೆ ನಾಯಿ ಹಾಗೂ ಬೆಕ್ಕುಗಳೇ (ಶೇ.98) ಮುಖ್ಯ ಕಾರಣ. ರೇಬಿಸ್ ವೈರಾಣು ಹೊತ್ತ ಪ್ರಾಣಿಯ ಜೊಲ್ಲು ಹಾಗೂ ಮೂತ್ರದಿಂದ ರೇಬಿಸ್ ಹರಡುತ್ತದೆ. ಪ್ರಾಣಿ ಕಚ್ಚಿದಾಗ ವೈರಸ್ ಚರ್ಮದಲ್ಲಿ ವೃದ್ಧಿಹೊಂದಿ (ವೈರಸ್ ಸಂಖ್ಯೆ ಹೆಚ್ಚಾಗಿ) ನರಗಳ ಮೂಲಕ, ಮಿದುಳನ್ನು ತಲುಪಿ, ರೇಬಿಸ್ ರೋಗ ಉಂಟಾಗುತ್ತದೆ. ಈ ವೈರಾಣುಗಳು ರಕ್ತದಲ್ಲಿ ವೃದ್ಧಿಯಾಗುವುದಿಲ್ಲವೆಂಬುದನ್ನು ಗಮನಿಸಬೇಕು.

ಪ್ರಾಣಿ ಕಚ್ಚಿದಾಗ ಗಾಯದ ಮೇಲೆ ನೆಕ್ಕಿದಾಗ ಅಥವಾ ರೋಗಗ್ರಸ್ಥ ಹಸುವಿನ ಹಾಲು ಕುಡಿದಾಗ ರೇಬಿಸ್ ಕಾಯಿಲೆಯಾಗುತ್ತದೆ.

ಚಿಕಿತ್ಸೆ ಏನು?

ಗಾಯವನ್ನು ಸ್ವಚ್ಛವಾಗಿ ತೊಳೆಯಬೇಕು. ಕೊಳಾಯಿ ನೀರಿನ ಕೆಳಗೆ ಅರ್ಧಗಂಟೆ, ನಾಯಿ ಕಚ್ಚಿದ ಭಾಗವನ್ನು ಹಿಡಿಯಬೇಕು. ಆಗ ನೀರಿನ ರಭಸಕ್ಕೆ ವೈರಾಣುಗಳು ಹೊರಹಾಕಲ್ಪಡುತ್ತವೆ. ಗಾಯ ತೊಳೆಯಲು ಸೋಪು ಉಪಯೋಗಿಸಬಹುದು. ಗಾಯಕ್ಕೆ ಡೆಟಾಲ್, ರಮ್ ಅಥವಾ ವಿಸ್ಕಿ ಹಚ್ಚಬಹುದು. ಇದರಿಂದ ವೈರಾಣುಗಳು ಕೂಡಲೇ ಸಾಯುತ್ತವೆ.

ಗಾಯಕ್ಕೆ ಬ್ಯಾಂಡೇಜ್ ಮಾಡಬಾರದು/ ಹೊಲಿಗೆ ಹಾಕಬಾರದು. ಅರಿಶಿಣ ಪುಡಿ, ಮೆಣಸಿನ ಪುಡಿ ಮುಂತಾದವುಗಳನ್ನು ಹಾಕಬಾರದು. ರೋಗಿ ಯಾವುದೇ ಆಯಾಸದಾಯಕ ಕೆಲಸ ಮಾಡಬಾರದು. ಸರಾಯಿ ಸೇವಿಸಬಾರದು.

ನೋವು ನಿವಾರಕ/ ಆಂಟಿಬಯಾಟಿಕ್/ ಟಿಟೆನಸ್ ಇಂಜೆಷನ್ ತೆಗೆದುಕೊಳ್ಳಬೇಕು.

ರೋಗಿಗೆ ಕಾಯಿಲೆ ಇದ್ದಲ್ಲಿ ಅವರು ಉಪಯೋಗಿಸುವ ಸಕ್ಕರೆ ಕಾಯಿಲೆ ಹಾಗೂ ರಕ್ತದೇರೊತ್ತಡದ ಚಿಕಿತ್ಸೆಗಳನ್ನು ಮುಂದುವರೆಸಬೇಕು. ಈ ವೈರಾಣು ಮಿದುಳಿಗೆ ತಲುಪಲು ಎರಡು ವಾರ ಬೇಕಾಗುತ್ತದೆ. ಆದ್ದರಿಂದ ಪ್ರಾಣಿ ಕಚ್ಚಿದ ಕೂಡಲೇ ಎ.ಆರ್.ವಿ. (ಆಂಟಿ ರೇಬಿಸ್ ವ್ಯಾಕ್ಸಿನ್) ಚುಚ್ಚುಮದ್ದುಗಳನ್ನು ಹಾಕಿಸಿಕೊಳ್ಳಬೇಕು.

ಎ.ಆರ್.ವಿ ಇಂಜೆಕ್ಷನ್ ದೇಹದಲ್ಲಿ ಆಂಟಿ ಬಾಡಿ ತಯಾರಿಸಲು ಸಹಾಯಮಾಡುತ್ತದೆ. ಈ ಆಂಟಿ ಬಾಡಿಸ್, ವೈರಾಣುಗಳನ್ನು ನಿಷ್ಕ್ರಿಯ ಮಾಡಿ ಕೊಂದುಹಾಕುತ್ತದೆ. ಎ.ಆರ್.ವಿ. ಹಾಕಿಸಲು ತಡವಾದರೆ ಇಮ್ಯುನೋಗ್ಲೋಬಿನ್ (ಆಂಟಿ ಬಾಡಿ-ಚುಚ್ಚುಮದ್ದು ರೂಪದಲ್ಲಿ) ಹಾಕಿಸಬೇಕಾಗುತ್ತದೆ. ದೇಹದಲ್ಲಿ ತಯಾರಾಗುವ ಆಂಟಿ ಬಾಡಿ ತರಹವೇ ಈ ಇಮ್ಯೂನೋಗ್ಲೋಬಿನ್ ವೈರಸ್‌ಗಳನ್ನು ಕೊಂದುಹಾಕುತ್ತವೆ. ಏ.ಆರ್.ವಿ ಗಿಂತ ಇಮ್ಯುನೋಗ್ಲೋಬಿನ್ ದುಬಾರಿ, ಆದ್ದರಿಂದ ಪ್ರಾಣಿ ಕಚ್ಚಿದ ಕೂಡಲೇ ಏ.ಆರ್.ವಿ ಹಾಕಿಸುವುದು ಒಳ್ಳೆಯದು.

ಚುಚ್ಚುಮದ್ದು - ಹೊಕ್ಕಳಸುತ್ತ



2005 ರ ವರೆಗೆ ನಾಯಿ ಕಚ್ಚಿದವರಿಗೆ ಹೊಟ್ಟೆಯಲ್ಲಿ 10-14 ಚುಚ್ಚುಮದ್ದುಗಳನ್ನು ಕೊಡಲಾಗುತ್ತಿತ್ತು. ಈ ಕಾರಣದಿಂದ ಕೆಲವರು ನಾಯಿಯ ಬಗ್ಗೆ ಜಾಗರೂಕರಾಗಿರುತ್ತಿದ್ದರು.

ಹೊಟ್ಟೆಯಲ್ಲಿ ಇಂಜೆಕ್ಷನ್ ಕೊಡುವುದೆಂದರೆ ಹೊಟ್ಟೆಯ ಚರ್ಮದ ಪದರಿನಲ್ಲಿ. ಅಲ್ಲಿ ಕೊಬ್ಬು ಜಾಸ್ತಿ ಇರುವುದರಿಂದ 5 ಮಿ.ಲೀ. ನಷ್ಟು ಔಷಧಿಯನ್ನು ಸೇರಿಸಿದರೂ ಅಷ್ಟೇನೂ ನೋವಾಗುವುದಿಲ್ಲ. ಇತರೆ ಭಾಗದ ಚರ್ಮದಲ್ಲಿ ಇಷ್ಟು ಪ್ರಮಾಣದ ಔಷಧಿ ಸೇರಿಸಲು ಸಾಧ್ಯವಿಲ್ಲ.

ಹೊಟ್ಟೆಯ ಚರ್ಮದಲ್ಲಿ ಕೊಡುವ ಚುಚ್ಚುಮದ್ದು ಭಾರತದಲ್ಲಿ ಎಲ್ಲ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಕೊಡಲಾಗುತ್ತಿತ್ತು.

ಈ ಲಸಿಕೆ ಅಪಾಯಕರವೆಂದು ಕಂಡುಬಂದಿತ್ತು. ಈ ಲಸಿಕೆ ತಯಾರಿಸಲು ರೇಬಿಸ್ ವೈರಾಣುಗಳನ್ನು ಮೇಕೆಯ ಮೆದುಳಿನಲ್ಲಿ ಬೆಳೆಸಲಾಗುತ್ತಿತ್ತು. ನಂತರ ವೈರಸ್ ಹೊತ್ತ ಮಿದುಳನ್ನು ರಸಾಯನಿಕ ವಸ್ತುವಿನಲ್ಲಿ ತೊಳೆದಾಗ, ಆ ವೈರಸ್‌ಗಳು ಸತ್ತುಹೋಗುತ್ತಿದ್ದವು. ಆ ವೈರಸ್‌ಗಳನ್ನು ಚುಚ್ಚುಮದ್ದು ರೂಪದಲ್ಲಿ ಮಾನವನಿಗೆ ಕೊಟ್ಟಾಗ, ಮಾನವನಿಗೆ ರೇಬಿಸ್ ರೋಗ ತಡೆಗಟ್ಟಲು ಸಾಧ್ಯವಾಗುತ್ತದೆ. ಆದರೆ ವೈರಸ್‌ನೊಂದಿಗೆ ಮೇಕೆಯ ಮೆದುಳಿನ ಪ್ರೋಟಿನ್‌ಗಳು ಮನುಷ್ಯನ ದೇಹ ಸೇರಿ, ಅಲರ್ಜಿ ಉಂಟು ಮಾಡಿ ಅಪಾಯವಾಗುತ್ತಿತ್ತು. ಇದರಿಂದಾಗಿ ವ್ಯಕ್ತಿಗೆ ಮಿದುಳಿನ ರೋಗ ಕಂಡುಬರುತ್ತದೆ. 5000 ಜನರಿಗೆ ಈ ಲಸಿಕೆ ಕೊಟ್ಟಾಗ ಒಬ್ಬರಿಗೆ ಈ ಅಲರ್ಜಿ ರೋಗವಾಗುತ್ತಿತ್ತು. ಭಾರತದಲ್ಲಿ 3 ದಶಲಕ್ಷ ಜನರಿಗೆ ಈ ಲಸಿಕೆ ಕೊಡುತ್ತಿದ್ದುದರಿಂದ ಸುಮಾರು 600 ಜನರಿಗೆ ಈ ಮಿದುಳಿನ ರೋಗ ಕಂಡುಬರುತ್ತದೆ. ಆದ್ದರಿಂದ ಈಗಿನ ದಿನಗಳಲ್ಲಿ ಈ ಲಸಿಕೆ ಉಪಯೋಗವನ್ನು (2005) ನಿಲ್ಲಿಸಲಾಗಿದೆ.

ಭ್ರೂಣದಲ್ಲಿ ವೈರಸ್ ಬೆಳೆಸುವುದು

ಲಸಿಕೆ ತಯಾರಿಸಲು ಭ್ರೂಣದ ಜೀವಕೋಶಗಳಲ್ಲಿ ಈ ವೈರಸ್‌ಗಳನ್ನು ವೃದ್ಧಿಗೊಳಿಸುವ ತಂತ್ರಜ್ಞಾನ ಉಪಯೋಗಿಸ ಲಾಗುತ್ತಿದೆ. ಈ ಹೊಸ ವಿಧಾನದಿಂದ ತಯಾರಿಸಿದ ಲಸಿಕೆ ಸುರಕ್ಷಿತವಾಗಿದೆ. ಭಾರತದಲ್ಲಿ ಖಾಸಗೀ ವೈದ್ಯರು ಈ ಹೊಸ ಲಸಿಕೆಯನ್ನು ಒಂದು ದಶಕದಿಂದ ಉಪಯೋಗಿಸುತ್ತಾ ಬಂದಿದ್ದಾರೆ. ಈ ಲಸಿಕೆಯ ಬಳಕೆ ಆಕಸ್ಮಿಕವೇನಲ್ಲ. ಅಪಾಯಕಾರಿ ಲಸಿಕೆಯ ವಿರುದ್ಧ ಕೆಲವರು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಜಾರಿಗೊಳಿಸಿದ್ದರಿಂದ ಸರಕಾರ ಆ ಲಸಿಕೆಯ ಬಳಕೆಯನ್ನು ನಿಲ್ಲಿಸಿದೆ. ಹಳೆಯ ಲಸಿಕೆಗೆ (4 ಚುಚ್ಚುಮದ್ದಿಗೆ) 225 ರೂ. ಆದರೆ ಹೊಸ ಲಸಿಕೆಗೆ 1500 ರೂ. ಆದ್ದರಿಂದ ಈ ಲಸಿಕೆ ಹಾಕಿಸುವುದು ಎಲ್ಲರಿಗೂ ಸಾಧ್ಯವಾಗಲಿಲ್ಲ. ಈ ಲಸಿಕೆ ದುಬಾರಿಯಾಗಿದ್ದರಿಂದ ಸರಕಾರೀ ಆಸ್ಪತ್ರೆಗಳಲ್ಲಿಯೂ ದೊರಕುತ್ತಿರಲಿಲ್ಲ. ಆದರೆ ನಂತರದ ದಿನಗಳಲ್ಲಿ ಈ ಲಸಿಕೆ ಬಡತನದ ರೇಖೆಯ ಕೆಳಗಿರುವವರಿಗೆ ಮಾತ್ರ ಉಚಿತವಾಗಿ ಸರಕಾರಿ ಆಸ್ಪತ್ರೆಗಳಲ್ಲಿ ದೊರಕುತ್ತಿದೆ. ಬಡತನ ರೇಖೆ ಕೆಳಗಿದ್ದು ದಾಖಲೆ ಪಡೆದಿರುವವರ ಸಂಖ್ಯೆ ಕಡಿಮೆಯಾದ್ದರಿಂದ ಈ ಲಸಿಕೆಯಿಂದ ಬಹಳಷ್ಟು ಜನ ವಂಚಿತರಾದರು.

ಹೊಸ ಲಸಿಕೆ ಹಳೆ ಲಸಿಕೆಗಿಂತ 6 ಪಟ್ಟು ದುಬಾರಿ- ಆದರೆ ಭಾರತದಲ್ಲಿ ರೇಬಿಸ್ ಕಾಯಿಲೆ ಹೆಚ್ಚಾಗಿ ಕಂಡುಬರುವುದರಿಂದ ಹಾಗೂ ಸಾವು ಖಚಿತವಾದ್ದರಿಂದ ಸರಕಾರ ಈ ಲಸಿಕೆಯನ್ನು ಸಾರ್ವಜನಿಕ ಕ್ಷೇತ್ರದ ಔಷಧಿ ಕಂಪನಿಗಳಲ್ಲಿ ತಯಾರಿಸುವ ಪ್ರಯತ್ನ ಮಾಡಬೇಕಿತ್ತು ಹಾಗೂ ಖಾಸಗೀ ಕಂಪನಿಗಳಿಗೆ ಅದರ ಬೆಲೆ ಕಡಿಮೆ ಮಾಡಲು ಕೇಳಿಕೊಳ್ಳಬೇಕಿತ್ತು. ಆದರೆ ಅದಾವುದೂ ಮಾಡದೇ ಕೆಲವರಿಗೆ ಮಾತ್ರ ಉಚಿತವಾಗಿ ದೊರಕುವಂತೆ ಮಾಡಿದೆ.

ಬೇಡವಾದ ಹೊಸ ವಿಧಾನ :

ಸರಕಾರಕ್ಕೆ ಈ ಲಸಿಕೆಗೆ ಆರು ಪಟ್ಟು ಹೆಚ್ಚು ಖರ್ಚು ಮಾಡುವುದು ಕಷ್ಟವಾಗಬಹುದು. ಆದರೆ ಅದರ ಬದಲು ಬೇರೆ ಪರಿಣಾಮಕಾರಿ ವಿಧಾನವಿದೆಯಲ್ಲ. ಅದನ್ಯಾಕೆ ಬಳಸಬಾರದು. ಹೊಸ ಲಸಿಕೆಯನ್ನು ಸ್ನಾಯುಗಳಲ್ಲಿ ಕೊಡುವ ಬದಲು, ಚರ್ಮದಲ್ಲಿ ಕೊಟ್ಟು ರೋಗ ಬರದಂತೆ ತಡೆಯಬಹುದು ಎಂದು ಅಧ್ಯಯನಗಳು ಹೇಳುತ್ತವೆ. ಈ ವಿಧಾನದಿಂದ ಆರನೇ ಒಂದು ಭಾಗದಷ್ಟು ಮಾತ್ರ ಲಸಿಕೆ ಖರ್ಚಾಗುತ್ತಿದೆ. ಹಾಗೂ ಅಷ್ಟೇ ಪರಿಣಾಮಕಾರಿಯಾಗಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಎಲ್ಲ ದೇಶಗಳಿಗೆ 1992 ರಿಂದಲೇ ಈ ವಿಧಾನವನ್ನು ಉಪಯೋಗಿಸಲು ಪ್ರೋತ್ಸಾಹಿಸುತ್ತಿದೆ.

ವಿಧಾನ : 1 ಮಿಲಿ ಮೀಟರ್‌ನಷ್ಟು ಲಸಿಕೆಯನ್ನು ಒಂದೇ ವೇಳೆಗೆ ಎರಡು ಸ್ಥಳಗಳಲ್ಲಿ ಚರ್ಮದೊಳಗೆ ದಿನ 1,3,7, 28,90 ರಂದು ಕೊಡಲಾಗುವುದು. ಈ ವಿಧಾನವನ್ನು ಭಾರತೀಯ ಮೆಡಿಕಲ್ ಕಾಲೇಜುಗಳಲ್ಲಿ ಹೇಳಿ ಕೊಡಲಾಗುತ್ತಿದೆ.

ಆದರೂ ಈ ವಿಧಾನ ಬಳಕೆಯಲ್ಲಿಲ್ಲ

ಅನೇಕ ದೇಶಗಳಲ್ಲಿ ಈ ಲಸಿಕೆ ರಬಿಪೂರ್ (ಅವೆಂಟಿಸ್) ಹಾಗೂ ವಿರೋರ್‍ಯಾಬ್ (ಚಿರಾನ್) ಹೆಸರಿನಲ್ಲಿ ಲಭ್ಯವಿದೆ. ಈ ಔಷಧಿ ತಯಾರಿಸುವ ಕಂಪನಿಗಳು ಈ ಔಷಧಿಯನ್ನು ಸ್ನಾಯುಗಳಲ್ಲಿ ಹಾಗೂ ಚರ್ಮದಲ್ಲಿ ಕೊಡಲು ಸರಕಾರದಲ್ಲಿ ನೋಂದಣಿ ಮಾಡಿಕೊಂಡಿವೆ. ಆದರೆ ಭಾರತದಲ್ಲಿ ಇವೇ ಕಂಪನಿಗಳು ಕೇವಲ ಸ್ನಾಯುಗಳಲ್ಲಿ ಕೊಡಲು ನೊಂದಣಿ ಮಾಡಿಕೊಂಡಿವೆ. ವೈದ್ಯರೂ ಈ ಔಷಧಿಯನ್ನು ಕೇವಲ ಸ್ನಾಯುಗಳಲ್ಲಿ ಕೊಡಲು ಮುಂದಾಗಿದ್ದಾರೆ ಹಾಗೂ ಚರ್ಮದಲ್ಲಿ ಕೊಡುವ ಲಸಿಕೆಯ ವಿಧಾನ ಜಾರಿಯಲ್ಲಿಲ್ಲ. ಭಾರತದಲ್ಲಿ ಈ ಹೊಸ ಲಸಿಕೆಯನ್ನು ಆನಂದ ಡೆವೆಲಪ್‌ಮೆಂಟ್ ಡೈರಿ ಬೋರ್ಡ್ ಸಂಸ್ಥೆ ತಯಾರಿಸುತ್ತಿದೆ. ಆದರೆ ಈ ಹೊಸ ವಿಧಾನದ ಬಗ್ಗೆ ಸುಮ್ಮನಿದೆ.

ಔಷಧಿ ನಿಯಂತ್ರಣ ಅಧಿಕಾರಿಗಳು ಜನಾರೋಗ್ಯದ ದೃಷ್ಟಿಯಿಂದ ಈ ಕಂಪನಿಗಳಿಗೆ ತಾವು ತಯಾರಿಸಿದ ಲಸಿಕೆಯನ್ನು ಚರ್ಮದಲ್ಲಿ ಕೊಡುವ ವಿಧಾನಕ್ಕೆ ನೊಂದಣಿ ಮಾಡಿಕೊಳ್ಳಲು ಯಾವ ಮನವಿಯನ್ನೂ ಮಾಡಿಲ್ಲ. ಸರಕಾರ ಈ ಲಸಿಕೆಯನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಕೊಂಡುಕೊಳ್ಳುವುದರಿಂದ, ಈ ಕ್ರಮ ಅಗತ್ಯ. ಆದರೆ ಸುಮ್ಮನಿದೆ. ಆದರೆ 2005 ರಲ್ಲಿ ಜನಸ್ವಾಸ್ಥ್ಯ ಅಭಿಯಾನ್, ಜನಾರೋಗ್ಯ ಸಂಸ್ಥೆ ಕೇಂದ್ರ ಆರೋಗ್ಯ ಮಂತ್ರಿಗಳಿಗೆ ಹಾಗೂ ಔಷಧಿ ನಿಯಂತ್ರಣ ಅಧಿಕಾರಿಗಳಿಗೆ ಪತ್ರ ಬರೆದು ಚರ್ಮದಲ್ಲಿ ಕೊಡುವ ಲಸಿಕೆ ಬಗ್ಗೆ ಮನವಿ ಮಾಡಿಕೊಂಡಿವೆ. ಅದೇ ವೇಳೆ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಒಂದು ದೂರು ಕೊಟ್ಟಿದೆ. ಆಗ ಔಷಧಿ ನಿಯಂತ್ರಣ ಒತ್ತಡಕ್ಕೆ ಮಣಿದು, ಔಷಧಿ ಕಂಪನಿಗಳಿಗೆ ಲಸಿಕೆಯ ಚರ್ಮದಲ್ಲಿ ಕೊಡುವ ಉಪಯೋಗಕ್ಕೆ ಒತ್ತಡ ತಂದಿವೆ. ಈ ಒತ್ತಡದಿಂದ ಇತ್ತೀಚಿಗೆ ಅಂದರೆ 2 ವರ್ಷದ ನಂತರ ಬದಲಾವಣೆ ಬಂದಿದೆ.

ಜನಾರೋಗ್ಯದ ವಿಷಯದಲ್ಲಿ ವೈಜ್ಞಾನಿಕ ವಿಷಯಗಳನ್ನು ಮುಚ್ಚಿಟ್ಟು, ಕೇವಲ ಲಾಭದ ದೃಷ್ಟಿಯಿಂದ ಮುಂದುವರೆಯುತ್ತಾ ಈ ಔಷದ ಕಂಪನಿಗಳು ಜನವಿರೋಧಿ ಯಾಗಿವೆ. ಸರಕಾರವೂ ಈ ಕಂಪನಿಗಳಿಗೆ ಸಹಾಯ ಮಾಡುತ್ತಾ ಜನಪರ ನೀತಿಯನ್ನು ಮರೆತಿವೆ. ಇಂತಹ ಹಲವಾರು ವಿಷಯಗಳಲ್ಲಿ ಸರಕಾರಗಳು ಜನವಿರೋಧಿಯಾಗಿವೆ. ಜನಾರೋಗ್ಯದ ವಿಷಯಗಳಲ್ಲಿ ಸರಕಾರವನ್ನು ಜನ ಎಚ್ಚರಿಸುವುದು ಲೇಸು.

ಕೊನೆ ಮಾತು:

ಹಸುವಿನ ಹಾಲಿನ ಮೂಲಕ ಹರಡಬಹುದಾದ ರೇಬಿಸ್ ಕಾಯಿಲೆಯನ್ನು ತಡೆಯುವ ಪರಿಹಾರ ಮಾರ್ಗ ಎಂದರೆ 'ಪಾಶ್ಚರೈಸ್ಡ್ ಹಾಲು' (ಪಾಶ್ಚೀಕೃತ) ಅಂದರೆ ಡೇರಿ ಹಾಲನ್ನು ಬಳಸುವುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ದಿನದಿನವೂ ಪ್ರಸ್ತುತವಾಗುವ ಭಗತ್‌ಸಿಂಗ್‌ರ ಚಿಂತನೆ

ವಿಜಯಕುಮಾರ್ ದೊಡ್ಮನಿ

ಈ ಹೆಸರು ಎತ್ತಿದಾಕ್ಷಣ ಮೈ ಮನ ರೋಮಾಂಚನಗೊಳ್ಳುತ್ತದೆ! ಸ್ವಾತಂತ್ರ್ಯಕ್ಕಾಗಿ ನಗುನಗುತ್ತಾ ನೇಣುಗಂಬ ಏರಿದ ವೀರನ ಇತಿಹಾಸ ಹೇಳುತ್ತಿದ್ದಂತೆ ವಿದ್ಯುತ್ ಸಂಚಾರದ ಅನುಭವವಾಗುತ್ತದೆ. ಆ ಹೆಸರು ಅನ್ಯಾಯ ಅಸಮಾನತೆ, ದಬ್ಬಾಳಿಕೆ, ದಾರಿದ್ರ್ಯದ ವಿರುದ್ಧ ಸಿಡಿದೆಳಿಸುವ ಶಕ್ತಿಯಾಗಿದೆ. ಮನುಷ್ಯರಿಂದ ಮನುಷ್ಯರ ಮೇಲಾಗುವ ಶೋಷಣೆಯ ವಿರುದ್ದ ಧ್ವನಿಯಾಗಿ, ನಿಲ್ಲುತ್ತದೆ. ಆ ಹೆಸರೇ ದೇಶಕ್ಕಾಗಿ 23ನೇ ವಯಸ್ಸಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನೇಣುಗಂಬ ಏರಿದ ಹುತಾತ್ಮ ಭಗತ್‌ಸಿಂಗ್. ಇಂದಿಗೂ ಭಗತ್‌ಸಿಂಗ್ ಅವರು ಪ್ರತಿಪಾದಿಸಿದ ವಿಚಾರಧಾರೆ, ಅದಕ್ಕಾಗಿ ಅವರು ನಡೆಸಿದ ಕೆಚ್ಚೆದೆಯ ಹೋರಾಟ, ಜನತೆಯ ವಿಮೋಚನೆಗಾಗಿ ಅವರು ಹೊಂದಿದ್ದ ಸ್ಪಷ್ಟ ವೈಜ್ಞಾನಿಕ ಸೈದ್ಧಾಂತಿಕ ನೆಲೆಗಟ್ಟಿನಿಂದ ಇತರರಿಗಿಂತ ಭಿನ್ನವಾಗಿ ಕಾಣುತ್ತಾರೆ, ಪ್ರಸ್ತುತರಾಗುತ್ತಾರೆ.


1907 ಸೆಪ್ಟೆಂಬರ್ 27 ರಂದು ಈಗಿನ ಪಾಕಿಸ್ತಾನಕ್ಕೆ ಸೇರುವ ಪಂಜಾಬ್ ರಾಜ್ಯದ ಬಂದಾ ಎಂಬ ಗ್ರಾಮದಲ್ಲಿ ರೈತ ಹಿನ್ನೆಲೆಯುಳ್ಳ ಸ್ವಾತಂತ್ರ್ಯ ಹೋರಾಟದ ಕುಟುಂಬವಾದ ಕಿಶನ್ ಸಿಂಗ್‌ರ ಎರಡನೇಯ ಪುತ್ರನೇ ನಮ್ಮ ವೀರ ಭಗತ್‌ಸಿಂಗ್. ಕುಟುಂಬದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ 1929ರಲ್ಲಿ ಜರುಗಿದ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಬಾಲಕ ಭಗತ್‌ಸಿಂಗ್ ಮೇಲೆ ಪರಿಣಾಮ ಬೀರುತ್ತದೆ. ಮುಂದೆ ಭಗತ್‌ಸಿಂಗ್ ನಡೆದ ದಾರಿ, ಗುರಿ ಇಂದಿಗೂ ಸ್ವಾತಂತ್ರ್ಯ ಸಿಕ್ಕು 62 ವರ್ಷವಾದರೂ ಅಗತ್ಯವಾಗಿದೆ ಪ್ರಸ್ತುತವಾಗಿದೆ.



ಪ್ರಸಕ್ತ ಸನ್ನಿವೇಶ:

ಜಾಗತೀಕವಾಗಿ ಹಿಂದೆ ಹೇಗೆ ವಸಾಹತುಶಾಹಿಯಾಗಿ ಬ್ರಿಟನ್ ಜಗತ್ತನ್ನು ಆಕ್ರಮಿಸಿತೋ ಅದೇ ರೀತಿಯಲ್ಲಿ ಇಂದು ಅಮೆರಿಕನ್ ಸಾಮ್ರಾಜ್ಯಶಾಹಿ ಶಕ್ತಿಯು ಜಗತ್ತಿನ ಮೇಲೆ ತನ್ನ ಕರಿನೆರಳು ಚಾಚಿದೆ. ತನ್ನ ಯಜಮಾನಿಕೆಗಾಗಿ, ಜಾಗತಿಕ ಸಂಪತ್ತಿನ ಲೂಟಿಗಾಗಿ ಯುದ್ಧ ಸಾರುವಿಕೆ, ತಂತ್ರ ಕುತಂತ್ರಗಳನ್ನು ಬಳಸಿ ಸುಲಿಗೆ ನಡೆಸುತ್ತಿದೆ. ಇನ್ನೊಂದೆಡೆ ಜಾಗತೀಕವಾಗಿ 600 ಕೋಟಿಗಿಂತ ಅಧಿಕವಾಗಿರುವ ಜನಸಂಖ್ಯೆಯಲ್ಲಿ ಜಾಗತಿಕ ಸಂಪತ್ತು ಮಾತ್ರ ಕೇವಲ 11,125 ಶ್ರೀಮಂತರ ಕೈಯಲ್ಲಿ ಸಿಕ್ಕು ಕೋಟ್ಯಾಂತರ ಜನರನ್ನು ಶೋಷಿಸಲಾಗುತ್ತಿದೆ. ಈ ಜಾಗತಿಕ ಶ್ರೀಮಂತರ ಆದಾಯವೇ ಆಫ್ರಿಕಾ ಖಂಡದ 40 ದೇಶಗಳು ಅಥವಾ ಏಷ್ಯಾಖಂಡದ 20 ದೇಶಗಳ ಒಟ್ಟು ರಾಷ್ಟ್ರೀಯ ಉತ್ಪಾದನೆಗೆ (ಜಿಡಿಪಿ) ಸಮವಾಗಿದೆ. ಭಾರತದಲ್ಲಿ ಕೂಡ 110 ಕೋಟಿ ಜನಸಂಖ್ಯೆಯಲ್ಲಿ ಇಡೀ ದೇಶದ ಸಂಪತ್ತು ಕೇವಲ 53 ಕುಟುಂಬದ ಕೈಯಲ್ಲಿ ಕೇಂದ್ರಿತವಾಗಿದೆ. ಭಾರತೀಯ ಶ್ರೀಮಂತರ ಆದಾಯವೇ ಆಫ್ರಿಕಾ ಖಂಡದ 20 ದೇಶಗಳ ಒಟ್ಟು ವರಮಾನಕ್ಕೆ ಸಮವಾಗಿದೆ. ಮತ್ತೊಂದೆಡೆಗೆ ಈ ದೇಶದ ಅರ್ಜುನ್ ಸೇನ್ ಗುಪ್ತಾ ವರದಿಕಂಡು ಕೊಂಡಂತೆ ಶೇ.78 ಜನ 20 ರೂ.ದುಡಿಮೆಯಲ್ಲಿ ಜೀವನ ಸಾಗಿಸುತ್ತಿರುವಾಗಲೇ 45 ಕೋಟಿ ಜನ ರಾತ್ರಿ ಊಟಕ್ಕಾಗಿ ಪರದಾಡಬೇಕಿದೆ. ಅಂದೇ ಭಗತ್‌ಸಿಂಗ್ ನ್ಯಾಯಾಲಯದ ಮುಂದೆ ವಾದವನ್ನು ಮಂಡಿಸುತ್ತಾ 'ದುಡಿಮೆಗಾರರು ಸಮಾಜದ ಅತ್ಯಂತ ಅವಶ್ಯಕ ಅಂಗವಾಗಿದ್ದರೂ ಶೋಷಕರಿಂದ ವಂಚಿಸಲ್ಪಡುತ್ತಿದ್ದಾರೆ. ಅವರ ದುಡಿಮೆ ಫಲ ಅವರಿಗೆ ದಕ್ಕುತ್ತಿಲ್ಲ. ಅಲ್ಪಸಂಖ್ಯಾತರ ಹಕ್ಕು ಕಿತ್ತುಕೊಳ್ಳಲಾಗುತ್ತಿದೆ. ಎಲ್ಲರಿಗೂ ಬೇಕಾದ ಧಾನ್ಯ ಬೆಳೆಯುವ ರೈತ ತನ್ನ ಕುಟುಂಬದೊಂದಿಗೆ ಹಸಿವಿನಿಂದ ನರಳುತ್ತಿದ್ದಾನೆ. ಇಡೀ ಮಾರುಕಟ್ಟೆಗೆ ಬಟ್ಟೆ ನೇಯುವ ನೇಯ್ಗೆಗಾರ ತನ್ನ ಮತ್ತು ತನ್ನ ಮಕ್ಕಳ ಶರೀರವನ್ನು ಮುಚ್ಚಲು ಬೇಕಾದ ಕನಿಷ್ಟ ಬಟ್ಟೆಯನ್ನು ಪಡೆಯುತ್ತಿಲ್ಲ. ಮನೆ ಕಟ್ಟುವವರು, ಕಮ್ಮಾರರು, ಬಡಿಗರು ಭವ್ಯವಾದ ಸೌಧವನ್ನೇ ನಿರ್ಮಿಸಿದರೂ ಕೊಳಚೆ ಪ್ರದೇಶಗಳಲ್ಲಿ ಜಾತಿ ಭ್ರಷ್ಟರಾಗಿ ಉಳಿದಿದ್ದಾರೆ. ಆದರೆ ಸಮಾಜದ ಪರತಂತ್ರ ಜೀವಿಗಳಾದ ಬಂಡವಾಳಿಗರು ಮತ್ತು ಶೋಷಕರು ಮನಸೋ ಇಚ್ಛೆಯಂತೆ ಮಿಲಿಯನ್ ಗಟ್ಟಲೆ ಹಣವನ್ನು ಚೆಲ್ಲಬಲ್ಲರು. ಈ ಭಯಂಕರ ಸಮಸ್ಯೆಗಳು ಬಲಾತ್ಕಾರವಾಗಿ ಸೆಳೆಯಲ್ಪಟ್ಟಿರುವ ಅವಕಾಶಗಳ ಅಸಮಾನತೆಯೂ ಅವ್ಯವಸ್ಥೆಗೆ ಹಾದಿ ಮಾಡಿ ಕೊಟ್ಟೇ ತೀರುತ್ತದೆ' ಎಂಬ ಅವರ ಮಾತು ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ. ಬಂಡವಾಳಿಗರು ಮೋಜಿನಲ್ಲಿ ತೇಲುತ್ತಿದ್ದರೆ ಜಾಗತೀಕರಣದ ಕೂಪದಿಂದ ಈ ದೇಶಕ್ಕೆ ಅನ್ನ ನೀಡಬೇಕಾದ ಅನ್ನದಾತರು ಕಾರ್ಷಿಕ ಬಿಕ್ಕಟ್ಟಿನಿಂದ, ಆಳುವವರ ಶ್ರೀಮಂತ, ಕಂಪನಿಗಳ ಪರವಾದ ನೀತಿಯಿಂದ 2 ಲಕ್ಷಕ್ಕೂ ಅಧಿಕ ಜನ ಆತ್ಮಹತ್ಯೆಗೆ ಬಲಿಯಾಗಿ ಅರ್ಧತಾಸಿಗೊಬ್ಬರಂತೆ ನೇಣಿಗೆ ಕುಣಿಕೆಗೆ ತಲೆ ಒಡ್ಡುತ್ತಿದ್ದಾರೆ. ಆಂಧ್ರ, ಕರ್ನಾಟಕ ಸೇರಿದಂತೆ ಬಟ್ಟೆ ನೇಯುವ ನೇಕಾರರೂ ಆತ್ಮಹತ್ಯೆಗೆ ಗುರಿಯಾಗುತ್ತಾರೆ. ಕಾರ್ಮಿಕ ವರ್ಗ ಹಕ್ಕು ಕಸಿದುಕೊಳ್ಳುತ್ತಾ ಹೈಯರ್ ಫೈಯರ್ ನೀತಿಗೆ ಒಳಗಾಗಿ ದಿನ ತಳ್ಳುತ್ತಿದ್ದಾರೆ. ಭವ್ಯ ಮನೆ ಕಟ್ಟುವವರು ಬೆಂಗಳೂರು ಸೇರಿದಂತೆ ನಗರಗಳಲ್ಲಿ ಫುಟ್‌ಪಾತ್‌ಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿ ಪ್ರೇರಿತವಾದ ಜಾಗತೀಕರಣವು ಸೃಷ್ಟಿಸಿರುವ ಈ ಕಂದರದಿಂದ ಅಮೇರಿಕಾ ದೇಶದಲ್ಲಿಯೇ ವಿದ್ಯಾರ್ಥಿನಿ ಕನ್ಯತ್ವವನ್ನೆ ಹರಾಜಿಗೆ ಇಡುವಂತಾಗಿದೆ. ಇಂತಹ ಸಂದಿಗ್ಧ ಸ್ಥಿತಿಗೆ ಕಾರಣಗಳನ್ನು ಭಗತ್‌ಸಿಂಗ್ ಗುರುತಿಸಿರುವಂತೆ ಬಂಡವಾಳಶಾಹಿ ವ್ಯವಸ್ಥೆ ಈ ವ್ಯವಸ್ಥೆ ನಾಶದ ಕುರಿತು ಭಗತ್‌ಸಿಂಗ್ ಹೇಳಿದಂತೆ 'ಸಮಾಜದ ವ್ಯವಸ್ಥೆಯಲ್ಲಿ ಇಂದು ಕಂಡು ಬರುವ ಮೋಜು ಅಗ್ನಿಪರ್ವತದ ಅಂಚಿನಲ್ಲಿ ಇರುವ ಮೋಜೆಂಬುದು ಸ್ವಯಂ ಸಿದ್ದವಾದದು. ಈ ನಾಗರೀಕತೆಯ ಭವ್ಯ ಕಟ್ಟಡವನ್ನು ಸಕಾಲದಲ್ಲಿ ಉಳಿಸದಿದ್ದರೆ ಅದು ಕುಸಿದು ಭಗ್ನವಾಗುವುದು ಖಂಡಿತ. ಆದರಿಂದ ಆಮೂಲಾಗ್ರವಾದ ಸಮಾಜದ ಬದಲಾವಣೆ ಅಗತ್ಯ. ಆದ್ದರಿಂದ ನಮ್ಮ ಕರ್ತವ್ಯವೂ ಸಮಾಜವನ್ನು ಸಮಾಜವಾದಿ ಆಧಾರದಲ್ಲಿ ಪುನರ್‌ರಚಿಸುವುದಾಗಿದೆ. ಸಮಾಜವಾದವೇ ಪರಿಹಾರವಾಗಿದೆ.

ಸೆ. 27, ಭಗತ್‌ಸಿಂಗ್‌ರ ಜನ್ಮದಿನ ಎಂಬುದು ಅವರ ಕ್ರಾಂತಿಕಾರಿ ಬದುಕು, ಚಿಂತನೆಗಳನ್ನು ನೆನಪಿಸಿಕೊಳ್ಳಲು ಒಂದು ಸಂದರ್ಭವಷ್ಟೇ. ಅದು ಯಾಂತ್ರಿಕ ಅಲ್ಲ. ಭಗತ್‌ಸಿಂಗ್ ದಿನವೂ ನೆನಪಾಗಬೇಕಾದ ಸನ್ನಿವೇಶ ನಮ್ಮದು.



ಅದಕ್ಕಾಗಿ ಕ್ರಾಂತಿ ಜರುಗುವುದು ಅಗತ್ಯವೂ ಅನಿವಾರ್ಯವೂ ಆಗಿದೆ. ಭಗತ್‌ಸಿಂಗ್ ಮಾತಲ್ಲಿ ಕ್ರಾಂತಿ ಎಂದರೆ 'ರಕ್ತ ಗೆಂಪಿನ ಸಂಘರ್ಷವೇ ಆಗಿರಬೇಕೆಂಬ ನಿಯಮವೇನು ಇಲ್ಲ. ವೈಯಕ್ತಿಕ ಜಿದ್ದಿಗೂ ಇಲ್ಲಿ ಅವಕಾಶವಿಲ್ಲ. ಕ್ರಾಂತಿಯು ಬಾಂಬು, ಪಿಸ್ತೂಲಗಳ ಆರಾಧನೆಯೂ ಅಲ್ಲ. ನಮ್ಮ ದೃಷ್ಟಿಯಲ್ಲಿ 'ಕ್ರಾಂತಿ' ಎಂದರೆ ಸ್ಪಷ್ಟವಾಗಿ, ಅನ್ಯಾಯದ ಬುನಾದಿಯ ಮೇಲೆ ರಚಿತವಾದ ಇಂದಿನ ವ್ಯವಸ್ಥೆಯನ್ನು ಬದಲಾಯಿಸುವುದು ಎಂದರ್ಥ' ಎನ್ನುವ ಮೂಲಕ ಜನವಿಮೋಚನೆ ದಾರಿ ಸ್ಪಷ್ಟಪಡಿಸಿದ್ದಾರೆ.

ಆದರೆ ನಮ್ಮ ದೇಶದ ಭವ್ಯ ಪರಂಪರೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ವಿರುದ್ದವಾಗಿ ನಮ್ಮ ದೇಶದ ಪ್ರಧಾನಿ ಮನಮೋಹನ್‌ಸಿಂಗ್‌ರವರು ಅಮೇರಿಕಾದ ಜೊತೆ ವ್ಯೂಹಾತ್ಮಕ ಮೈತ್ರಿ ಮತ್ತು ಅಣು ಒಪ್ಪಂದ ಮಾಡಿಕೊಳ್ಳುವ ಮೂಲಕ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ ನಾಶ ಮಾಡಲು ಹೊರಟಿದ್ದಾರೆ. ದೇಶವನ್ನು ಮತ್ತೊಮ್ಮೆ ಗುಲಾಮಗಿರಿಗೆ ಒಳಪಡಿಸುತ್ತಿದ್ದಾರೆ. ಆದ್ದರಿಂದ ಭಗತ್‌ಸಿಂಗ್ ಹೇಳಿದಂತೆ 'ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾದರೆ ಜನರ ಸ್ಥಿತಿ ಹಾಗೆ ಉಳಿಯುತ್ತದೆ. ಪುರಾತನ ಶೋಷಕ ವ್ಯವಸ್ಥೆಯನ್ನು ನಾಶಪಡಿಸದೆ ಹೊಸ ಬದಲಾವಣೆ ತರಲು ಸಾಧ್ಯವಿಲ್ಲ' ಎಂಬ ಮಾತು ಮುಖ್ಯವಾಗುತ್ತದೆ. ಭಾರತದ ಸ್ವಾತಂತ್ರ್ಯವು ಶೋಷಕ ವ್ಯವಸ್ಥೆಗೆ ವಿರುದ್ದವಾಗಿ ಬರದೇ ದೇಶೀಯ ಭೂ ಮಾಲೀಕ, ಬಂಡವಾಳಿಗರಿಗೆ ಸ್ವಾತಂತ್ರ್ಯದ ವರ್ಗಾವಣೆ ಮಾಡಲ್ಪಟ್ಟಿದ್ದರಿಂದ ಇಂದು ದೇಶೀಯ ಬಂಡವಾಳಿಗರು ತಮ್ಮ ಹಿತಾಸಕ್ತಿಗಾಗಿ ದೇಶವನ್ನು ಒತ್ತೆ ಇಡಲು ಹೊರಟಿದ್ದಾರೆ.. ಆದ್ದರಿಂದ ಭಗತ್‌ಸಿಂಗ್ ಬಯಸಿದಂತೆ ಪುರಾತನ ಶೋಷಕ ವ್ಯವಸ್ಥೆಯನ್ನು ನಾಶಮಾಡಿ, ವ್ಯವಸ್ಥೆ ಬದಲಿಸದೆ ಹೋದರೆ ನಮ್ಮ ವಿಮೋಚನೆ ಸಾಧ್ಯವಿಲ್ಲ. ಆದ್ದರಿಂದ ಭಗತ್‌ಸಿಂಗ್ ವಿಚಾರ ಇಂದಿಗೂ ಎಂದಿಗೂ ದೇಶಪ್ರೇಮಿಗಳಿಗೆ ಅತಿ ಹೆಚ್ಚು ಪ್ರಸ್ತುತವಾಗಿದೆ. ○

ನಾನಾವತಿ ಆಯೋಗದ ವರದಿ....

ಪುಟ 7 ರಿಂದ

ಮಾತ್ರವಲ್ಲ ಆರ್.ಕೆ. ರಾಘವನ್ ಎಂಬ ಸಿಬಿಐನ ಮಾಜಿ ನಿರ್ದೇಶಕರ ನೇತೃತ್ವದ ಪೋಲಿಸ್ ತಂಡವೊಂದನ್ನು ನೇಮಿಸಿತು. ವರದಿಯ ಎರಡನೇ ಭಾಗವನ್ನು ನೀಡುವುದನ್ನು ವಿಳಂಬ ಮಾಡುವ ಮೂಲಕ ನಾನಾವತಿ ಆಯೋಗವು ನ್ಯಾಯಾಲಯದ ನಿರ್ದೇಶನವನ್ನು ನಿರ್ಲಕ್ಷ್ಯ ಮಾಡಿದೆ.

ನಾನಾವತಿ ಆಯೋಗದ ವರದಿಯು ಬಹಿರಂಗಗೊಂಡ ಸಮಯ ಕೂಡ ಹಲವು ಅನುಮಾನಗಳಿಗೆ ಕಾರಣವಾಗಿದೆ. ನವೆಂಬರ್ ತಿಂಗಳಿನಲ್ಲಿ ಹಲವು ವಿಧಾನಸಭಾ ಚುನಾವಣೆಗಳಿವೆ. ವರದಿಯ ಎರಡನೇ ಭಾಗವನ್ನು ಮುಂದಿನ ಲೋಕಸಭಾ ಚುನಾವಣೆಯ ಸಮಯಕ್ಕೆ ಬಿಡುಗಡೆ ಮಾಡಲು ಯೋಜಿಸಿದಂತೆ ಕಾಣುತ್ತದೆ.

ದೇಶವು ಭಯೋತ್ಪಾದಕರ ದಾಳಿಯಿಂದ ತತ್ತರಿಸುತ್ತಿರುವ ಪರಿಸ್ಥಿತಿಯಲ್ಲಿ ಅತ್ಯಂತ ಜವಾಬ್ದಾರಿಯುತ ವರ್ತನೆ ಅಗತ್ಯವಾಗಿದೆ. ನಾನಾವತಿ ಆಯೋಗದ ವರದಿಯ ಶೋಧನೆಗಳು ಏನೇ ಇರಲಿ ದೇಶದ ಸುಪ್ರೀಂಕೋರ್ಟ್ ನಿರ್ದೇಶನದಂತೆ ನಡೆಯುತ್ತಿರುವ ತನಿಖೆಯ ವರದಿಯನ್ನು ಕಾಯಬೇಕಿದೆ.

ನಾನಾವತಿ ಆಯೋಗದ ವರದಿ ಆಧರಿಸಿ ಮೋದಿ ತಾನು ನಿರಪರಾಧಿ ಎಂದು ಕೂಗು ಹಾಕುವ ಅಗತ್ಯವೇನು ಇಲ್ಲ. ಅದನ್ನು ಯಾರೂ ನಂಬುವುದೂ ಇಲ್ಲ. ಗೋಧ್ರಾ ಘಟನೆ ನಂತರದ ಭೀಕರ ಹತ್ಯಾಕಾಂಡಗಳಲ್ಲಿ ನರೇಂದ್ರಮೋದಿ ವಹಿಸಿದ ಹೀನಾಯ ಪಾತ್ರ ಏನು ಎಂದು ಯಾವುದೇ ಅನುಮಾನಕ್ಕೆ ಅವಕಾಶವಿಲ್ಲದಂತೆ ಸಿದ್ಧವಾಗಿದೆ. ಎಷ್ಟೋ ಪ್ರಕರಣಗಳಲ್ಲಿ ದೇಶದ ಕೋರ್ಟುಗಳು ಮೋದಿ ಸರ್ಕಾರಕ್ಕೆ ಹಾಕಿದ ಛೀಮಾರಿ ಮತ್ತು ಪ್ರಕರಣವನ್ನೇ ಗುಜರಾತ್‌ನ ಹೊರಗಿನ ಕೋರ್ಟಿಗೆ ವರ್ಗಾಯಿಸಿ ವಿಚಾರಣೆ ನಡೆಸಿದ್ದು ಹಾಗೂ ಹಲವು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿರುವುದು ಮೋದಿ ಮುಖಕ್ಕೆ ಬಳಿದ ಮಸಿಯೇ ಸರಿ.

ಜಗದಗಲ

ಮುರಳಿ

ಜಾಗತಿಕ ಹಿನ್ನಡೆ ಹಿಮ್ಮೆಟ್ಟಿಸಿದ ವಿಯೆಟ್ನಾಂ

ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಹಣದುಬ್ಬರ ಅತ್ಯಧಿಕ ಮಟ್ಟ ತಲುಪಿದೆ. ಇದರಿಂದ ಸಣ್ಣ ಸಮಾಜವಾದಿ ದೇಶವಾದ ವಿಯೆಟ್ನಾಂ ಭಾರಿ ಸಂಕಷ್ಟಕ್ಕೆ ಈಡಾಗಿದ್ದು, ಸಮಾಜವಾದಿ ಕಾರ್ಯಕ್ರಮ ಕುಸಿದು ಬೀಳಲಿದೆ ಎಂದು ಪಾಶ್ಚಿಮಾತ್ಯ ಮಾಧ್ಯಮಗಳು ಅತ್ಯಾನಂದದ ವರದಿಗಳನ್ನು ಪ್ರಕಟಿಸಿದ್ದವು. ಆದರೆ ವಿಯೆಟ್ನಾಂನಲ್ಲಿನ ವಾಸ್ತವ ಪರಿಸ್ಥಿತಿಯೇ ಬೇರೆ.

ವಿಯೆಟ್ನಾಂ ಸರ್ಕಾರ ಕೈಗೊಂಡ ಕ್ರಮಗಳು ಮತ್ತು ಅಲ್ಲಿನ ಜನತೆ ನೀಡಿದ ಬೆಂಬಲದಿಂದ ಹಣದುಬ್ಬರವನ್ನು ಯಶಸ್ವಿಯಾಗಿ ನಿಯಂತ್ರಿಸಲಾಗಿದೆ. ಬೇರೆ ದೇಶಗಳೂ ಹೀಗೆ ಮಾಡುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದೆ. ತೀರಾ ತುರ್ತಲ್ಲದ ಯೋಜನೆಗಳನ್ನು ಮುಂದೂಡಿದ ವಿಯೆಟ್ನಾಂ, ಆಡಳಿತ ವೆಚ್ಚವನ್ನು ಶೇ.10ರಷ್ಟು ಕಡಿಮೆಗೊಳಿಸುವುದರೊಂದಿಗೆ ಹಲವಾರು ಆರ್ಥಿಕ ಕ್ರಮಗಳನ್ನು ಕೈಗೊಂಡು ಹಣದುಬ್ಬರವನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ಕಳೆದ ಮಾರ್ಚ್‌ನಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ವಿಪರೀತವಾಗಿ ಏರಿಕೆ ಕಂಡಾಗ ವಿಯೆಟ್ನಾಂ ಅಕ್ಕಿ ರಫ್ತನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಬೆಲೆಗಳನ್ನು ಸಹಜ ಸ್ಥಿತಿಗೆ ಮರಳುವಂತೆ ಮಾಡಿತು ಎಂದು ಕ್ಯೂಬಾದಲ್ಲಿರುವ ವಿಯೆಟ್ನಾಂ ರಾಯಭಾರಿ ವುಚಿಕಾಂಗ್ ತಿಳಿಸಿದ್ದಾರೆ.ಅಭಿವೃದ್ಧಿಯು, ಕೃಷಿ ಆಧಾರಿತ ದೇಶವಾಗಿದ್ದ, ವಿಯೆಟ್ನಾಂ ಈಗ ಜಗತ್ತಿನಲ್ಲಿ ವೇಗವಾಗಿ ಮುಂದುವರೆಯುತ್ತಿರುವ ದೇಶಗಳ ಸಾಲಿನಲ್ಲಿ ನಿಂತಿದೆ. ಅಭಿವೃದ್ಧಿಯ ಹೆಸರಿನಲ್ಲಿ ತನ್ನ ದೇಶದ ಪ್ರಾಕೃತಿಕ ಸಂಪನ್ಮೂಲ ಮತ್ತು ಪರಿಸರದ ಕುರಿತ ಕಾಳಜಿ ಬಿಟ್ಟುಕೊಟ್ಟಿಲ್ಲ. ಇದಕ್ಕಿಂತಲೂ ಹೆಚ್ಚಾಗಿ ಅಲ್ಲಿನ ಕಮ್ಯುನಿಸ್ಟ್ ಸರ್ಕಾರ ಗ್ರಾಮೀಣ ಮತ್ತು ಪರ್ವತ ಪ್ರದೇಶಗಳಲ್ಲಿ ನೆಲೆಸಿರುವ ಜನತೆಯ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದ್ದರಿಂದ ಬಡತನ ಪ್ರಮಾಣ ಶೇ.12 ಕ್ಕೆ ಇಳಿದಿದೆ. ವಿಶ್ವ ಸಂಸ್ಥೆ ಸಹ ಇದನ್ನು ದೃಢೀಕರಿಸಿದೆ.

ಈಗಷ್ಟೆ ಅಭಿವೃದ್ಧಿಯತ್ತ ಮುನ್ನಡೆಯುತ್ತಿರುವ, ಸಮಾಜವಾದಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಹೋಚಿಮಿನ್‌ರಂತಹ ಕಮ್ಯೂನಿಸ್ಟ್ ಮುಖಂಡರ, ಪ್ರಾಮಾಣಿಕತೆ, ಭ್ರಷ್ಟಾಚಾರದ ವಿರುದ್ಧದ ಅವರ ಹೋರಾಟ, ಉದ್ಯಮಶೀಲತೆ, ಉಳಿತಾಯ ಮನೋಭಾವದಿಂದ ವಿಯೆಟ್ನಾಂ ಸಾಕಷ್ಟು ಲಾಭ ಪಡೆದಿದೆ.

ವಿಯೆಟ್ನಾಂನ 8.5 ಕೋಟಿ ಜನಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಯುವಜನತೆಯನ್ನು ಸೈದ್ಧಾಂತಿಕವಾಗಿ ಸನ್ನದ್ಧಗೊಳಿಸುವುದನ್ನು ಅಲ್ಲಿನ ಕಮ್ಯೂನಿಸ್ಟ್ ಪಕ್ಷ ಎಂದೂ ನಿರ್ಲಕ್ಷಿಸಿಲ್ಲ. ಈ ಯುವ ಜನರಲ್ಲಿ ಬಹುತೇಕ ಮಂದಿ 1975 ರಲ್ಲಿ ವಿಯೆಟ್ನಾಂ ಮರು ಏಕೀಕರಣಗೊಂಡ ನಂತರದ ಅವಧಿಯಲ್ಲಿ ಹುಟ್ಟಿದವರಾಗಿದ್ದಾರೆ. ಸರ್ಕಾರ ತನ್ನ ನೀತಿ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವಾಗ ಮಾನವ ಸಂಪನ್ಮೂಲದ ಅಭಿವೃದ್ಧಿ ಜೊತೆಗೆ ದೇಶ ಪ್ರೇಮನ್ನು ತುಂಬಿಸುತ್ತದೆ. ಕಮ್ಯೂನಿಸ್ಟ್ ಪಕ್ಷ ಮತ್ತು ಜನತೆಯ ನಡುವೆ ನಿಕಟ ಸಂಬಂಧವನ್ನು ಸೃಷ್ಟಿಸುವುದಕ್ಕೆ ಪಕ್ಷ ಹೆಚ್ಚು ಒತ್ತು ನೀಡಿದೆ. ಜನರೊಂದಿಗಿನ ನಿಕಟ ಸಂಬಂಧದ ಪ್ರಾಮುಖ್ಯತೆಯನ್ನು ಅರಿತುಕೊಂಡಿದೆ. ಹಾಗೆ ಮಾಡದಿದ್ದಲ್ಲಿ ಆಗಸ್ಟ್ ಕ್ರಾಂತಿಯ ನಂತರ ವಿಯೆಟ್ನಾಂ ಜನ ಮಾಡಿರುವ ಅಪಾರ ತ್ಯಾಗ ವ್ಯರ್ಥವಾಗುತ್ತದೆ ಎಂದು ವೂ ಚಿ ಕಾಂಗ್ ಹೇಳುತ್ತಾರೆ.

ನೂರು ವರ್ಷಕ್ಕಿಂತಲೂ ಹೆಚ್ಚು ಕಾಲದ ವಸಾಹತು ಆಡಳಿದ ಬಿಗಿಮುಷ್ಟಿಯಿಂದ ಹೊರಬಂದ ವಿಯೆಟ್ನಾಂ 1945ರ ಸೆಪ್ಟೆಂಬರ್ 2 ರಂದು ಸ್ವಾತಂತ್ರ್ಯ ಘೋಷಿಸಿಕೊಂಡಿತು. ಆದರೂ ಫ್ರಾನ್ಸ್ ಮತ್ತು ಅಮೆರಿಕಾ ಸಾಮ್ರಾಜ್ಯಶಾಹಿಗಳ ಅಡಿಯಲ್ಲಿ ಇನ್ನೂ 30 ವರ್ಷ ನಲುಗಿತು. ಅಂತಿಮವಾಗಿ 1975 ರ ಏಪ್ರಿಲ್ 30 ರಂದು ಆ ಮಹಾನ್‌ದಿನ ಬಂದಿತು. ಇದಕ್ಕಾಗಿ 40 ಲಕ್ಷ ಮಂದಿ ವಿಯೆಟ್ನಾಮಿಯರು ಪ್ರಾಣ ತ್ಯಾಗ ಮಾಡಿದರು.

1975 ರ ನಂತರ ವಿಯೆಟ್ನಾಂ ಐಕ್ಯ ದೇಶವಾಯಿತು. ತನ್ನ ಅಭಿವೃದ್ಧಿ ಸಾಧಿಸುವತ್ತ ಹೆಜ್ಜೆ ಇಟ್ಟಿತು. 1986ರಲ್ಲಿ ನಡೆದ ವಿಯೆಟ್ನಾಂನ ಆರನೇ ಕಮ್ಯೂನಿಸ್ಟ್ ಸಮ್ಮೇಳನದಲ್ಲಿ ಸಮಗ್ರ ನೀತಿಯನ್ನು ಅಂಗೀಕರಿಸಲಾಯಿತು. ಈ ನೀತಿ ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ತನ್ನ ಉತ್ಪಾದನಾ ಶಕ್ತಿಗಳನ್ನು ಸಮರ್ಥವಾಗಿ ಕ್ರಿಯಾತ್ಮಕಗೊಳಿಸಲಾಯಿತು. ವಿಶೇಷವಾಗಿ ಕೃಷಿ ಮತ್ತು ರಫ್ತು ಕ್ಷೇತ್ರದತ್ತ ಹೆಚ್ಚು ಒತ್ತು ನೀಡಿತು. ಇದರ ಪರಿಣಾಮವಾಗಿ 2007 ರಲ್ಲಿ ವಿಯೆಟ್ನಾಂ 4,800 ಕೋಟಿ ಡಾಲರ್ ರಫ್ತು ಸಾಧಿಸಿತು. ಒಂದು ಕಾಲದಲ್ಲಿ ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತಿದ್ದ ದೇಶ ಈಗ ವಾರ್ಷಿಕ 40 ಲಕ್ಷ ಟನ್ ಅಕ್ಕಿ ರಫ್ತು ಮಾಡುತ್ತದೆ. 1.6 ಕೋಟಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಅದರಲ್ಲಿ 13,63,000 ಮಂದಿ ಕಾಲೇಜು ವಿದ್ಯಾರ್ಥಿಗಳಾಗಿದ್ದಾರೆ. ಉಷ್ಣ ಪ್ರದೇಶವಾಗಿರುವ ವಿಯೆಟ್ನಾಂನಲ್ಲಿ ಆಗಿಂದಾಗ್ಗೆ ಎದುರಾಗುವ ಪ್ರಕೃತಿ ವಿಕೋಪಗಳು ಮತ್ತು ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಯೋಜನೆಗಳನ್ನು ರೂಪಿಸಲಾಗಿದೆ. ಆಸಿಯಾನ್ ಒಕ್ಕೂಟದ ಮತ್ತು ವಿಶ್ವ ಸಂಸ್ಥೆಯೊಂದಿಗೂ ನಿಕಟವಾಗಿ ಕೆಲಸ ಮಾಡುತ್ತಿದೆ. ವಿದೇಶಿ ಬಂಡವಾಳ ಹೂಡಿಕೆಯೂ ಹೆಚ್ಚಿನ ಪ್ರಮಾಣದಲ್ಲಿ ಹರಿದು ಬರುತ್ತಿದ್ದು,ಅಂತರರಾಷ್ಟ್ರೀಯ ಐಕ್ಯತೆ ರೂಪಿಸಲು ವಿಯೆಟ್ನಾಂನಲ್ಲಿ ಕ್ಯೂಬಾ ಪಾತ್ರ ಅತ್ಯಂತ ಗಣನೀಯವಾಗಿದೆ.

ಆರ್ಥಿಕ ಸುಧಾರಣೆಗಳೆಂಬ.....

ಪುಟ 7 ರಿಂದ

ವಿಮಾವಲಯವನ್ನು ಖಾಸಗಿಯವರಿಗೆ ತೆರೆಯುವಲ್ಲಿ ನಮ್ಮ ಹಣಕಾಸು ಮಂತ್ರಿಗಳು ಮತ್ತು ಆಗ ಹಣಕಾಸು ಕಾರ್ಯದರ್ಶಿಯಾಗಿದ್ದ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವ ಮೊಂಟೆಕ್ ಸಿಂಗ್ ಅಹ್ಲುವಾಲಿಯ ಅಮೆರಿಕನ್ ಲಾಬಿಗಳೊಂದಿಗೆ ಕೆಲಸ ಮಾಡಿದವರು.

2005ರಲ್ಲಿಯೆ ಎಡಪಕ್ಷಗಳು ಈ ವಿದೇಶಿ ಕಂಪನಿಗಳ 'ಖ್ಯಾತಿ'ಗಳನ್ನು ಯುಪಿಎ ಸರಕಾರದ ಗಮನಕ್ಕೆ ತಂದಿದ್ದವು. ಪ್ರಮುಖ ಪಾಶ್ಚಿಮಾತ್ಯ ಆರ್ಥಿಕ ಪತ್ರಿಕೆ 'ದಿ ಇಕನಮಿಸ್ಟ್' 2004ರಲ್ಲಿ ಈ ಎಐಜಿ 'ಲಾಭದ ಹೇಳಿಕೆಯನ್ನು ಮೆರುಗುಗೊಳಿಸುವುದು ಹೇಗೆ ಎಂದು ತೋರಿಸಿದ ವಿಶ್ವದ ಅತಿ ದೊಡ್ಡ ವಿಮಾ ಕಂಪನಿ' ಎಂದು ಹೇಳಿದ್ದನ್ನು ಯುಪಿಎ ಸರಕಾರದ ಗಮನಕ್ಕೆ ತರಲಾಗಿತ್ತು .

ಏನೀ 'ನವೀನತೆ'ಗಳು?

ಈಗ ಅಮೆರಿಕಾದ ದೊಡ್ಡ ಹಣಕಾಸು ಕಂಪನಿಗಳಿಗೆ, ಬ್ಯಾಂಕುಗಳ ದಿವಾಳಿಯನ್ನು ತಪ್ಪಿಸಲು ಅಮೆರಿಕನ್ ಸರಕಾರ ಸಾವಿರ-ಸಾವಿರ ಕೋಟಿ ಡಾಲರುಗಳನ್ನು ಸುರಿಯುತ್ತಿದೆ. ಅಂದರೆ ತಿಂದು ಕೊಬ್ಬಿದವರ, ಮಹಾಜೂಜುಕೋರರ ನಷ್ಟಗಳನ್ನು ತುಂಬಲು ಸಾಮಾನ್ಯ ತೆರಿಗೆದಾರರನ್ನು ಸುಲಿಯಲಾಗುತ್ತಿದೆ. ಇದಕ್ಕೆ ಜಗತ್ತಿನಾದ್ಯಂತ ಶೇರು ಮಾರುಕಟ್ಟೆಗಳು 'ಭಲೇ' ಎನ್ನುತ್ತಿವೆ. ಭಾರತದ ನವ-ಉದಾರವಾದೀ ವಲಯಗಳೂ ಚಿದಂಬರಂ ಹೇಳುವಂತೆ 'ನಿಯಂತ್ರಣ ನವೀನತೆಗಳಿಗಿಂತ ಒಂದು ಹೆಜ್ಜೆ ಮುಂದಿದ್ದರೆ' ಹಣಕಾಸು ಉದಾರೀಕರಣದಿಂದ ದೇಶಕ್ಕೇನೂ ತೊಂದರೆಯಾಗುವುದಿಲ್ಲ ಎಂದು ವಾದಿಸುತ್ತಾರೆ!

ಈ ನವೀನತೆಗಳಾದರೂ ಏನು? ಹೆಚ್ಚಿನ ದೇಶಗಳಲ್ಲಿ ದೇಶೀ ಬ್ಯಾಂಕುಗಳನ್ನು ಮತ್ತು ವಿದೇಶಿ ಬ್ಯಾಂಕುಗಳನ್ನು ಒಂದೇ ರೀತಿ ಕಾಣುವುದಿಲ್ಲ, ವಿದೇಶಿ ಬ್ಯಾಂಕುಗಳಿಗೆ ಹೆಚ್ಚಿನ ಹತೋಟಿಗಳಿರುತ್ತವೆ. ಆದರೆ ಇಲ್ಲಿ ವಿದೇಶಿ ಬ್ಯಾಂಕುಗಳಿಗೆ ಒಂದೇ ಪರವಾನಿಗೆ ನೀಡಿ ಅವುಗಳಿಗೆ ದೇಶೀ ಬ್ಯಾಂಕುಗಳ ಸ್ಥಾನಮಾನ ನೀಡಲಾಗುವುದು. ವಿದೇಶಿ ಬ್ಯಾಂಕುಗಳ ಬ್ಯಾಂಕಿಂಗೇತರ ಹಣಕಾಸು ಉಪಸಂಸ್ಥೆಗಳ ಮೇಲೆ ಯಾವುದೇ ಹತೋಟಿಗಳಿರುವುದಿಲ್ಲ. ಭಾರತೀಯ ಬ್ಯಾಂಕುಗಳಿಗೆ ಇರುವ ಕೃಷಿ ಸಾಲದ ಉಪಮಿತಿಯೂ ವಿದೇಶಿ ಬ್ಯಾಂಕುಗಳಿಗೆ ಅನ್ವಯವಾಗುವುದಿಲ್ಲ. ಇವು ಭಾರತದಲ್ಲಿ ಹಣಕಾಸು ವಲಯದಲ್ಲಿ ಬರಲಿರುವ ಕ್ರಮಗಳು ಎಂದು ಭಾರತೀಯ ರಿಸರ್ವ್ ಬ್ಯಾಂಕಿನ ಉಪಗವರ್ನರ್ ವಿ. ಲೀಲಾಧರ್ ಹೇಳಿದ್ದಾರೆ. ಅಂದರೆ ವಿದೇಶಿ ಬ್ಯಾಂಕುಗಳಿಗೆ ವಿಶೇಷ ಅನುಕೂಲ!

ಕಣ್ಣು ತೆರಸಲಿ

ಜತೆಗೆ ಪ್ರಧಾನ ಮಂತ್ರಿಗಳು ಮಾರ್ಚ್ 2006 ರಲ್ಲಿ ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆಯನ್ನು ತರಲಾಗುವುದು ಎಂದಿದ್ದು ಅವರ ಮುತುವರ್ಜಿಯಿಂದ ರಿಸರ್ವ ಬ್ಯಾಂಕ್ ತಾರಾಪೋರ್ ಸಮಿತಿ ನೇಮಿಸಿತ್ತು. ಈ ಸಮಿತಿ ಕೂಡಾ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸರಕಾರದ ಪಾಲನ್ನು 33 ಶೇ.ಕ್ಕೆ ಇಳಿಸಬೇಕು ಎಂದು ಶಿಫಾರಸು ಮಾಡಿದೆ. 1997-98ರಲ್ಲಿ ದಕ್ಷಿಣ-ಪೂರ್ವ ಏಶ್ಯಾವನ್ನು ಅಲುಗಾಡಿಸಿದ ಹಣಕಾಸು ಬಿಕ್ಕಟ್ಟು ಉಂಟಾದದ್ದು ಈ ಪೂರ್ಣ ಪರಿವರ್ತನೀಯತೆಯಿಂದ ಎಂದು ಎಲ್ಲರಿಗೂ ಗೊತ್ತಿದೆ. ಭಾರತದಲ್ಲಿ ಬಂಡವಾಳದ ಮೇಲೆ ಹತೋಟಿಗಳಿದ್ದರಿಂದ ಭಾರತವನ್ನು ಅದು ತಟ್ಟಲಿಲ್ಲ. ಆದರೆ ಈಗ 'ನಿಯಂತ್ರಣ ನವೀನತೆಗಳಿಗಿಂತ ಮುಂದಿರುವ' ರೀತಿ ಹೀಗಿದ್ದರೆ ವಿಮಾರಂಗದೊಳಗೆ ಎಐಜಿ ಯಂತಹ ಕಂಪನಿಗಳನ್ನು, ಬ್ಯಾಂಕ್ ವಲಯದಲ್ಲಿ ಸಿಟಿಬ್ಯಾಂಕ್ ಮತ್ತು ಇತರ ಬಹುರಾಷ್ಟ್ರೀಯ ಬ್ಯಾಂಕುಗಳನ್ನು ತರಲಾಗುತ್ತದೆ, ಜತೆಗೆ ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ ಬಂದರೆ ಭಾರತದ ಹಣಕಾಸು ವಲಯ ಸಂಪೂರ್ಣವಾಗಿ ನಿಯಂತ್ರಣ ಹೀನವಾಗುತ್ತದೆ. ಆಗ ಭಾರತದ ಆರ್ಥಿಕವೂ ಈಗ ಹೊಂದಿರುವ ರಕ್ಷಣೆಯನ್ನು ಕಳಕೊಳ್ಳುತ್ತದೆ.

ಅಮೆರಿಕಾದಂತೆ ನಿಯಂತ್ರಣಹೀನ, ಸುಲಿಗೆಕೋರ ಹಣಕಾಸು ವ್ಯವಸ್ಥೆಗೆ ಭಾರತವೂ ಒಳಗಾದರೆ ಸಾಮಾನ್ಯ ಜನರ ಉಳಿತಾಯಗಳ ಗತಿಯೇನು, ಅಥವಾ ದುಡಿಯುವ ಜನಗಳ ಪೆನ್ಶನ್ ಏನಾಗಬಹುದು ಅಥವಾ ಇದು ಹೇಗೆ ಸಾರ್ವಜನಿಕ ಹೂಡಿಕೆಯನ್ನು ತಟ್ಟಬಹುದು ಎಂಬ ಬಗ್ಗೆ ನಮ್ಮ ಹಣಕಾಸು ಮಂತ್ರಿಗಳಿಗಾಗಲೀ, ಆಳುವ ವ್ಯವಸ್ಥೆಗಾಗಲೀ ಆತಂಕವಿಲ್ಲ. ಆದರೆ ಇತರ ಎಲ್ಲಾ ಕಾಂಗ್ರೆಸ್ಸೇತರ, ಬಿಜೆಪಿಯೇತರ ರಾಜಕೀಯ ಪಕ್ಷಗಳು ಈ ಬಗ್ಗೆ ಯೋಚಿಸಬೇಕಾಗಿದೆ. ಸುಧಾರಣೆಗಳ ಹೆಸರಿನಲ್ಲಿ ಅಂಗೀಕರಿಸಿದ ದಾರಿಯನ್ನು, ಹಣಕಾಸು ಉದಾರೀಕರಣವನ್ನು ಕಣ್ಣು ಮುಚ್ಚಿ ಬೆಂಬಲಿಸಿದ ಎಲ್ಲಾ ರಾಜಕೀಯ ಪಕ್ಷಗಳ ಕಣ್ಣನ್ನು ಈ ಜಾಗತಿಕ ಹಣಕಾಸು ಬಿಕ್ಕಟ್ಟು ತೆರೆಸಬೇಕು. ಹಣಕಾಸು ವಲಯದ ಸುಧಾರಣೆಗಳು ಎಂಬ ಈ ಬಡಬಡಿಕೆಯನ್ನು ನಿಲ್ಲಿಸಬೇಕಾದ ಸಮಯ ಬಂದಿದೆ. ದೇಶದ ಹಣಕಾಸು ವಲಯವನ್ನು ನಮ್ಮ ಆರ್ಥಿಕವನ್ನು ಭದ್ರಪಡಿಸಿಕೊಳ್ಳುವ ಮತ್ತು ಒಂದು ತಾಳಿಕೆಯ ಅಭಿವೃದ್ಧಿಯನ್ನು ಸಾಧ್ಯವಾಗಿಸುವ ರೀತಿಯಲ್ಲಿ ಬಲಪಡಿಸುವ ಕ್ರಮಗಳನ್ನು ತರಲು ಗಂಭೀರ ಪ್ರಯತ್ನಗಳಾಗಲಿ ಎಂದು ಅವರು ಆಶಿಸಿದ್ದಾರೆ.

ಸಾಮ್ರಾಜ್ಯಶಾಹಿ ... ಭಯೋತ್ಪಾದನೆ.....

ಟ 2 ರಿಂದ

ಲ್ಲಿಯ ಸಿಡ್ರಾಕ್ಕೆ ಅಮೆರಿಕನ್ ನೌಕಾಪಡೆಯ 6 ಯ ವಾಹಿನಿ ಪ್ರವೇಶಿಸಿತು. ಇದು ಅತಿರೇಕದ ತಿಕ್ರಮಣ. ಅಲ್ಲಿಂದ ಲಿಬಿಯಾದ ಎರಡು ಮಾನಗಳನ್ನು ಹೊಡೆದುರುಳಿಸಲಾಯಿತು. ರ್ನಲ್ ಗಡ್ಡಾಫಿಯವರನ್ನು ಕೊಲ್ಲಲು ಒಳಸಂಚು ಹೂಡಲಾಯಿತು. ಆದರೆ, ಅದನ್ನು ಂದರ್ಭಿಕವಾಗಿ ಗುರುತಿಸಲ್ಪಟ್ಟು ಸಂಚನ್ನು ದಲಗೊಳಿಸಲಾಯಿತು.

82 - ಲೆಬನಾನ್:

800ರಷ್ಟಿದ್ದ ಅಮೆರಿಕಾದ ನೌಕಾಪಡೆ ಬನಾನ್‌ನಲ್ಲಿ 'ಮಧ್ಯಪ್ರಾಚ್ಯದಲ್ಲಿ ಶಾಂತಿ ಪಾಡಲು' ಪ್ರವೇಶ ಮಾಡಿತು. ಅದು ಬನಾನ್‌ನ ನಾಗರಿಕ ಪ್ರದೇಶಗಳ ಮೇಲೆ ಂಬೆಸೆಯಿತು. ಲೆಬನಾನ್‌ನಲ್ಲಿ ಕಾಲೂರಿ ರಿಯಾ ಮತ್ತು ಇತರ ಅರಬ್ ದೇಶಗಳ ಮೇಲೆ ಡಿತ ಸಾಧಿಸಲು ಈ ಅತಿಕ್ರಮಣವನ್ನು ಾಡಲಾಯಿತು.

1983 - 84 - ಗ್ರೆನೆಡಾ:

ಒಂದು ಲಕ್ಷ ಹತ್ತು ಸಾವಿರ ಜನಸಂಖ್ಯೆಯ ಳಪಟ್ಟ ದೇಶ ಗ್ರೆನೆಡಾದ ಮೇಲಂತೂ ಮೆರಿಕಾದ ಆಕ್ರಮಣ ಅತ್ಯಂತ ಹೀನಾಯವಾಗಿತ್ತು. ಡೀ ಜಗತ್ತೇ ಈ ಕಾರ್ಯಾಚರಣೆಯಿಂದ ಬೆಪ್ಪೆಗೊಂಡಿತು. ಅಮೆರಿಕಾದ ದುಷ್ಟಕೂಟ ಜೋ ಕೂಡಾ ಈ ಕೃತ್ಯದಲ್ಲಿ ಭಾಗವಹಿಸಲಿಲ್ಲ. ನ್ನಿಂದ ಅಮೆರಿಕಾ ನಿಕರಾಗುವಾದ ಮೇಲೆ ದಾಳಿ ಸಿತು.

1979 ರಿಂದಲೇ ನಿಕರಾಗುವದ ಮೇಲೆ ನಿರಂತರ ಳಿಗಳನ್ನು ಅಮೆರಿಕ ಮಾಡುತ್ತಲೇ ಇತ್ತು. ದಿಗೂ ಒಂದೂವರೆ ಮಿಲಿಯದಷ್ಟಿರುವ ಕರಾಗುವ' ದ ಜನತೆ ಪ್ರಾಣಪಣವಾಗಿ ದೇಶದ ಯುತ್ತತೆಯ ರಕ್ಷಣೆಗಾಗಿ ಹೋರಾಡುತ್ತಿದೆ. ರಾಗುವದ ಸರಹದ್ದಿನಲ್ಲಿರುವ 'ಹೊಂಡುರಾ' ದಲೂ ಈ ದಾಳಿ ನಡೆಯುತ್ತಾ ಇದೆ.

ಗ್ರೀಸ್‌ನಲ್ಲಿಯೂ ಬುಡಮೇಲು ಕೃತ್ಯಗಳನ್ನು ಸಲಾಯಿತು. 1985 - 86 ರಲ್ಲಿ ಅಮೆರಿಕಾ ರಿಯ ಹಿಡಿದವರಂತೆ ಲಿಬಿಯದ ಮೇಲೆ ಮನಃ ಹಾಯಿತು. ವಿಯನ್ನಾದಲ್ಲಿ ನಡೆದ ವಿಮಾನ ಂತಕ್ಕೂ ಲಿಬಿಯಾಕ್ಕೂ ಸಂಬಂಧ ಕಲ್ಪಿಸಿ ಮೆರಿಕಾದಲ್ಲಿರುವ ಲಿಬಿಯಾದ ಬ್ಯಾಂಕ್ ಂಟ್‌ಗಳನ್ನು ಮುಟ್ಟುಗೋಲು ಹಾಕಲಾಯಿತು. ದ ಮಾರ್ಚ್‌ನಲ್ಲಿ ಪುನಃ ಲಿಬಿಯಾದ ಾವಳಿಯಲ್ಲಿ ಆಕ್ರಮಣ ನಡೆಸಲಾಯಿತು. ಪ್ರಿಲ್ 15ರಂದು ಅಮೆರಿಕಾದ ಯುದ್ಧ ಮಾನಗಳು ಲಿಬಿಯಾದ ರಾಜಧಾನಿ ಪೋಲಿಯ ಮೇಲೆ ಬಾಂಬೆಸೆಯಿತು. ಈ ದಾಳಿ ಪೋಲಿಯದ ನಾಗರಿಕ ಪ್ರದೇಶಕ್ಕೆ ಅಪಾರ ನಿಯನ್ನುಂಟುಮಾಡಿತು.

ಹಲವಾರು ವರ್ಷಗಳಿಂದ ಅಮೆರಿಕಾವು ಘಾನಿಸ್ತಾನದಲ್ಲಿ ಅಘೋಷಿತ ಯುದ್ಧವನ್ನು ಸುತ್ತಿತ್ತು. 1929 ರಿಂದಲೇ ಅಮೆರಿಕಾದ ಲರುಗಳು ಪ್ರತಿಕ್ರಾಂತಿಕಾರಿಗಳಿಗೆ ಹರಿದು ತ್ತಿತ್ತು. 1985 ರಲ್ಲಿಯೇ ಯು.ಎಸ್. ಕಾಂಗ್ರೆಸ್ 0 ಮಿಲಿಯ ಡಾಲರುಗಳನ್ನು ಈ ಬಗ್ಗೆ ವಿನಿಯೋಗಿಸಿದೆ. ಈ ಬಂಡುಕೋರರು (1985ರ ಅಂಕಿ ಅಂಶ) 1914 ಶಾಲೆಗಳನ್ನು, 32 ಆಸ್ಪತ್ರೆಗಳನ್ನು, 11 ಆರೋಗ್ಯ ಕೇಂದ್ರಗಳನ್ನು, 906 ಸರಕಾರಿ ಸಂಘಗಳನ್ನು 14,000 ಕಿಲೋಮೀಟರುಗಳಷ್ಟು ಟೆಲಿಫೋನ್ ಮತ್ತು ವಿದ್ಯುತ್ ಲೈನುಗಳನ್ನು ನಾಶಪಡಿಸಿದ್ದಾರೆ. 25,000 ಅಫಘಾನರು ಪ್ರಾಣ ತೆತ್ತಿದ್ದಾರೆ.

ರಷ್ಯಾದ ಪತನದ ನಂತರ ಪ್ರತಿಕ್ರಾಂತಿಕಾರಿ ಇಸ್ಲಾಂ ಮೂಲಭೂತವಾದಿಗಳು ಅಮೆರಿಕಾದ ಬೆಂಬಲದಿಂದ ಚುನಾಯಿತ ಸರಕಾರವನ್ನು ಉರುಳಿಸಿ ಅಧಿಕಾರ ಪೀಠ ಏರಿದವು. (ಆದರೆ ಇಂದು ಇಸ್ಲಾಂ ಮೂಲಭೂತವಾದಿಗಳ ವಿರುದ್ಧ ಅಮೆರಿಕ ಜಾಗತಿಕ ಸಮರ ಸಾರಿದೆ! ಈ ನಿಟ್ಟಿನಲ್ಲಿ ಅಫಘಾನಿಸ್ತಾನವನ್ನು ನುಚ್ಚುನೂರು ಮಾಡಲಾಯಿತು. - ಈ ಎಲ್ಲಾ ವಿಚಾರಗಳನ್ನು ಇಲ್ಲಿ ಚರ್ಚಿಸಿಲ್ಲ) ಇಷ್ಟೊಂದು ಕುಖ್ಯಾತವಾದ, ನೀಚ, ನಿರ್ಲಜ್ಜ ಇತಿಹಾಸವುಳ್ಳ, ಮಾನವತೆಯ ಪರಮ ಶತ್ರು, ಅಮೆರಿಕಾವು ಇರಾಕನ್ನು ಧ್ವಂಸಮಾಡಿದ್ದು, ಮಿಲಿಯಗಟ್ಟಲೆ ಜನರನ್ನು ಕಗ್ಗೊಲೆ ಮಾಡಿದ್ದು ಇಂದು ನಿನ್ನೆಯ ವಿಚಾರ. ಹೀಗೆ ಈ ಪಟ್ಟಿ ಅಂದಿನಿಂದ ಇಂದಿನ ತನಕ ನಿರಂತರವಾಗಿ ಬೆಳೆಯುತ್ತಲೇ ಬಂದಿದೆ.

ಕೊನೆಯದಾಗಿ, ನಮ್ಮ ದೇಶದಲ್ಲಿ ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕವಾದಿ ಶಕ್ತಿಗಳಿಗೆ ಅಮೆರಿಕಾ ಎಂದಿನಿಂದಲೂ ಅಭಯಹಸ್ತ ಸಹಾಯ ಸಹಕಾರ ನೀಡುತ್ತಾ ಬಂದಿದೆ. ಹೀಗಾಗಿ ಕಾಶ್ಮೀರ, ಪಂಜಾಬ್, ಗೂರ್ಖಾಲ್ಯಾಂಡ್ ಸಮಸ್ಯೆಗಳು ಬಗೆಹರಿಸಲಾರದಷ್ಟು ಉಲ್ಬಣಿಸಿದ್ದವು. ಉಲ್ಬಣಿಸಿವೆ. ಪಂಜಾಬ್ ಮತ್ತು ಕಾಶ್ಮೀರದ ಭಯೋತ್ಪಾದಕರಿಗೆ ಸಹಾಯ ಮಾಡಲು ಹಾಗೂ ಅಫಘಾನಿಸ್ತಾನದಲ್ಲಿ ಅಘೋಷಿತ ಯುದ್ಧಕ್ಕಾಗಿ ಮಿಲಿಯಗಟ್ಟಲೆ ಡಾಲರ್ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಅಮೆರಿಕವು ಪಾಕಿಸ್ತಾನಕ್ಕೆ ನೀಡಿದೆ. ಎಲ್.ಟಿ.ಟಿ.ಇ. ಉಗ್ರಗಾಮಿಗಳೂ ಪಾಕಿಸ್ತಾನ ಮತ್ತು ಲೆಬನಾನ್‌ನಲ್ಲಿ ತರಬೇತಿ ಹೊಂದುತ್ತಿದ್ದಾರೆ. ಅತೀ ಎಡಪಂಥದವರಿಗೂ (ಉದಾ: ನಕ್ಸಲೈಟ್ಸ್), ಅತಿ ಬಲಪಂಥದವರಿಗೂ (ಉದಾ: ಸಂಘಪರಿವಾರ) ಅಮೆರಿಕಾವು ನಮ್ಮ ದೇಶದ ಸಾರ್ವಭೌಮತೆಯನ್ನು ದುರ್ಬಲಗೊಳಿಸಲು ಇನ್ನೊಂದು ಬಗೆಯಲ್ಲಿ ಕೆಲಸ ಮಾಡುತ್ತಿವೆ.

ಭಾರತದಲ್ಲಿಯೂ ಈ ಉಗ್ರಗಾಮಿ ಚಟುವಟಿಕೆಗಳಿಂದಾಗಿ ಸಾವಿರಾರು ಜೀವಗಳು ಬಲಿಯಾಗಿವೆ. ಪ್ರಧಾನಮಂತ್ರಿ ಇಂದಿರಾಗಾಂಧಿ, ಮಾಜಿ ಸೇನಾ ದಂಡನಾಯಕ ಎ.ಎಸ್.ವೈದ್ಯ, ಸಂತ ಲೋಂಗೋವಾಲ - ಮೊದಲಾದ ಅಮೂಲ್ಯ ಪ್ರಾಣಗಳು ನಾಶ ಹೊಂದಿವೆ. ಪೋಲಿಸ್ ಮಹಾನಿರ್ದೇಶಕ ರಿಬೆರೋ ಮೇಲೂ ಪ್ರಾಣಘಾತಕ ಆಕ್ರಮಣವಾಗಿತ್ತು. ಅಂದಿನ ವಿದೇಶ ಸಚಿವ ಹೆನ್ರಿ ಕಿಸಿಂಜರ್ ಎಂಬ ಧೂರ್ತನು, ಪಿನೋಸೆ, ಒಸಾಮ ರನ್ನು ತಯಾರು ಮಾಡಿದವನು. ಪ್ರಚೋದಿಸಿದವನು. ಅವರ ಮೂಲಕ ಆತ ಸ್ಥಳೀಯವಾಗಿ ಭಯ ಮತ್ತು ಭ್ರಷ್ಟಾಚಾರದ ವಾತಾವರಣವನ್ನು ಸೃಷ್ಟಿಸಿದ. ಆದರೆ 'ಸಪ್ಟೆಂಬರ್ 11'ರ ನಂತರ ಸಂದರ್ಭಗಳೇ ಬದಲಾಯಿತು.

ಅಮೆರಿಕಾದ ಬಲಪಂಥೀಯ ನೀತಿಗಳು ಜನಾಂಗವಾದದ ಒಂದು ಕುರೂಪಮುಖ. (ಬಲಪಂಥೀಯರಿಗೆ ಇಂದು ವಿಶೇಷ ನೈತಿಕ) ಅನೈತಿಕ ಅಧಿಕಾರ ದೊರಕಿದೆ. ಅವರ ಮೂಲ ಸ್ವಭಾವವಾದ ಪಕ್ಷಪಾತ ಮತ್ತು ಭೇದಭಾವ ನೀತಿಯನ್ನು ಅವರು ಯಾವ ಸದ್ದಿಲ್ಲದೆ ಮುಂದುವರಿಸುತ್ತಿದ್ದಾರೆ. ಪ್ರಭುತ್ವವು ಬಹುರಾಷ್ಟ್ರೀಯ ಕಂಪೆನಿಗಳ ಒತ್ತಡಗಳಿಗೆ ಮಣಿದಿದೆ. ಅವು ಎಷ್ಟೊಂದು ಪ್ರಭಾವಿಯಾಗಿವೆಯೆಂದರೆ ಹಣ ಮತ್ತು ಇನ್ನಿತರ ಹಣಕಾಸು ಸಂಸ್ಥೆಗಳನ್ನೂ ನಿಯಂತ್ರಿಸುತ್ತಿವೆ. ರಾಷ್ಟ್ರಪತಿ ಬುಶ್‌ನನ್ನು ಈ ನಿಗಮಗಳು ನಿಯಂತ್ರಿಸುತ್ತಿವೆ.

ಬ್ರಿಟಿಷ್ ಸಚಿವ ಜೆಕ್ ಸ್ಟ್ರಾ ಹೇಳುತ್ತಾನೆ: 'ಭಯೋತ್ಪಾದನೆಯನ್ನು ಎಂದಿಗೂ ಸಹಿಸಲಿಕ್ಕಾಗದು'. ಆದರೆ, 'ಭಯೋತ್ಪಾದಕ' ಏಕೆ ಹುಟ್ಟಿಕೊಳ್ಳುತ್ತಾನೆ? ಆ ಪರಿಸ್ಥಿತಿಗಳು ಯಾವುವು ಎಂಬುದಕ್ಕೆ ಮೇಲಿನ ವಿವರಣೆ ಸಾಕ್ಷಿ. ಕೋಟ್ಯಾಂತರ ಮುಸಲ್ಮಾನರು ಎಂದೂ ಭಯೋತ್ಪಾದನೆಯನ್ನು ಸಮರ್ಥಿಸಿದವರು. ಅಮೆರಿಕ ಮತ್ತು ಇಸ್ರೇಲ್ ಮೈತ್ರಿಯನ್ನು ಅವರು ಅನುಮಾನದಿಂದಲೇ ನೋಡುತ್ತಾರೆ. 1993ರ ಶಾಂತಿ ಒಪ್ಪಂದದ ಮೇರೆಗೆ ಅಮೇರಿಕಾ ಎರಡು ಲಕ್ಷ ಯಹೂದಿ ಆದಿವಾಸಿಗಳನ್ನು ವಶಪಡಿಸಿಕೊಂಡ ಫೆಲಿಸ್ತೇನ್ ಭೂಭಾಗದಲ್ಲಿ ಪುನರ್ ಸ್ಥಿತಿಗೆ ಅವಕಾಶ ಮಾಡಿಕೊಟ್ಟಿತು. ಅರಬ ಮುಸಲ್ಮಾನರಿಗೆ ಇಸ್ರೇಲ್ ಒಂದು ಶಾಪವೆಂಬುದು ಅಮೆರಿಕಕ್ಕೆ ತಿಳಿದಿಲ್ಲವೇ? ದಕ್ಷಿಣದ ಆಫ್ರಿಕಾದ ಕರಿಯರನ್ನು ನಿರಂತರ ಗಲ್ಲಿಗೇರಿಸುವುದು ಆತಂಕವಲ್ಲ! ಇಸ್ರೇಲ್ ನಡೆಸುವ ಭಯೋತ್ಪಾದನೆ ಮತ್ತು ನಿರಂತರ ನರವೇಧವೂ ಆತಂಕವಲ್ಲ!

ಓಸಾಮಾ ಬಿನ್ ಲಾಡೆನ್‌ಗೆ ನೈಜೀರಿಯಾದಿಂದ ಹಿಡಿದು ಇಂಡೋನೇಶಿಯಾದವರೆಗೆ ಮುಸಲ್ಮಾನರ ಸಮರ್ಥನೆ ದೊರಕಲು ಇದುವೇ ಕಾರಣ. ಅಲ್ಲದೆ, ಬಹುದೊಡ್ಡ ಸಂಖ್ಯೆಯಲ್ಲಿ ಮಧ್ಯಪೂರ್ವ ದೇಶಗಳಲ್ಲಿ ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಅಮೇರಿಕಾದ ಸೇನೆ ನೆಲೆಸಿರುವುದು ಯಾರನ್ನು ತಾನೆ ಕೆರಳಿಸುವುದಿಲ್ಲ. ಇದರ ಅರ್ಥ ಆತಂಕವಾದವನ್ನು ಖಂಡಿತವಾಗಿಯೂ ಸಮರ್ಥಿಸುವುದಲ್ಲ. ಯಾವ ಸಭ್ಯ ನಾಗರಿಕನೂ ಸಮರ್ಥಿಸಲಾರ. ಆದರೆ, ಇಸ್ರೇಲ್‌ಗೆ ನೀಡಲಾಗುತ್ತಿರುವ ಕುರುಡು ಸಮರ್ಥನೆ, ಇರಾಕ್, ಅಫ್‌ಘಾನಿಸ್ತಾನದಲ್ಲಿ ನಡೆಸಲಾದ ನರಮೇಧ - ಇವೆಲ್ಲಾ ಅಮೇರಿಕಾದ ಭಯಾನಕ, ಭಯೋತ್ಪಾದಕ ಹಿಂಸೆಗಳು ಮತ್ತೆ ಮತ್ತೆ ಪ್ರತಿಹಿಂಸೆಯನ್ನು ಹುಟ್ಟು ಹಾಕದಿರುತ್ತದೆಯೇ?

ಅಮೇರಿಕಾ ಇಡೀ ಅಂತಃರಾಷ್ಟ್ರೀಯ ಸಮುದಾಯವನ್ನೇ ಅಪಮಾನಕ್ಕೀಡು ಮಾಡಿದೆ. ಅಮೇರಿಕಾ ಹೊತ್ತಿ ಉರಿಯುವಾಗ ಫಿಲಿಸ್ತೀನ್ ಮಕ್ಕಳು ಚಪ್ಪಾಳೆ ತಟ್ಟುತ್ತಿದ್ದರು!

ಜಗತ್ತಿನ ಸಮಸ್ಯೆಯನ್ನು ದೂರ ಮಾಡುವ ಉಪಾಯ ಜನಾಂಗೀಯವಾದದ ಬಳಿಯೂ ಇಲ್ಲ; ಸೈನ್ಯ ಬಲದಲ್ಲೂ ಇಲ್ಲ. ಆತಂಕವಾದದೊಂದಿಗೆ ಹೋರಾಡಲು ಯುದ್ಧೋಪಾದಿಯಲ್ಲಿ ಹಸಿವು, ಬಡತನ ಮತ್ತು ಶೋಷಣೆಯ ವಿರುದ್ಧ ಹೋರಾಡಬೇಕಾಗಿದೆ. ಸಾಮಾಜಿಕ ನ್ಯಾಯಕ್ಕೆ ತಲೆಬಾಗಬೇಕಾಗಿದೆ.

O

ಪ್ರಕೃತಿ ವಿಕೋಪ

ಪುಟ 9 ರಿಂದ

ಅಮ್ಮನನ್ನು ಕಳೆದುಕೊಂಡಿದ್ದರಿಂದಾಗಿ ಜಾತಿ ಯಾವುದೆಂದು ಗೊತ್ತಾಗದ ಮಗುವನ್ನು ಸಾಲಿನಿಂದ ಹೊರದಬ್ಬಿ ಆಚೆ ನಿಲ್ಲಿಸುವ ಹೀನಾಯ ಘಟನೆಗಳೂ ಇಲ್ಲಿ ನಡೆಯುತ್ತವೆ. ಅಲ್ಲಿ ಅಮೇರಿಕಾದಲ್ಲಿ ಇಂಥದ್ದರ ಇನ್ನೊಂದು ರೂಪ ಎಂದರೆ ಕಪ್ಪು ಬಣ್ಣದ ಜನರು ಹೆಚ್ಚಾಗಿ ವಾಸಿಸುವ ಪ್ರದೇಶದಲ್ಲಿ ಏನಾದರೂ ಅನಾಹುತ ಆಗುವಂತಿದ್ದರೆ ಸರ್ಕಾರದ ಪರಿಹಾರದ ಕಾಳಜಿ ಅಷ್ಟಕ್ಕಷ್ಟೆ. ಇಂತಹ ಸಂದರ್ಭದಲ್ಲೂ ಅಮೇರಿಕಾದ ಅಧ್ಯಕ್ಷರು ರಜೆ ಪಡೆದು ತಮ್ಮ ಖಾಸಗಿ ವಿಹಾರ, ಮೋಜುಗಳಲ್ಲಿ ಮುಳುಗಿರುವುದೂ ಇದೆ.

ಇತ್ತೀಚಿನ ಕೆಲ ವರ್ಷಗಳ ಹಿಂದೆ ಅಮೇರಿಕಾದ ತೀರವನ್ನು ಅಪ್ಪಳಿಸಿದ ಕತ್ರಿನಾ ಚಂಡಮಾರುತಕ್ಕೆ ಸುಮಾರು 1000ಕ್ಕೂ ಹೆಚ್ಚು ಜನರು ಬಲಿಯಾದರು. ಅದರಲ್ಲಿ ಬಹುತೇಕ ಜನ ಕರಿಯರು ಎನ್ನುವುದು ಆಕಸ್ಮಿಕವಾಗಿರಲಿಲ್ಲ.

ಭಾರತದ ಪರಿಹಾರ ಶಿಬಿರಗಳ ಕತೆ ಹೇಳುವುದೇ ಬೇಡ. ಸಾಕಷ್ಟು ಆಹಾರ ಧಾನ್ಯ ಲಭ್ಯವಿಲ್ಲ. ಆಹಾರ ಪಡೆಯಲು ಕಾದಾಟ, ತಳ್ಳಾಟ, ನುಗ್ಗಾಟ ಎಂದಿನ ಲಕ್ಷಣ. ಬಲವಿದ್ದವರು ಎಲ್ಲವನ್ನೂ ಗೋರಿಕೊಳ್ಳುವುದು ಇದೆ. ಅಮಾನವೀಯ ಪರಿಸ್ಥಿತಿಯಲ್ಲಿ ಬಿಹಾರದ ಪರಿಹಾರ ಶಿಬಿರಗಳಲ್ಲಿ ಜನ ಕಾಲ ನೂಕಬೇಕಾಗಿದೆ.

ಮೊನ್ನೆ ಕ್ಯೂಬಾದಲ್ಲಿ ಬೀಸಿದ ಚಂಡಮಾರುತದಿಂದ ಕ್ಯೂಬಾದ ಸರಿ ಸುಮಾರು ಕಾಲು ಭಾಗದ ಜನರನ್ನು ಮನೆ ಬಿಡಿಸಿ ಸ್ಥಳಾಂತರಿಸಬೇಕಾಯ್ತು. ಆದರೂ ಪರಿಹಾರ ವ್ಯವಸ್ಥೆಗಳು ಅತ್ಯಂತ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿತ್ತು. ಏಕೆಂದರೆ ಸ್ಥಳಾಂತರಗೊಂಡ ಹೆಚ್ಚಿನವರಿಗೆ ಸುರಕ್ಷಿತ ಪ್ರದೇಶಗಳಲ್ಲಿರುವ ಸ್ನೇಹಿತರು, ಹಿತೈಷಿಗಳು ತಮ್ಮ ಮನೆಯಲ್ಲೇ ಜಾಗ ಒದಗಿಸಿದ್ದರು. ಉಳಿದವರಿಗೆ,ಸರ್ಕಾರಿ ಕಟ್ಟಡಗಳು ಮತ್ತಿತರ ಕಡೆ ವ್ಯವಸ್ಥೆಗಳು, ಅಂತೂ ಜನ ಸುರಕ್ಷಿತ. ಪರಿಹಾರ ಶಿಬಿರಗಳಲ್ಲಿ ಜನರು ಹಾಡುತ್ತಾ, ತಮಾಷೆ ಮಾಡುತ್ತಾ ಆರಾಮವಾಗಿ ಕಾಲ ಕಳೆಯುವವರಂತೆ. ಭಾರತದಲ್ಲಿ ಇಂತಹ ಚಿತ್ರಣವನ್ನು ಕಲ್ಪಿಸಿಕೊಳ್ಳಲಾರದರೂ ಸಾಧ್ಯವೇ?

ಅತ್ಯಲ್ಪ ಸಂಪನ್ಮೂಲಗಳ ಅತಿ ಪುಟ್ಟ ದ್ವೀಪವಾದ ಕ್ಯೂಬಾ ದೈತ್ಯ ಚಂಡ ಮಾರುತಕ್ಕೆ ಸೆಡ್ಡು ಹೊಡೆಯುವ ದಕ್ಷತೆ ಮೆರೆಯುವುದು ಸಾಧ್ಯವಾದರೆ ಬಲಾಢ್ಯ ಅಮೇರಿಕಾ 'ಮಹಾ' ಭಾರತಕ್ಕೆ ಅದು ಯಾಕೆ ಸಾಧ್ಯವಿಲ್ಲ?

ಯಾಕೆಂದರೆ ಭಾರತದಲ್ಲಾಗಲಿ, ಅಮೇರಿಕಾದಲ್ಲಾಗಲಿ ಸಮಾಜವಾದವಿಲ್ಲ. ಅದು ಇರುವುದು ಕ್ಯೂಬಾದಲ್ಲಿ. ಮಾನವೀಯತೆಯನ್ನು ವಾಸ್ತವಿಕ ಜಗತ್ತಿನಲ್ಲಿ ಸಾಕಾರಗೊಳಿಸುವ ಅತ್ಯಂತ ಜೀವ ಪರ ಸಿದ್ಧಾಂತ ಮತ್ತು ವ್ಯವಸ್ಥೆ ಸಮಾಜವಾದ ಅನ್ನುವುದಕ್ಕೆ ಇದಕ್ಕಿಂತ ಇನ್ನೇನು ಸಾಕ್ಷಿಬೇಕು. **ಯಾಕಂತ ಹೇಳಿ** ಅಮೇರಿಕಾದಲ್ಲಿ ಸರ್ಕಾರ ಚಂಡಮಾರುತ ಮುಂತಾದ ಪ್ರಕೃತಿ ವಿಕೋಪದ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು ಎಂದು ಒತ್ತಾಯಿಸುವುದರಲ್ಲಿ ಅಲ್ಲಿನ ವಿಮಾ ಕಂಪನಿಗಳು ಮುಂಚೂಣಿಯಲ್ಲಿರುತ್ತವಂತೆ. ಯಾಕೆಂತ ನೀವೇ ಹೇಳಿ?



ಮನುಷ್ಯರನ್ನು ಮೀರಿಸುವ ಪ್ರಾಣಿಗಳು – ಸಿನಿಮಾ ಎಂಬ ತಮಾಷಾ

ಒಮ್ಮೆ ಕನ್ನಡದ ಜನಪ್ರಿಯ ನಾಯಕಿಯೊಬ್ಬರು 'ನನ್ನ ಜೊತೆ ಒಂದು ಕೋತಿ ಹೀರೋ ಆಗಿ ನಟಿಸಿದರೂ ಆ ಚಿತ್ರ ಯಶಸ್ವಿಯಾಗುತ್ತದೆ.' ಅನ್ನೋಥರದ ಮಾತನಾಡಿ ದೊಡ್ಡ ವಿವಾದವಾಗಿತ್ತು.

ಅದೇನಾದರೂ ಇರಲಿ. ಅದು ಮನುಷ್ಯರ ಬಗೆಗಿನ ಮಾತಾಯಿತು. ನಿಜವಾಗಿಯೂ ಕೋತಿ ಮತ್ತು ನಾಯಿ, ಹಾವು, ಆನೆ, ಕುದುರೆ ಇನ್ನಿತರ ಹಲವಾರು ಪ್ರಾಣಿಗಳನ್ನು ಚಲನಚಿತ್ರಗಳಲ್ಲಿ ಯಾವ ರೀತಿ ತೋರಿಸಲಾಗುತ್ತಿದೆ ಎನ್ನುವುದು ಬಹಳ ಸ್ವಾರಸ್ಯಕರವಾದ ವಿಷಯವಾಗಿದೆ.

ಸಾಕು ಪ್ರಾಣಿಗಳಲ್ಲಿ ಬಹುಶಃ ನಾಯಿಯೇ ಮನುಷ್ಯ ಭಾವನೆಗಳನ್ನು ಒಂದಷ್ಟು ಅರ್ಥ ಮಾಡಿಕೊಳ್ಳುವ- ಮನಸ್ಥಿತಿಯನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ವರ್ತಿಸುವ ಚಾತುರ್ಯ ಹೊಂದಿರುವುದು. ನಾಯಿಗೆ ಸಹ ಹಲವು ಮಿತಿಗಳಿವೆ. ನಮ್ಮ ಸಿನಿಮಾಗಳ ಹೀರೋಗಳು ಹತ್ತಾರು ನೂರಾರು ಜನರ ಜೊತೆಯಲ್ಲಿ ಹೊಡೆದಾಡಿ ಜಯಿಸಿ ಬರುವಂತೆ ಹತ್ತೆಂಟು ಬಗೆಯ ಅತಿಮಾನುಷ ಕೌಶಲ್ಯ ಪ್ರದರ್ಶಿಸುವಂತೆ ಪ್ರಾಣಿಗಳಿಗೂ ಸಹ ಅವುಗಳಿಗಿಲ್ಲದ, ಸಾಧ್ಯವಿಲ್ಲದ ಏನೇನೋ ಸಾಮರ್ಥ್ಯವನ್ನು ಆರೋಪಿಸಿದ ಚಲನಚಿತ್ರಗಳು ಸಾಕಷ್ಟು ಬಂದಿವೆ.

ಒಂದು ಮಕ್ಕಳು ತಂಡ ದುಷ್ಟ ವಿಲನ್‌ಗಳ ಕೂಟವನ್ನು ಸದೆಬಡಿಯಲು ತೀರ್ಮಾನಿಸಿ ಹೊರಟರೆ ಮಕ್ಕಳ ಇಡೀ ಯೋಜನೆಯನ್ನು ಗ್ರಹಿಸಿಕೊಂಡಂತೆ ಕೋತಿ, ನಾಯಿ ಹಾವುಗಳು ಮಕ್ಕಳಿಗಿಂತ ಮೊದಲು ದುಷ್ಟರ ಗ್ಯಾಂಗ್ ಇರುವ ಕಡೆಗೆ ಓಟ ಕೀಳುತ್ತವೆ.

ಚಿತ್ರದ ನಾಯಕಿಗೆ ಮದುವೆ, ಮದುವೆ ಗಂಡು ಕೇಡಿಗ. ಅದು ಆಕೆಗೆ ಗೊತ್ತಿಲ್ಲ, ಆಗ ಆಕೆ ಸಾಕಿದ ಹಾವು ಗಂಡು ಕಟ್ಟಬೇಕಾದ ತಾಳಿಯನ್ನು ಎತ್ತಿಕೊಂಡು ದೂರ ಹೋಗಿ ಬಿಡುವುದು. ಕೇಡಿಗಳಿಂದ ಬಡಿಸಿಕೊಂಡು ಪ್ರಜ್ಞೆ ತಪ್ಪಿ ಬಿದ್ದ ನಾಯಕನನ್ನು ಕುದುರೆಯೊಂದು ತಾನೇ ತನ್ನ ಹೆಗಲ ಮೇಲೆಕ್ಕೆರಿಸಿಕೊಂಡು ಹೊತ್ತುಕೊಂಡು ಮನೆಗೆ ತರುವುದು, ನಾಯಕ, ನಾಯಕಿಯರ ಪ್ರೀತಿ, ಪ್ರೇಮದ ಸಲ್ಲಾಪ ಅಗತ್ಯವಾದ ಸಹಕಾರಗಳನ್ನೆಲ್ಲಾ ನೀಡುವುದು.



ಕೇಡಿಗ ಇನ್ನೇನು ನಾಯಕಿಯ ಮೇಲೆ ಅತ್ಯಾಚಾರ ನಡೆಸಬೇಕು. ಥೇಟ್ ನಾಯಕನಂತೆ ಹಾರಿ ಬಂದು ನಾಯಿಯು ಕೇಡಿಯನ್ನು ಅಟ್ಟಾಡಿಸುವುದು. ಅರೆ ನಗ್ನ ಸ್ಥಿತಿಯಲ್ಲಿರುವ ನಾಯಕಿಗೆ ಬಟ್ಟೆಯನ್ನು ಹೊತ್ತುಕೊಂಡು ಬಂದು ಕೊಡುವುದು.

ಫೈಟಿಂಗ್ ಕೌಶಲ್ಯ

ಸಿನಿಮಾದ ಹೀರೋ ಕೂಡ ನಾಚುವಂತೆ ವಿಲನ್‌ಗಳ ತಂಡದೊಂದಿಗೆ ಆನೆ, ಕುದುರೆಗಳು ಫೈಟಿಂಗ್ ಮಾಡುವುದಂತೂ ಬಹಳಷ್ಟು ಸಿನಿಮಾಗಳಲ್ಲಿ ಬಂದು ಹೋಗಿದೆ. ನಾಯಿಯೂ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ನಾಯಕ ಅಥವಾ ನಾಯಕಿಯ ಪರವಾಗಿ ಕೇಡಿಗರನ್ನು ಕಚ್ಚಿಕೊಲ್ಲುವುದರಲ್ಲಿ ಹಾವಿನದು ಎತ್ತಿದ(ಹೆಡೆ) ಕೈ.

ಸೇಡು ಸೇಡು..

ಸೇಡು ಚಲನಚಿತ್ರಗಳ ಖಾಯಂ ಸೂತ್ರ. ಅಪ್ಪನನ್ನೋ, ಅಮ್ಮನನ್ನೋ, ಅಥವಾ ಹೆಂಡತಿಯನ್ನೋ ಕೊಂದದ್ದಕ್ಕಾಗಿ ಹೀರೋ ಸೇಡು ತೀರಿಸಿಕೊಳ್ಳುವ ಸವಕಲು ಚಿತ್ರಗಳ ಪಟ್ಟಿ ಬಲು ದೊಡ್ಡದು ಎಂಬುದು ನಮಗೆಲ್ಲಾ ಗೊತ್ತಿರುವುದಂಥದ್ದೇ.

ಇದು ಸಾಲದು ಅಂತ ಹೀರೋಗಳನ್ನು ವಿಲನ್‌ಗಳು ಕೊಂದ ಮೇಲೆ ಹೀರೋನನ್ನು ಕ್ಷಣ ಕ್ಷಣಕ್ಕೂ ನೆನಪಿಸಿಕೊಳ್ಳುತ್ತಾ ಕಣ್ಣೀರು ಸುರಿಸುತ್ತಾ ಒಬ್ಬೊಬ್ಬರಾಗಿ ವಿಲನ್‌ಗಳನ್ನು ಬೆನ್ನಟ್ಟಿ ಬಗೆ ಬಗೆಯ ತಂತ್ರ ರೂಪಿಸಿ ಅವರನ್ನು ಕೊಂದು ಸೇಡು ತೀರಿಸಿಕೊಳ್ಳುವ ನಾಯಿಯನ್ನು ನಾವು ಸಿನಿಮಾಗಳಲ್ಲಿಯೇ ನೋಡಬೇಕು.

ಕೆಲವೊಮ್ಮೆ ಒಂದೊಂದು ಸಿನಿಮಾಗಳಲ್ಲಿ ಸಾಕು ಪ್ರಾಣಿಗಳ ಹಿಂಡೇ ಇರುತ್ತದೆ. ನಾಗ, ಕಾಳ, ಭೈರವ ಮುಂತಾಗಿ, ವಿಲನ್ ತಂಡವನ್ನು ಸದೆ ಬಡಿಯಲು ಹೊರಟ ಇವುಗಳ ನಡುವೆ ಮನುಷ್ಯರಿಗಿಂತ ಹೆಚ್ಚು ಸಹಕಾರ, ಅನ್ಯೋನ್ಯತೆ. ಹೊಳೆ ದಾಟಬೇಕಾದರೆ ನಾಯಿ, ಹಾವನ್ನು ಬೆನ್ನಮೇಲೆ ಕೂರಿಸಿ ಕೊಳ್ಳುತ್ತದೆ. ಹೀರೋ ಕಡೆಗೆ ಗನ್ ಗುರಿ ಇಟ್ಟಿರುವ ಕೇಡಿಗಿನ ಕಾಲನ್ನು ಹಾವು ಕಚ್ಚಿದರೆ, ಮತ್ತೊಬ್ಬನ ಕೈಯಲ್ಲಿರುವ ಗನ್ ಅನ್ನು ಕೋತಿ ಹಾರಿಸಿಕೊಂಡು ಹೋಗುತ್ತದೆ., ಅಪಹರಿಸಿ ಬಚ್ಚಿಡಲಾಗಿರುವ ಹೀರೋ ಅಮ್ಮ ಪ್ರಿಯತಮೆ / ಹೆಂಡತಿ, ಮಕ್ಕಳು ಎಲ್ಲಿದ್ದಾರೆ ಅಂತ ಹಲವಾರು ಸಾರಿ ಪತ್ತೆ ಹಚ್ಚುವುದು ನಾಯಿ, ಹಾವು ಕೋತಿಯಂತಹ ಪ್ರಾಣಿಗಳೇ. ನಿಜವಾಗಿ ನೋಡಿದರೆ ಹಾವಿಗೆ ಕಿವಿಯೇ ಇಲ್ಲ. ಒಮ್ಮೆ ನೋಡಿದ ಮನುಷ್ಯನನ್ನು ಗುರುತಿಟ್ಟುಕೊಳ್ಳುವಷ್ಟು ಸ್ಮರಣ ಶಕ್ತಿಯೂ ಇಲ್ಲ. ಮದುವೆ ಎಂದರೇನು? ತಾಳಿ ಎಂದರೇನೆಂದು ಹಾವಿಗೇನು ಗೊತ್ತು. ತಾಳಿ ಕದ್ದುಕೊಂಡು ಹೋಗಿ ಮದುವೆ ತಪ್ಪಿಸಲು ಯತ್ನಿಸುವ ಹಾವೊಂದು ಎಲ್ಲಾದರೂ ಜಗದಲ್ಲಿ ಉಂಟೇ?

ಒಂದು ಹಾಸ್ಯ ಸನ್ನಿವೇಶದಲ್ಲಿಯೋ ಅಥವಾ ಮಕ್ಕಳ ಕಲ್ಪನಾ ಶಕ್ತಿಯನ್ನು ಹೆಚ್ಚಿಸುವಂತಹ ಮನರಂಜನಾತ್ಮಕ ಕತೆಗಳಲ್ಲಿ ಪ್ರಾಣಿಗಳ ಸಾಮರ್ಥ್ಯವನ್ನು ಸ್ವಲ್ಪ ಹೆಚ್ಚಿಸಿ, ಉತ್ಪ್ರೇಕ್ಷಿಸಿ ಬಳಸಿಕೊಂಡಿದ್ದಲ್ಲಿ ಅದನ್ನು ಒಪ್ಪಬಹುದೇನೋ. ನಾಯಕ ಸಾಕಿರುವ ಇಲಿಗಳು, ನಾಯಕನನ್ನು ಕೊಂದ ವಿಲನ್‌ಗಳ ವಿರುದ್ಧ ಸೇಡು ತೀರಿಸಿಕೊಳ್ಳುವ ಕತೆ ಹೆಣೆದು ಸಿನಿಮಾ ತೆಗೆದು ನಮಗೆ ತೋರಿಸಿದರೆ ಅದನ್ನು ಸಹಿಸಿಕೊಳ್ಳುವುದಾದರೂ ಹೇಗೆ?

ಇಂಥ -ಕತೆಯ ಒಂದು ಸಿನಿಮಾ ಸಹ ಕನ್ನಡದಲ್ಲಿ ಬಂದು ಹೋಗಿದೆಯಂತೆ. ಪ್ರಭಾಕರ್ (ಟೈಗರ್) ಒಬ್ಬ ವಿಜ್ಞಾನಿ. ದುಷ್ಟರ ಕೂಟ ಅವನನ್ನು ಕೊಲ್ಲುತ್ತದೆ. ಆ ವಿಜ್ಞಾನಿ ಪ್ರೀತಿಯಿಂದ ಸಾಕಿದ ಇಲಿಗಳು ಅದನ್ನು ನೋಡುತ್ತವೆ. ಕೊಲೆಗಡುಕರ ವಿರುದ್ಧ ಸೇಡು ತೀರಿಸಿಕೊಳ್ಳಲು ಅವರನ್ನು ಕೊಲ್ಲುತ್ತವೆ!! ಏನು ಅಮೋಘ ಕತೆ.

ಇಂತಹ ಸಿನಿಮಾಗಳಿಂದ ಯಾವುದರೂ ಪ್ರಾಣಿಗಳೇ ಪ್ರೇಕ್ಷಕರನ್ನು ಯಾಕೆ ಕಾಪಾಡುವುದಿಲ್ಲವೋ? ○



ಚೀನಾದ ಟೈಕೋನಾಟ್‌ಗಳಿಂದ ಗಗನಯಾನ ಆರಂಭ

ಈ ವಾರ ಚೀನಾದ 'ಲಾಂಗ್‌ಮಾರ್ಚ್ 2- ಎಫ್' ಎಂಬ ರಾಕೆಟ್ 'ಷೆಂಜೋ-7 ಹೆಸರಿನ ಗಗನನೌಕೆಯನ್ನು ಯಶಸ್ವಿಯಾಗಿ ಗಗನಕ್ಕೆ ಹೊತ್ತೊಯ್ದಿದೆ. ಪ್ರಸ್ತುತ ಗಗನನೌಕೆಯಲ್ಲಿ ಮೂವರು ಚೀನೀ ಗಗನಯಾತ್ರಿಗಳಿದ್ದು ಅವರಲ್ಲೊಬ್ಬರು, ಗಗನನೌಕೆಯು ಭೂಮಿಯಿಂದ ಸುಮಾರು 343 ಕಿ.ಮೀ. ಎತ್ತರದಲ್ಲಿ ಭೂಮಿಯ ಸುತ್ತಲು ಪ್ರದಕ್ಷಿಣೆ ಮಾಡುವಾಗ, ಗಗನನೌಕೆಯಿಂದ ಹೊರಬಂದು ನಡೆದಾಡುವುದು ವಿಶೇಷ. ಇದರಿಂದಾಗಿ ಗಗನನೌಕೆಯನ್ನು ಯಶಸ್ವಿಯಾಗಿ ಉಡಾಯಿಸಿರುವ ವಿಶ್ವದ ಮೂರನೇ ರಾಷ್ಟ್ರವಾಗಿ ಚೀನಾ ಸೇರ್ಪಡೆಯಾಗಿದೆ. ಇದು ಚೀನಾದ ಪ್ರಥಮ ಗಗನಯಾತ್ರೆಯಾಗಿದ್ದು, ಗಗನಯಾನಿಗಳನ್ನು ಹೊತ್ತ ಚೀನಾದ ಮೂರನೇ ಉಡಾವಣೆಯಾಗಿದೆ. ಈ ಹಿಂದೆ ಚೀನಾ 2003 ಮತ್ತು 2005ರಲ್ಲಿ ಗಗನನೌಕೆಗಳನ್ನು ಯಶಸ್ವಿಯಾಗಿ ಕಳುಹಿಸಿತ್ತು.

ಷೆಂಜೋ - 7 ಗಗನ ನೌಕೆಯ ಚಟುವಟಿಕೆಗಳು: ಗಗನನೌಕೆಯ ಈಗಾಗಲೇ ಭೂಮಿಯಿಂದ ಉದ್ದೇಶಿತ 343 ಕಿ.ಮೀ ದೂರದಲ್ಲಿರುವ ನಿರ್ದಿಷ್ಟ ಸ್ಥಾನವನ್ನು ತಲುಪಿದೆ. ಅದು ಭೂಮಿಯ ಸುತ್ತಲೂ 3 ಪ್ರದಕ್ಷಿಣೆಗಳನ್ನು ಹಾಕುವ ಸಂದರ್ಭದಲ್ಲಿ, ಗಗನನೌಕೆಯೊಳಗಿಂದ ಗಗನಯಾನಿ ಯೊಬ್ಬರು ಹೊರಬಂದು ನೌಕೆಯ ಹೊರಭಾಗದಲ್ಲಿ ಜೋಡಿಸಿರುವ ಪ್ರಯೋಗಾರ್ಥ ಮಾಡ್ಯೂಲ್‌ಗಳನ್ನು ತೆಗೆದುಕೊಳ್ಳುವರು. ಅದೇ ಸಮಯದಲ್ಲಿ ಮಾನಿಟರಿಂಗ್ ಉಪಗ್ರಹವೊಂದನ್ನು ಬಿಡುಗಡೆ ಮಾಡಲಾಗುವುದು. ಹೀಗೆ 'ಟಿಯಾನ್‌ಲಿಯನ್-1' ಹೆಸರಿನ ಉಪಗ್ರಹವು ಬಿತ್ತರಿಸುವ ಚಿತ್ರಣವನ್ನು ಚೀನಾದಲ್ಲಿರುವ ಉಪಗ್ರಹ ನಿಯಂತ್ರಣ ಕೇಂದ್ರವು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದು.

ಗಗನನೌಕೆಯಲ್ಲಿ ಕಳುಹಿಸಿರುವ ಕೆಲವು ಉಪಕರಣಗಳನ್ನು ಭೂಮಿಯಲ್ಲಿ ಪರೀಕ್ಷಿಸಲಾಗದಿದ್ದರಿಂದ, ಗಗನನೌಕೆಯ ಪ್ರಯಾಣ ಸಮಯದಲ್ಲಿ ಪ್ರಯೋಗಕ್ಕೆ ಒಳಪಡಿಸಲಾಗುತ್ತದೆ. ಹಾಗಾಗಿ ಟೈಕೋನಾಟ್‌ಗಳ ಸಾಮರ್ಥ್ಯ ಮತ್ತು ಅವರು ನಡೆಸುವ ಗುಣಮಟ್ಟದ ಪ್ರಯೋಗಗಳ ಆಧಾರದ ಮೇಲೆ ಫಲಿತಾಂಶಗಳು ದೊರೆಯುತ್ತವೆಂದು ಚೀನಾದ ಉಪಗ್ರಹ ನಿಯಂತ್ರಣ ಮುಖ್ಯಸ್ಥರು ಹೇಳುತ್ತಾರೆ. ಚೀನಾ ಭಾಷೆಯಲ್ಲಿ ಟೈಕೋನಾಟ್‌ಗಳೆಂದರೆ ಗಗನಯಾನಿಗಳೆಂದು ಅರ್ಥ. ಗಗನಯಾನಿಗಳನ್ನು ಅಮೇರಿಕಾ 'ಆಸ್ಟ್ರೋನಾಟ್' ಗಳೆಂದು ಕರೆದರೆ ರಷ್ಯಾ 'ಕಾಸ್ಮೋನಾಟ್' ಗಳೆಂದು ಕರೆಯಿತು.

ಗಗನಯಾನಿಗಳ ವಸ್ತ್ರಾಭರಣ: ಗಗನಯಾನಿಗಳಿಗೆ ಒದಗಿಸಿರುವ ವಸ್ತ್ರಗಳನ್ನು ರಕ್ಷಾ ಕವಚಗಳೆಂದೇ ಹೇಳಬಹುದು. ಈ ವಸ್ತ್ರಗಳು 10 ಪದರಗಳನ್ನು ಹೊಂದಿದ್ದು, 120 ಕೆ.ಜಿ.ತೂಕವಿದೆ. ಇದನ್ನು ಧರಿಸಲು ಸುಮಾರು 15 ಗಂಟೆಗಳ ಸಮಯ ಅವಶ್ಯ! ಇದರ ತಯಾರಿಕೆಗಾಗಿ ಸುಮಾರು 44 ಲಕ್ಷ ಡಾಲರ್ ವ್ಯಯಿಸಿರುವ ಚೀನಾ, 4 ವರ್ಷ ಕಾಲ ತೆಗೆದುಕೊಂಡಿದೆ. ಅಲ್ಲದೆ, ರಷ್ಯಾ ಕೂಡ 3 ಆರ್ಲಾನ್ ಸೂಟ್ಸ್, 2 ಕಡಿಮೆ ಒತ್ತಡದ ತರಬೇತು ಉಡುಪುಗಳು, 4 ಸೆಟ್ ಈಜುಡುಪುಗಳು, 4 ಸೆಟ್ ನೌಕೆಯೊಳಗೆ ಧರಿಸುವ ಉಡುಪುಗಳನ್ನು ಪೂರೈಸಿದೆ.

ಚೀನಾದ ವಿಜ್ಞಾನ-ತಂತ್ರಜ್ಞಾನದ ಮುನ್ನಗೆತ: 'ಷೆಂಜೋ-7 ಯಶಸ್ವಿ ಉಡಾವಣೆಯು ಚೀನಾದ ವಿಜ್ಞಾನ-ತಂತ್ರಜ್ಞಾನ ಅಭಿವೃದ್ಧಿಯ ಮಹತ್ತರ ಸಾಧನೆಗೆ ಉದಾಹರಣೆಯಷ್ಟೆ. ಇದೊಂದು ಮಹತ್ತರ ಹೆಜ್ಜೆಯಾಗಿದ್ದು, ಮುಂದಿನ ದಿನಗಳಲ್ಲಿ ಚೀನಾವು ಗಗನದಲ್ಲಿ ಗಗನ ಪ್ರಯೋಗಾಲ ಮತ್ತು ಗಗನ ನಿಲ್ದಾಣಗಳನ್ನು ನಿರ್ಮಿಸಲಿದೆ. ○

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH